ಪ್ರಿಸಮ್ ವಿಜ್ಞಾನ ಮಾಲಿಕೆ - 9

ಕಾಗೆಯ ಕಾಯಕ



ಕೃಷ್ಣಾನಂದ ಕಾಮತ್

ಕಾಗೆಯ ಕಾಯಕ

ಡಾ॥ ಕೃಷ್ಣಾನಂದ ಕಾಮತ್

ಪ್ರಿಸಮ್ ಬುಕ್ಸ್ ಪ್ರೈ. ಲಿ.
ನಂ. 1865, 32ನೇ ಕ್ರಾಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು - 560 070

ಶಾಖೆಗಳು
ಮುಂಬಯಿ ● ಕಲ್ಕತ್ತಾ ● ಹೈದರಾಬಾದ್

Kageya Kayaka—a book in Kannada on the habits and life style of the common crow. Written by Dr. Krishnananda Kamath and published by Prism Books Pvt Ltd., 1865, 32nd Cross, Banashankari 2nd Stage, Bangalore — 560070. Phone: 6713979. pp.56. First edition: 2000.

Price: Rs. 35.

ISBN: 81-7286-142-7

ಬೆಲೆ: ರೂ. 35.

ಮೊದಲ ಮುದ್ರಣ: 2000

ರಕ್ಷಾಪುಟ ವಿನ್ಯಾಸ: ಹಾದಿಮನಿ

ಪ್ರತಿಗಳಿಗೆ ಸಂಪರ್ಕಿಸಿ:
ಪ್ರಿಸಮ್ ದ ಬುಕ್ ಶಾಪ್
ನಂ. 16, 11ನೇ ಮುಖ್ಯರಸ್ತೆ
4ನೇ ಬ್ಲಾಕ್, ಜಯನಗರ
ಬೆಂಗಳೂರು - 560 011
ಫೋನ್: 6637527

ಮುದ್ರಣ: ಪಯೋನಿಧಿ ಪ್ರಿಂಟರ್ಸ್

ಮೊದಲ ಮಾತು

ಹದಿನೈದು ವರ್ಷಗಳ ಹಿಂದೆಯೇ ಯುಗಾದಿ ವಿಶೇಷಾಂಕಕ್ಕಾಗಿ ಕಾಗೆ ಕುರಿತು ಒಂದು ಲೇಖನ ಬರೆದು ಕೊಡುವಂತೆ ಸೂಚನೆ ಬಂದಾಗ, ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಪ್ರತಿದಿನವೂ ಕಾಣಸಿಗುವ ಕಾಗೆಯ ಕುರಿತು ಅಜ್ಞಾನಿಯಾಗಿರುವುದು ಅವಮಾನಕಾರಕ ವೆನಿಸಿತ್ತು. ಛಲದಿಂದ ಕಾಗೆಯ ಜೀವನ ಅಭ್ಯಸಿಸಿ ಬರೆದ ಲೇಖನದಿಂದ ಓದುಗರಿಂದ ಬೆನ್ನು ಚಪ್ಪರಿಸಿಕೊಂಡೆ. ಅನೇಕರು ನನ್ನನ್ನು 'ಕಾಗೆ ಕಾಮತ್' ಎಂದು ಗುರುತಿಸುತ್ತಾರೆ ಕೂಡಾ! ಅಂದಿನಿಂದ ಹೋದಲ್ಲೆಲ್ಲ ಕಾಗೆಗಳ ಜೀವನಕ್ರಮ ಅಭ್ಯಸಿಸುವದು ಒಂದು ಹವ್ಯಾಸವೇ ಆಗಿ ಬಿಟ್ಟಿದೆ. ಅವುಗಳ ಆಡುಭಾಷೆ, ಸಂಗೀತ, ನೃತ್ಯ, ಜಾಣ್ಮೆಗಳ ಕುರಿತು ಆಳವಾಗಿ ಅಧ್ಯಯನ ನಡೆಯಿಸಿ ಒಂದು ಮಹಾ ಪ್ರಬಂಧ ಬರೆದರೆ ಡಾಕ್ಟರೇಟ್ ಪದವಿ ಸುಲಭವಾಗಿ ಪಡೆಯಬಹುದು!

ಕಾಗೆಗಳ ಚಮತ್ಕಾರಿಕ ಜೀವನ ಕುರಿತು ತಿಳಿಹೇಳುವ ಯಾವ ಆಧಾರ ಗ್ರಂಥಗಳೂ ಲಭ್ಯವಿಲ್ಲ. ಅಂತೆಯೇ ಇಲ್ಲಿ ಬರೆದದ್ದೆಲ್ಲ ಸ್ವಾನುಭವಗಳೇ. ಇವೆಲ್ಲ ನಾನು ಅರ್ಥೈಸಿಕೊಂಡದ್ದೇ ವಿನಾ ಕಾಗೆಗಳು ಬಂದು ಹೇಳಿದ್ದಲ್ಲ! ಅದೆಷ್ಟೋ ತೀರ ಗಹನವಾದ ವಿಚಾರಗಳನ್ನು ಅರಿವಿಗಾಗಿ ತಿಳಿಮಾಡಲು ಯತ್ನಿಸಿದ್ದೇನೆ. ವಾಚಕರಿಗೆ ಕಾಗೆಗಳ ಕುರಿತು ಕಿಂಚಿತ್ತಾದರೂ ಸಹಾನುಭೂತಿ ಮೂಡುವಂತಾದರೆ ನನ್ನ ಯತ್ನ ಸಫಲವಾಯಿತೆಂದು ತಿಳಿಯುತ್ತೇನೆ.

ಈ ಕಿರು ಪುಸ್ತಕ ಬರೆಯಿಸಿ, ಅಲ್ಪ ಸಮಯದಲ್ಲಿ ಅಂದವಾಗಿ ಪ್ರಕಾಶಿಸಿದ ಶ್ರೇಯಸ್ಸು ಪ್ರಿಸಮ್ ಬುಕ್ಸ್ ಪ್ರೈ. ಲಿ. ಅವರಿಗೆ ಸಲ್ಲಬೇಕು.

ಕೃಷ್ಣಾನಂದ ಕಾಮತ್
110, ಶಶಿಕಿರಣ
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ
ಬೆಂಗಳೂರು - 560055

ಪರಿವಿಡಿ

1.	ಕಾಗೆಯ ಕಾಯಕ	5
2.	ಉದರ ನಿರ್ವಹಣೆ	16
3.	ಕಲಹಪ್ರಿಯ ಕಾಗೆ	23
4.	ನಮ್ಮ ಕಾಗೆಯ ಕತೆ	29
5.	ಕಾಗೆಯ ಭಾಷೆ	36
6.	ಕಾಗೆಯ ಸಂತಾನೋತ್ಪತ್ತಿ	44
7.	ಜಾಣ ಕಾಗೆ	50

ಕಾಗೆಯ ಕಾಯಕ

ಬೇಡದ ಅತಿಥಿ ಬರುವ ಮುನ್ಸೂಚನೆ ಕೊಡುವ ಕಾಗೆ, ತಾನು ಮಾನವನ ಸ್ಥಾಯೀ ಅತಿಥಿಯಾಗಿ ಬದುಕಲು ಒಪ್ಪಲೇ ಇಲ್ಲ. ಆದರೆ ತನ್ನ ಆಡಳಿತೆಗೆ ಒಳಗಾದ ಕ್ಷೇತ್ರದಲ್ಲಿ ನಡೆಯುವ ಸಕಲ ಚಟುವಟಿಕೆಗಳ ಆಳವಾದ ಅಭ್ಯಾಸವನ್ನು ಅದು ಮಾಡಿಕೊಂಡಿರುತ್ತದೆ. ಸೂರ್ಯನೊಂದಿಗೆ ಸ್ಪರ್ಧಿಸಿ ಎಚ್ಚರಗೊಂಡ ಕಾಕರಾಜ ತನ್ನ ವೇಳಾಪತ್ರಿಕೆಯ ಪ್ರಕಾರ ಹತ್ತಾರು ಕುಟುಂಬಗಳಿಂದ ತನ್ನ ನಾಶ್ತಾ ಸಂಪಾದಿಸುತ್ತಾನೆ. ಅತಿಯಾಗಿ ಹಸಿದಿದ್ದರೆ ರಸ್ತೆಯ ಮೂಲೆಯಲ್ಲಿ ಶಾಸ್ತ್ರಿಗಳ ಮನೆಯ ಮುಂದೆ ಹರವಿದ ತಂಗಳನ್ನಕ್ಕೆ ಬಾಯಿ ಹಾಕುತ್ತಾನೆ. ಅಷ್ಟರಲ್ಲಿ ಪಾಟೀಲರ



ನಾಶ್ತಾದ ಪ್ರತೀಕ್ಷೆಯಲ್ಲಿ

ಭಕ್ರಿಯ ತುಣುಕು ಸಿಗಬಹುದೆಂದೆನಿಸಿದಾಗ ಅಲ್ಲಿ ಧಾವಿಸುತ್ತಾನೆ. ಗೌಡರ ರಾಗಿ ಮುದ್ದೆಗೆ ಅಷ್ಟಾಗಿ ಇಷ್ಟಪಡದ್ದರಿಂದ ಅಲ್ಲಿಯತನಕ ಹಾರಿಹೋಗಿ ದಿಕ್ಕು ಬದಲಿಸಿ ಫರ್ನಾಂಡಿಸ ರಲ್ಲಿಯ ಟೋಸ್ಟ್‌ಗಾಗಿ ಓಡುತ್ತಾನೆ. ಶಾನುಭೋಗರ ಮನೆಯ ಪೂರಿಯ ತುಣುಕು ಅತಿ ಇಷ್ಟವಾದರೂ,

ಅದನ್ನು ದೊರಕಿಸುವದು ಕಷ್ಟ! ಮೊಮ್ಮಕ್ಕಳು ಮುಂಬಯಿಯಿಂದ ಬಂದು ಇಳಿದಾಗ ಮಾತ್ರ ಈ ಅಪರೂಪದ ಖಾದ್ಯ. ಪಂಡಿತರ ಇಡ್ಲಿ, ರೈತರ ಉಪ್ಪಿಟ್ಟು, ಕಾರ್ಮಿಕರ ಚುರಮುರಿಗಳಿಗೂ ಸ್ವಾಗತವುಂಟು.

ಜಾನಕಿ, ಭವಾನಿ, ಸಿದ್ದಮ್ಮ, ಭಾಗೀರತಿಯರೆಲ್ಲ ಮಂದಗಮನೆಯರಾಗಿ ಹೊರಗೆಲಸಕ್ಕೆ ಹೊರಡುವದನ್ನೇ ನಿರೀಕ್ಷಿಸುತ್ತ ಕಾಗೆ, ದೂರದಲ್ಲಿದ್ದು, ಅವರ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿರುತ್ತದೆ. ಯಜಮಾನಿ, ಮೊದಲಿಗೆ ಅಡಿಗೆಪಾತ್ರೆ ಬೆಳಗಿಕೊಡೆಂದು ಕೆಲಸದವಳನ್ನು ದಬಾಯಿಸಿದಾಗ, ಇದು ಉಳಿದ ಆಹಾರದ ಕಣಗಳನ್ನು ಪಾತ್ರೆಗಳಿಂದಲೇ ಆರಿಸಹೋಗುತ್ತದೆ; ಆಗ ಕೆಲಸಗಾತಿ, ಒಡತಿಯ ಮೇಲಿನ ಸಿಟ್ಟನ್ನು 'ಇದರ ಮನೆ ಹಾಳಾಗ' ಎಂದು ಕಲ್ಲಿನೇಟಿನಿಂದ ಕಾಗೆಯ ಮೇಲೆ ತೀರಿಸಿಕೊಳ್ಳಲು ಯತ್ನಿಸಿದರೆ, ಅದು ಕಾಲಿಗೆ ಬುದ್ಧಿ ಹೇಳಬೇಕು. ಮುಸುರೆಯನ್ನು ತೆಂಗಿನ ಮರದ ಅಡಿಯಲ್ಲಿ ಸುರಿದಾಗ, ಅದನ್ನು ಕಾಗೆ ಇನ್ನಿತರ ಬಂಧುಗಳೊಡನೆ ಪಾಲುಗೊಳ್ಳಬೇಕಾಗಿದ್ದರಿಂದ, ಅದರ ಹೊಟ್ಟೆಗೆ ಸೇರುವದು ತೀರ ಕಡಿಮೆ. ಬರೇ ಶಾಕಾಹಾರಿ ಬ್ರಾಹ್ಮಣನಂತೆ ಬಾಳುವದು ತಮ್ಮ ಜಾತಿಗೆ ಕಳಂಕ ತರುವ ಮಾತಲ್ಲವೇ? ಆದ್ದರಿಂದ ರಾತ್ರೆ ಹೊರದೀಪಕ್ಕೆ ಮುತ್ತಿಕೊಂಡಿದ್ದ ಕೀಟಗಳನ್ನು ಬೆಳಗಿನ ನಸುಗತ್ತಲಲ್ಲಿ ಹೊಟ್ಟೆಗೆ ಸೇರಿಸುವದು. ಇರುವೆ, ಗೆದ್ದಲರಾಣಿ, ಇರುಳಜಿಟ್ಟೆಗಳನ್ನು ಸ್ವಾಹಾ ಮಾಡುವದು. ತಿಂಡಿಗೆ ಆಸೆಪಟ್ಟು ಬೋನಿಗೆ ಸಿಕ್ಕಿಬಿದ್ದ ಇಲಿ-ಹೆಗ್ಗಣಗಳು ಸತ್ತು ರಸ್ತೆಗೆ ಬಿದ್ದಾಗ ಕಾಗೆ ಪ್ರಾಮಾಣಿಕತೆಯಿಂದ ಅವಕ್ಕೆ ಮೋಕ್ಷ ತೋರಿಸುವದು. ಸತ್ತ ಮಂಡೂಕರಾಜನ ಅವಶೇಷಗಳಲ್ಲಿ ತನ್ನ ಪಾಲನ್ನು ಪಡೆಯುವದು. ಅಲ್ಲಿಂದ ಮುಂದೆ ಮೀನು-ಮಟನ್ ಮಾರ್ಕೆಟ್‌ನತ್ತ ಹಾರುವದು. ಅಲ್ಲಿ ಚೆಲ್ಲಿದ ಕಣ್ಣು-ಕರುಳುಗಳ ತಿರಸ್ಕೃತ ಭಾಗಗಳು ತನಗಿರಲಿ ಎಂದು ಕಚ್ಚಿಕೊಂಡು ಹಾರುವದು. ಟೊಂಗೆಯೊಂದರ ಮೇಲೆ ಪ್ರತಿಷ್ಠಾಪಿತವಾಗಿ ಮನದಣಿಯೆ ತಿಂದು, ಕೊಕ್ಕನ್ನು ಮರದ ತೊಗಟೆಗೆ ತಿಕ್ಕಿ ಶುಚಿ ಮಾಡಿತೆಂದರೆ ನಾಶ್ತಾ ಕೆಲಸ ಮುಗಿದಂತೆ. ಆದರೆ ಕಾಲಂಗುಲ ಹೊಟ್ಟೆಹೊರಕೊಳ್ಳಲು ಕಾಗೆ ಇಷ್ಟೊಂದು ಕಷ್ಟಪಡಬೇಕೇ! ಎಂದು ವಿಸ್ಮಯಪಡುವವರು ತಾಳ್ಮೆಯಿಂದ ಅವುಗಳ ಚಟುವಟಿಕೆಗಳನ್ನು ಅವಲೋಕಿಸಬೇಕು.

ಸೂರ್ಯ ನೆತ್ತಿಗೇರಿ ಬರುವವರೆಗೂ ಕಾಗೆ ತನ್ನ ಇತರ ಚಟುವಟಿಕೆಗಳತ್ತ ಲಕ್ಷ್ಯ ಹಾಕಲಾರಂಭಿಸುವದು. ಗಟ್ಟಿ ಆಹಾರ ಹೊಟ್ಟೆ ಸೇರಿದಾಗ ಬಾಯಾರಿಕೆ. ಹತ್ತಿರದ ಮಡುವಿನ ಕೊಳಚೆ ನೀರನ್ನು ಕುಡಿಯಲೋ ಬೇಡವೋ ಎಂದು ಅನುಮಾನ ಪಡುತ್ತಿರುವಾಗ ಯಾರೋ ಪುಣ್ಯಾತ್ಮ ಸಾರ್ವಜನಿಕ ನಲ್ಲಿಯನ್ನು ತೆರೆದಿಟ್ಟು ಹೋಗಿದ್ದಾನೆ. ಇಲ್ಲಿಯೇ ಬಂದುಬಿಡು ಎಂದು ಸಂಗಡಿಗನೊಬ್ಬ ಕೂಗಿ ಹೇಳಿದ್ದರಿಂದ ನಲ್ಲಿಯ ಮೇಲೆ ಮಾಟವಾಗಿ ಕುಳಿತು ಗೋಣು ತಿರುವಿ, ಚುಂಚನ್ನು ಅಗಲಮಾಡಿ ತೊಟಕುತ್ತಿದ್ದ ಹನಿನೀರು ಬಾಯಲ್ಲಿ ಬೀಳುವಂತೆ ಎಚ್ಚರಿಕೆ ವಹಿಸಿತು. ನೀರಡಿಕೆ ನೀಗಿಸಿಕೊಂಡು ಯಾರಿಗೋ ಕೃತಜ್ಞತೆ ಸೂಚಿಸುವಂತೆ ಕರ್, ಕರ್ರ್, ಕರ್ರ್ ಎಂದು ಒದರಿ ಹಾರಿತು. ದೂರದ ಮಾವಿನ ಮರದತ್ತ ವೇಗವಾಗಿ ಹೋಗುತ್ತಿದ್ದಂತೆ ಹತ್ತಿರದ ಹಲಸಿನ ಮರದ ಪೊದೆಯಲ್ಲಿ ತನ್ನ ಕರಿಗೆಳತಿ ಒಂಟಿಯಾಗಿ ಕುಳಿತಿರುವುದು ಕಂಡಿತು.

ವೇಗವನ್ನು ಕಡಿಮೆಮಾಡಿ ನಡು ಆಗಸದಲ್ಲಿ ಒಮ್ಮೆ ಪಲ್ಟಿಹಾಕಿ, ದಿಕ್ಕು ಬದಲಿಸಿ, ಆಕೆಯ ಪಕ್ಕದಲ್ಲಿ ಕುಳಿತು, ಮೆಲುಭಾಷೆ ಪ್ರಾರಂಭಿಸಿತು. "ಇಂದು ಕಿರಾಣಿ ಅಂಗಡಿ ಶೆಟ್ಟರು, ಭಾರಿ ಹೆಗ್ಗಣವೊಂದನ್ನು ನಮಗಾಗಿ ಹಿಡಿದಿಟ್ಟಿದ್ದರು. ಅದಕ್ಕೆ ಅರೆಜೀವವಿದ್ದಾಗಲೇ ಮೃಷ್ಟಾನ್ನ



ಆಹಾರವನ್ನು ಕೊಕ್ಕುತ್ತಿರುವಾಗ

ಭೋಜನವಾಯಿತು. ಎಷ್ಟು ಹೊತ್ತು ಕಂಠಶೋಷ ಮಾಡಿದರೂ ನಿನ್ನ ಪತ್ತೆಯೇ ಇಲ್ಲ. ನಿನ್ನೆ ಅಯ್ಯಂಗಾರ್ ಮದುವೆ ಪುಳಿಯೋಗರೆ ಅಜೀರ್ಣವಾಯಿತೇ?" ಎಂದು ಚುಚ್ಚಿ ನುಡಿಯಿತು. ಆದರೆ ಅವಳು ಈ ಮಾತಿಗೆ ಯಾವ ಪ್ರತಿಕ್ರಿಯೆಯನ್ನೂ ತೋರಿಸದೆ ತನ್ನ ಗರಿಬಿಚ್ಚಿ ಅದರಲ್ಲಿ ಸಿಕ್ಕಿಕೊಂಡ ಕಸಕಡ್ಡಿ, ಹೇನುಗಳನ್ನು ಹೆಕ್ಕಲಾರಂಭಿಸಿದಳು. ಸುಮ್ಮನೆ ಏಕೆ ವೇಳೆ ಹಾಳುಮಾಡುವುದೆಂದು ಗಂಡು ಕಾಗೆ ತಾನೂ ಬಹಳ ದಿನಗಳಿಂದ ಅಲಕ್ಷಿಸಿದ ತನ್ನ ಶರೀರ ಸ್ವಚ್ಛತೆಯಲ್ಲಿ ಲಕ್ಷ್ಯಹಾಕಿತು. ಅದರ ತತ್ತರವೆತ್ತರ ಭಂಗಿಗಳನ್ನು ನೋಡಲಾಗದೇ ಹೆಣ್ಣು ಕಾಗೆ ತಾನೇ ಹತ್ತಿರ ಸರಿದು ಒಂದೊಂದೇ ಹೇನು ಹೆಕ್ಕಿ ನುಂಗಲಾರಂಭಿಸಿತು. ಈ ಸ್ತ್ರೀಸೇವೆಯಿಂದ ಕಾಕರಾಜ ಸುಖಪಡುತ್ತಿದ್ದಾಗ, ಕಾಗಮ್ಮ "ಏನೋ! ಮೀಯದೇ ಎಷ್ಟು ಯುಗವಾಯಿತೋ? ಮೈಯೆಲ್ಲ ನಾರುತ್ತಿದೆ. ವಿಪುಲವಾದ ನೀರು, ವಿರಾಮಗಳಿರುವಾಗ ಸ್ನಾನ ಮಾಡದವನು ಹೆಣ್ಣಿನ ಸ್ನೇಹ ಬಯಸಬಾರದು" ಎಂದು ಅರೆ ಮುನಿಸಿನಿಂದ ದೂರ ಸರಿದು ಕುಳಿತಿತು. ನಿರುಪಾಯನಾಗಿ ಕಾಗಪ್ಪ ಮಡುವಿಗೆ ಧಾವಿಸಿತು.

ದಂಡೆಯಲ್ಲಿ ಕುಳಿತು ಒಂದು ನಿಮಿಷ ಈ ಚಳಿಯಲ್ಲಿ ತಣ್ಣೀರಿನ ಸ್ನಾನ ಮಾಡುವುದೇ? ಎಂದು ಶಂಕಿಸಿತು. ಕಾದಲಳಿಂದ ಛೀಮಾರಿ ಹಾಕಿಸಿಕೊಳ್ಳುವುದಕ್ಕಿಂತ ಮೈಚಳಿ ಬಿಡುವದು ಮೇಲೆಂಬ ತೀರ್ಮಾನಕ್ಕೆ ಬಂದು, "ನೋಡ್ರೋ ನಾನು ಸ್ನಾನಕ್ಕೆ ಇಳಿದಿದೀನಿ, ನೀವೆಲ್ಲ ಸಾಕ್ಷಿ ಇದ್ದೀರಿSS" ಎಂದು ಖರ್ ಖರ್ ಖರ್SS ಗಂಡುಧ್ವನಿಯಲ್ಲಿ ಘೋಷಿಸಿ ನೀರಿಗೆ ಧುಮುಕಿತು.

ಕಾಕರಾಜ ಇಷ್ಟೆಲ್ಲ ಸಾಹಸ ತೋರಿಸಿದ ನಂತರ ತಾವೇಕೆ ಹಿಂದೆ ಬೀಳಬೇಕು? ಎಂದು ಕರಿಯಣ್ಣ, ಕಪಟಣ್ಣ, ಕಗ್ಗಪ್ಪ, ಕಾಡಿಗ್ಗಣ್ಣ, ಕರಿಮೊಗ, ಕಾಳಪ್ಪನವರೆಲ್ಲ ಸ್ನಾನಕ್ಕೆ ಇಳಿದರು. ಸೊಂಟಮಟ್ಟ ನೀರಿನಲ್ಲಿ ಶಿರ, ರೆಕ್ಕೆ, ಹಿಂಗರಿಗಳನ್ನು ಪಸರಿಸಿ, ಅಲೆಗಳನ್ನು ಎಬ್ಬಿಸಿ, ಕೊಕ್ಕಿನಿಂದ ಇದ್ದುಬದ್ದ ಕೊಳೆಯನ್ನು ಹೊರಗೆಡವಿ, ಒಂದೊಂದಾಗಿ ದಡಕ್ಕೆ ಹಿಂದಿರುಗಿದವು. ಹಸಿರು ಹುಲ್ಲುಹಾಸಿನ ಮೇಲೆ ಬಿಸಿಲನ್ನು ಕಾಯಿಸುತ್ತ ಮೈ ಕುಲುಕುತ್ತ ಕುಳಿತಾಗ, ಹೊಸ ಚೈತನ್ಯ ಬಂದಂತಾಗಿ, ಆಹಾರ ಶೋಧಕ್ಕೆ ಹೊರಟವು. ಕಾಕರಾಜ ಬೇವಿನ ಟೊಂಗೆಯೊಂದರ ಮೇಲೆ ವಿರಾಮವಾಗಿ ಕುಳಿತು ಕಾ ಖರ್ ಕಾ ಖರ್ ಎಂದು ಹೊಸ ರಾಗ ಪ್ರಾರಂಭಿಸುವದರಲ್ಲಿದ್ದಾಗ, ಕೊಂಚ ನೀರು ಚುಂಚಿನ ಅಡಿಯ ಬಿಲದಂತಿದ್ದ ಮೂಗ ಹೊಳ್ಳೆಗಳಲ್ಲಿ ಸೇರಿದ್ದರಿಂದ ಚುಂಚನ್ನು ತೊಗಟೆಗೆ ನೇವರಿಸಿ, ನೀರನ್ನು ಹೊರಹಾಕಲು ಪ್ರಾರಂಭಿಸಿತು. ಮನೆಯ ಯಜಮಾನಿ, "ಕಾಗೆ ಅಕ್ಕಿ ತೊಳೀತಿದೆ, ಯಾರೋ ಅತಿಥಿಗಳು ಬರುವಂತಿದೆ," ಎಂದು ಗೊಣಗುತ್ತ ಯಾರಿರಬಹುದು ಎಂದು ಮೈಮರೆತಳು. 'ಹಸಿದಿದ್ದೇನೆ, ಏನಾದರೂ ಇದ್ದಬದ್ದದ್ದು ನೀಡಬಾರದೇ' ಎಂದು ಕಾಕರಾಜ ಕಾಹಾಽ ಕಾಹಾಽಽ ಎಂದು ಕಿರುಚಿಕೊಂಡಾಗ, "ನಮ್ಮಣ್ಣ ಬರುವದಾದರೆ ಹಾರಿಹೋಗು ಕಾಗೆ," ಎಂದು ಹೊರಬಂದಳು. ಬರಿಗೈಯಿಂದ ಬಂದವಳಿಂದ ತನಗೇನು ಆಗಬೇಕಾಗಿದೆ? ಎಂದು ಕಾಗೆ ಹಾರಿದಾಗ, ಅಣ್ಣ ಬರುವದು ಖಂಡಿತವೆಂದರಿತ ಮನೆಯೊಡತಿ ಇನ್ನಷ್ಟು ಅನ್ನಕ್ಕಿಡಲು ಒಳಗೋಡಿದಳು.

ಹದ್ದಿಗೆ ಬುದ್ಧಿ ಕಲಿಸಿದ್ದು

ಎದುರು ಮನೆಯ ಸಂಪಿಗೆ ಟೊಂಗೆಯಲ್ಲಿ ಅವಿತ ಕಾಗೆ ಕಾಽಕಕ್, ಕಾಽಕಕ್ ಎಂದು ದೈನ್ಯದಿಂದ ಕೂಗಿದಾಗ ಧಾರ್ಮಿಕಳೊಬ್ಬಳಿಗೆ ಅಪಶಕುನ. 'ಅದಕ್ಕೊಂದು ಕಲ್ಲು ಹೊಡೆಯೋ' ಎಂದು ಆಳಿಗೆ ಆಜ್ಞೆಯಿತ್ತಳು. ಈ ಜಗತ್ತಿನಲ್ಲಿ ನಿಯತ್ತಿಗೆ, ದಾನಧರ್ಮಕ್ಕೆ ಬೆಲೆಯಿಲ್ಲವೆಂದು ಕಾಗೆ ಹೊರಟೇಹೋಯಿತು. ದಾರಿಯಲ್ಲಿ ಹಪ್ಪಳ ಸಂಡಿಗೆಗಳ ರಾಶಿಯನ್ನೇ ಬಿಸಿಲಲ್ಲಿ ಒಣಹಾಕಿದ್ದನ್ನು ನೋಡಿತು. ತನ್ನ ಆಪ್ತಬಂಧು ಬಳಗದವರನ್ನೆಲ್ಲ ಕೂಗಿ ಕರೆಯಿತು. ಮೂರು ನಾಲ್ಕು ಕಾಗೆಗಳು, ಕಾಯಲು ಕುಳಿತ ಮಗುವಿನ ಲಕ್ಷ್ಯವನ್ನು ಒಂದು ಕಡೆಗೆ ಎಳೆದರೆ, ಇನ್ನೊಂದು ಕಡೆಯಿಂದ ಕಾಗೆಯೊಂದು ಹಪ್ಪಳ ಕಚ್ಚಿಕೊಂಡು ಗಗನಕ್ಕೆ ಹಾರಿತು. ತಮ್ಮ ಯುಕ್ತಿ ಫಲಿಸಿತೆಂದು ಉಳಿದವು ಹಿರಿಯ ಕಾಗೆಯನ್ನು ಸೇರಿಕೊಂಡವು. ಹಪ್ಪಳದ ಪಾಲಿಗಾಗಿ ಪರದಾಟ, ಬಡಿದಾಟ ಪ್ರಾರಂಭವಾದವು. ರೆಂಬೆಯೊಂದರ ಮೇಲೆ ಕುಳಿತು, ಪಂಜದಲ್ಲಿ ಹಿಡಿದು ಹಪ್ಪಳ ಕುಕ್ಕಿ ತಿನ್ನುವಾಗ, ಇನ್ನೊಂದು ಕಾಗೆ ತನ್ನ ಪಾಲು ಪಡೆಯಲೆತ್ನಿಸಿತು. ಕಾದಾಟ ಪ್ರಾರಂಭವಾಗಿ, ಹಪ್ಪಳ ನೆಲಕ್ಕುರುಳಿತು. ಇದಕ್ಕಾಗಿ ಒಂದನ್ನೊಂದು ದೂಷಿಸುತ್ತ ಹಾರಿದವೇ ವಿನಾ ಬಿದ್ದ ಹಪ್ಪಳ ಹೆಕ್ಕಲು ಹೋಗಲಿಲ್ಲ. ಸ್ವಸ್ಥಾನಕ್ಕೆ ಹಾರಿಹೋಗುತ್ತಿದ್ದಂತೆ, ಬಲೆಹಾಸಿ ಅದರೊಳಗೆ ಮೀನು ಒಣ ಹಾಕಿದ್ದು ಕಾಕದೃಷ್ಟಿಗೆ ಗೋಚರಿಸಿತು. ಇಂದಾದರೂ ಹೊಟ್ಟೆ

ಬಿರಿಯುವಷ್ಟು ಮಾಂಸಾಹಾರವಾಗಲೆಂದು ಸಂಗಡಿಗರಿಗೆ ತಿಳಿಸುವ ಗೋಜಿಗೆ ಹೋಗದೆ ಭೂಮಿಗಿಳಿಯಿತು. ಚುಂಚು (ಕೊಕ್ಕು) ಬಲೆಯೊಳಗೆ ಹೋದರೂ ಮೀನು ಹೊರಗೆ ಬಾರದು. ಬಲೆಯನ್ನೇ ಎತ್ತ ಹೋದರೆ ಶಕ್ತಿ ಸಾಲದು. ಕೊನೆಗೆ ಬೇರೆ ದಾರಿ ಕಾಣದೇ 'ಇಲ್ಲಿ ಅಪರೂಪದ ಆಹಾರವಿದೆ ಬರ್‍ರೋss ಕಾ, ಕಾs ಕಾss' ಎಂದು ಗಂಟಲು ಬಿರಿಯುವಂತೆ ಕಿರುಚಿಕೊಂಡಿತು. ಒಂದು ಎರಡು ಹತ್ತು ಇಪ್ಪತ್ತು ಸದಸ್ಯ ಕಾಗೆಗಳು ಇಳಿದವು.

ಸಕಲ ಕಾಗೆಗಳೂ ಶಕ್ತಿ ಹಾಕಿ ಎಳೆದರೂ ಬಲೆ ಬಾರದು. ನಾಲ್ಕು ಮೊಳೆಗಳನ್ನು ಹೊಡೆದು ನೆಲದಲ್ಲಿ ಹೂತ ಬಲೆ ಮುದಿಕಾಗೆಯ ಲಕ್ಷ್ಯಕ್ಕೆ ಬಂದು ಅದು ತನ್ನ ಚಾಣಾಕ್ಷತನದಿಂದಾಗಿ ಕೊಕ್ಕಿನಿಂದ ಬಲೆಯ ದಾರ ಎಳೆದು ಮೊಳೆಯಿಂದ ಜಾರಿಸಿಬಿಟ್ಟಿತು. ಬಲೆ ಸರಿಸಿ, ಆಹಾರಕ್ಕೆ ಬಾಯಿಹಾಕಬೇಕು ಎನ್ನುವಷ್ಟರಲ್ಲಿ, ಈ ಅವಕಾಶಕ್ಕಾಗಿ ಹೊಂಚುಹಾಕಿ ಕುಳಿತ ಹದ್ದೊಂದು ಗರುಡನಂತೆ ಹಾರಿಬಂದು ಪಂಜದಲ್ಲಿ ದೊಡ್ಡಮೀನೊಂದನ್ನು ಭದ್ರವಾಗಿ ಹಿಡಿದು ಕಣ್ಮರೆಯಾಯಿತು. ಉಳಿದ ಮೀನುಗಳನ್ನು ತಿಂದು ತೇಗಲು ಅವಕಾಶವಿದ್ದರೂ, ಹದ್ದಿನ ಈ ಮೋಸದ ತಂತ್ರದಿಂದ ರೊಚ್ಚಿಗೆದ್ದ ಕಾಗೆಗಳ ತಂಡ ಅದನ್ನು ಬೆನ್ನಟ್ಟಿಕೊಂಡು ಹೊರಟಿತು. ಒಂಟಿಹದ್ದು ಗಗನ ಮಂಡಲದಲ್ಲಿ ಮೇಲೆ ಕೆಳಗೆ ಹಾರುವಾಗ, ಕಾಗೆಗಳೆಲ್ಲ ಅದನ್ನು ಬೆನ್ನಟ್ಟಿಕೊಂಡು ಹೋಗುವದನ್ನು ವೀಕ್ಷಿಸುವದೇ ಒಂದು ಅನುಭವ. ಹದ್ದು ಜೀವದಾಸೆಯಿಂದ ವೇಗವಾಗಿ ಓಡಿ ಎಲ್ಲಿಯೋ ಕಾಣದಂತಾಗಿ, ಸದ್ಯ ತನ್ನ ಬಡ ಜೀವ ಬದುಕಿಕೊಂಡಿತು ಎಂದುಕೊಳ್ಳುವಷ್ಟರಲ್ಲಿ ಎಲ್ಲಿಂದಲೋ ಹಾರಿಬಂದ ಕಾಗೆ ಕ್ಷಣಾರ್ಧದಲ್ಲಿ ಅದರ ಕುತ್ತಿಗೆಯ ಗರಿಗಳನ್ನೇ ಕೊಕ್ಕಿನಿಂದ ಜೋರಾಗಿ ಎಳೆದುಬಿಡುವದು. ನೋವನ್ನು ತಾಳಲಾರದೇ ಹದ್ದು ಜೋರಾಗಿ ಕಿರುಚುವದು. ಇಷ್ಟಾದರೂ ಪಂಜದಲ್ಲಿ ಹಿಡಿದ ಮೀನನ್ನು ಬಿಡುವದಿಲ್ಲ. ವೈರಿಯ ಸುತ್ತ ಹಾರಿಹಾರಿ ಬೇಸತ್ತ ಕಾಗೆಗಳ ತಂಡ ಒಂದೆಡೆ ಅವಿತುಕೊಳ್ಳುತ್ತದೆ. ಇನ್ನು ಭಯವಿಲ್ಲ ಎಂದು ಹದ್ದು ತೀರ ಎತ್ತರದಲ್ಲಿ ಕುಳಿತು ಮತ್ಸ್ಯಭೋಜನ ಪ್ರಾರಂಭಿಸಿದೊಡನೆ ಎಡಕ್ಕೆ ನಾಲ್ಕು, ಬಲಕ್ಕೆ ನಾಲ್ಕು ಕಾಗೆಗಳು ಕುಳಿತು ಮೀನನ್ನು ಕಸಿದುಕೊಳ್ಳುವ ಯತ್ನ ಪ್ರಾರಂಭಿಸುತ್ತವೆ. ಸಾಲದ್ದಕ್ಕೆ, ಇನ್ನೆರಡು ಹಾರಾಡುತ್ತಲೇ ಹದ್ದಿನ ಮೇಲೆ ಆಕ್ರಮಣ ನಡೆಸುತ್ತವೆ. ಕಾಗೆ ತೀರ ಹತ್ತಿರ ಬಂದಾಗ ಹದ್ದು ಹರಿತವಾದ ಕೊಕ್ಕಿನಿಂದ ಚುಚ್ಚುವಂತೆ ಗದರಿಸುತ್ತಲೇ ಇದ್ದರೂ ದಾಳಿಗಾರರು ಕಾಳಗದ ಕಣಬಿಟ್ಟು ಓಡುವ ಲಕ್ಷಣ ತೋರಿಸುವ ಬದಲಾಗಿ ಹದ್ದಿಗೆ ಚಿತ್ರಹಿಂಸೆ ಕೊಟ್ಟು ಮೀನನ್ನು ಕಸಿದುಕೊಳ್ಳುವ ಯತ್ನ ಮುಂದುವರಿಸುತ್ತವೆ. ಕೊನೆಗೊಮ್ಮೆ ಹದ್ದು ಈ ಕೋಟಲೆಯಿಂದ ಬೇಸತ್ತು ಮೀನನ್ನು ಮರದಲ್ಲಿಯೇ ಬಿಟ್ಟು ಪಲಾಯನ ಮಾಡುತ್ತದೆ. ಕಾಗೆಗಳು ಅದನ್ನು ಬೆನ್ನಟ್ಟಿಕೊಂಡು ಹೋಗುತ್ತವೆಯೇ ಹೊರತು ಅದು ಬಿಟ್ಟುಹೋದ ಮೀನನ್ನು ತಿನ್ನುವುದಿಲ್ಲ!

ವಿವಿಧ ಪ್ರಭೇದಗಳು

ಜಗತ್ತಿನ ನಾಲ್ದೆಸೆಗಳಲ್ಲಿಯೂ ಹರಡಿಕೊಂಡ ಕಾಗೆಗಳು 'ಕಾರ್ವಿಡೀ' ಕುಟುಂಬಕ್ಕೆ

ಸೇರಿದವು. ಇವು ಕೆಲ ಮಹಾಸಾಗರದಲ್ಲಿಯ ನಡುಗಡ್ಡೆಗಳನ್ನು ಬಿಟ್ಟರೆ, ಉಳಿದೆಲ್ಲ ಕಡೆ ವಸಾಹತು ಮಾಡಿವೆ. ಒಂದು ಕಾಲದಲ್ಲಿ ವಿಪರೀತ ಚಳಿ ಮತ್ತು ಹಿಮಾಚ್ಛಾದಿತ ಸ್ಥಳಗಳಿಂದ ಬೆಚ್ಚಗಿನ ಸ್ಥಳಗಳಿಗೆ ವಲಸೆ ಹೋಗುತ್ತಿದ್ದವು. ಆದರೆ ಇಂದು ಹೆಚ್ಚುಕಡಿಮೆ ವಿಷಮ ವಾತಾವರಣಗಳಿಗೂ ಹೊಂದಿಕೊಂಡಿವೆ. ಕಾಕಕೋಟಿಯನ್ನು ಮೂವತ್ತೆರಡು ಪ್ರಭೇದಗಳಲ್ಲಿ ವಿಂಗಡಿಸಬಹುದು. ನಮ್ಮೊಂದಿಗೆ ಊರಲ್ಲಿಯೇ ಜೀವಿಸುವ ಕಾಗೆ ಕಾರ್ವಸ್ ಸ್ಪ್ಲೆಂಡೆನ್ಸ್ ವರ್ಗದ್ದು; ಊರಿನಿಂದ ದೂರದ ಕಾಡಿನಲ್ಲಿ ವಾಸಮಾಡುವಂತಹ ಕಾಗೆ ಕಾರ್ವಸ್ ಮ್ಯಾಕ್ರೊರಿಂಕೋಸ್. ಊರಿನದು ಕಾಡಿಗೆಯಷ್ಟು ಕಪ್ಪಿದ್ದರೂ ಶಿರಭಾಗದಲ್ಲಿ ಮಾತ್ರ ಬಿಳಿಮಿಶ್ರಿತ ಕಪ್ಪು ಅಥವಾ ಬೂದುಬಣ್ಣ ಹೊಂದಿರುತ್ತದೆ. ಕಾಡುಕಾಗೆ ಸಮನಾಗಿ ಕಪ್ಪಿದ್ದೂ ಊರಿನದಕ್ಕಿಂತ ದೊಡ್ಡದಾಗಿರುತ್ತದೆ. ಅವುಗಳ ದನಿಯಿಂದಾಗಿ ಊರಿನದು ಹೆಣ್ಣೆಂದೂ, ಕಾಡಿನದು ಗಂಡೆಂದೂ ಸಾಮಾನ್ಯಜನ ತಪ್ಪಾಗಿ ತಿಳಿಯುತ್ತಾರೆ. ತಜ್ಞರು ಮಾತ್ರ ಗಂಡು ಹೆಣ್ಣುಗಳನ್ನು ದೂರದಿಂದ ಗುರುತಿಸಬಲ್ಲರು. ಯೂರೋಪ್ ಮತ್ತು ಅಮೆರಿಕಗಳಲ್ಲಿರುವ ಪ್ರಭೇದಗಳು ಬೇರೆ ಬೇರೆ.

ಕಾಗೆ ಹೆಗ್ಗಣದಷ್ಟು ದೊಡ್ಡದಾಗಿ ಕಂಡರೂ, ಗರಿ ಪುಕ್ಕಗಳಿಂದ ಆವರಿಸಿದ ಅದರ ದೇಹಭಾಗ ನಿಜಕ್ಕೂ ತೀರ ಚಿಕ್ಕದು. ಬಹುದೊಡ್ಡ ಕಾಗೆ ಕೂಡ ಒಂದು ಕಿಲೊಗ್ರಾಂಗಿಂತ ಕಡಿಮೆಯೇ ಇರುತ್ತದೆ. ಕೊಕ್ಕಿನ ಮೇಲಿರುವ ಮೂಗಿನ ಹೊಳ್ಳೆಗಳು ರೋಮಗಳಿಂದ ಆವರಿಸಲ್ಪಟ್ಟಿರುತ್ತವೆ. ತೆಳುವಾದ ಎಲುವಿನಿಂದ ಕೂಡಿದ ಸೀಳು ನಾಲಿಗೆ; ಕಣ್ಣುಗಳು ಅತ್ಯಂತ ತೀಕ್ಷ್ಣ. ವೈರಿಗಳಿಂದ, ಗಂಡಾಂತರದಿಂದ ರಕ್ಷಿಸಿಕೊಳ್ಳಲು ಸದಾಕಾಲ ಸುತ್ತಲೂ ಕಣ್ಣು ಓಡಿಸುತ್ತಲೇ ಇರುವದರಿಂದ, 'ಕಾಗೆಗೆ ಒಂಟಿ ಕಣ್ಣು, ಅದನ್ನೇ ಅತ್ತಿತ್ತ ಓಡಿಸುತ್ತಿರುತ್ತದೆ' ಎಂಬ ಪ್ರತೀತಿ. ದೇಹದ ಅಳತೆಗೆ ಮೀರಿದ ಅದರ ಚುಂಚು ಶಕ್ತಿಯುತವಾಗಿದ್ದು, ಎಂತಹ ಗಟ್ಟಿ ಬೀಜವನ್ನು ಬೇಕಾದರೂ ಒಡೆಯಬಲ್ಲದು; ಎಂತಹ ಪ್ರಾಣಿಯನ್ನೂ ಕುಕ್ಕಿಕುಕ್ಕಿ ಅದರ ಮಾಂಸ ಸುಲಿಯಬಲ್ಲದು. ಮಣ್ಣಲ್ಲಿರುವ ಹುಳು ಹುಪ್ಪಡಿಗಳಿಗಾಗಿ ಅದು ಸಸಿಗಳನ್ನು ಕಿತ್ತು ಮೇಲೆತ್ತುವದು ತೀರಸಾಮಾನ್ಯ. ಹದ್ದು-ಹಂಸಗಳಂತೆ ಕಾಗೆ ಸತತವಾಗಿ ಬಹುದೂರ ಹಾರುವದು ವಿರಳ. ಕಿರಿದಾದ ಅಂತರವನ್ನು ವೇಗವಾಗಿ ಹಾರಬಲ್ಲದು. ಹದ್ದಿನಂತೆ ಹವೆಯಲ್ಲಿ ತೇಲುವ ಬದಲಾಗಿ ಸತತವಾಗಿ ರೆಕ್ಕೆ ಬಡಿಯುತ್ತಲೇ ಮುಂದುವರಿಯುವದು. ನಡುದಾರಿಯಲ್ಲಿ ಗಂಡಾಂತರ ಬಂದರೆ ಚಾಣಾಕ್ಷತನದಿಂದ ತಪ್ಪಿಸಿಕೊಳ್ಳಬಲ್ಲದು.

ತಪ್ಪಿದವಗೆ ಶಿಕ್ಷೆ

ರಾತ್ರಿ ವಿಶ್ರಾಂತಿಗಾಗಿ ಮರಗಳ ಆಶ್ರಯ ಪಡೆಯುವದು ಕಾಗೆಗಳ ಜನ್ಮಸಿದ್ಧ ಹಕ್ಕು. ಊರಕಾಗೆಗಳು ಆಹಾರ ಸಂಪಾದಿಸುವ ತಾಣದಿಂದ ದೂರಕ್ಕೆ ಹಾರಿಹೋದರೆ ಕಾಡುಕಾಗೆಗಳು ಊರ ಅಂಚಿನ ತನಕ ಬರುವವು. ವೃಕ್ಷಗಳ ಮೇಲೆ ತಮ್ಮ ಪ್ರತಿಷ್ಠೆಗೆ ಅನುಗುಣವಾಗಿ ವಿರಮಿಸಲು ಸ್ಥಾನ ದೊರಕಿಸುವದಕ್ಕಾಗಿ ಚೀರಾಟ-ಕೂಗಾಟಗಳು ಪ್ರಾರಂಭವಾಗಿಬಿಡುವವು. ಪರಿಸ್ಥಿತಿ ವಿಕೋಪಕ್ಕೆ ಹೋದಾಗ, ಅಲ್ಲಿರುವ ಇಡೀ ತಂಡವೇ ಸುತ್ತ ಮುತ್ತಲಿನ ಪ್ರದೇಶದಲ್ಲಿ

ನಾಲ್ಕಾರು ಪ್ರದಕ್ಷಿಣೆ ಹಾಕುವದು. ಒಬ್ಬಿಬ್ಬ ಸದಸ್ಯರು ತೀರ ಉದ್ಧಟತನದಿಂದ ವರ್ತಿಸಿದರೆ ಆಗ ನ್ಯಾಯವಿಚಾರಣೆ ನಡೆಯುವದು. ಎತ್ತರದ ಮರದಲ್ಲಿಯಾಗಲಿ, ಹುಲ್ಲಿನ ಬಯಲಲ್ಲಿಯಾಗಲಿ ಸಭೆಕೂಡುವದು. ಸಭೆಗೆ ಸಂಖ್ಯೆ ಸಾಲದಾದರೆ, ನಾಲ್ಕೂ ದಿಕ್ಕಿನಲ್ಲಿ ಕೂಗಿ ಇನ್ನಷ್ಟು ಹಿರಿಯರನ್ನು ಆಮಂತ್ರಿಸಲಾಗುತ್ತದೆ. ತಪ್ಪಿತಸ್ಥ ಕಾಗೆ, ಒಂದಿಷ್ಟೂ ಮಿಸುಕಾಡದೆ ತಲೆ ತಗ್ಗಿಸಿಕೊಂಡೇ ಕುಳಿತಿರುತ್ತದೆ. ಕಾವ್ ಕರ್, ಕಾವ್ ಕರ್, ಎಂದು ಆರೋಪಗಳನ್ನು ಘೋಷಿಸಿದ ಮೇಲೆ ಶಿಕ್ಷೆ. ಆ ಕಾಗೆಯ ತಲೆ ಕುಕ್ಕಿಯೋ, ಗರಿಗಳನ್ನು ಎಳೆದ್ದೋ, ಇಲ್ಲವೆ ಅದನ್ನು ಮರದಿಂದ ಕೆಳಕ್ಕೆ ತಳ್ಳಿಯೋ ಸಮಸ್ಯೆ ಬಗೆಹರಿಸಿದಾಗಲೇ ಎಲ್ಲವುಗಳಿಗೆ ನೆಮ್ಮದಿ. ಅವುಗಳ ನಿದ್ರಾಸ್ಥಾನದ ಕೆಳಗೆ ಮಲಮೂತ್ರದ ಮಿಶ್ರಣ ಸಂಚಯವಾಗುವದು ತೀರ ಸಾಮಾನ್ಯ. ಕಾಗೆಗಳ ರಾಜ್ಯದಲ್ಲಿ ಕಾಲಿಡುತ್ತಿದ್ದೇವೆ ಎಂಬ ಲಕ್ಷ್ಯವಿಲ್ಲದೆ ಅತಿಕ್ರಮಣ ಮಾಡುವವರ ಬಟ್ಟೆಗಳನ್ನು ಹೊಲಸುಮಾಡುವ ಅಧಿಕಾರ ಮಾತ್ರ ಇವುಗಳಿಗೆ ದೈವದತ್ತವಾಗಿ ಬಂದಿದೆ! ಅರೆನಿದ್ರೆಯಲ್ಲಿ ಕಂಠವನ್ನು ಸಡಲಿಸಿ ಕೊಳ್ಳುವದು, ರೆಕ್ಕೆ ಕೆದರಿಕೊಳ್ಳುವದು ಸಾಮಾನ್ಯ. ಕೆಲವಂತೂ ನಿದ್ರೆಯಲ್ಲಿ ಮಾತನಾಡಿಕೊಳ್ಳುವವು; ಒಂದು ಸುತ್ತು ಹಾರಿಬಂದು ನಿದ್ರೆಯನ್ನು ಮುಂದುವರಿಸುವವವು.

ಪಾರಿವಾಳಗಳ ನಿರಂತರ ಪ್ರಣಯದಲ್ಲಾಗಲಿ, ಗುಬ್ಬಚ್ಚಿಗಳ ಮುಕ್ತಕಾಮದಲ್ಲಾಗಲಿ ಈ ಹಕ್ಕಿಗೆ ವಿಶ್ವಾಸವಿಲ್ಲ. ಕಾಕಪ್ರೇಮಿಗಳು ಬಿಡುವಾದಾಗ ಪೊದೆಗಳ ಮರೆಯಲ್ಲಿಯೋ, ಇಲ್ಲವೇ ಜನಸಂಚಾರವಿಲ್ಲದಲ್ಲಿಯೋ ಮೈಗಂಟಿ ಕುಳಿತುಕೊಂಡು ಸರಸ ಸಲ್ಲಾಪ ಪ್ರಾರಂಭಿಸುತ್ತವೆ. ನಲ್ಲ ಕಣ್ಣುಮುಚ್ಚಿ ಕುಳಿತಾಗ, ನಲ್ಲೆ ಅದರ ಕೊರಳನ್ನು ನೇವರಿಸುವದು; ಗರಿಗಳಿಂದ ಹೇನು ಹೆಕ್ಕುವದು; ಪುಕ್ಕಗಳನ್ನು ಮೃದುವಾಗಿ ಹಿಡಿದೆಳೆಯುವದು. ಗಂಡು ಆಗೊಮ್ಮೆ ಈಗೊಮ್ಮೆ ಕಣ್ಣು ತೆರೆದು ನಲ್ಲೆಯನ್ನು ಅಭಿಮಾನದಿಂದ ನೋಡುತ್ತ ತಿರುಗಿ ನಿದ್ರಾವಶವಾದಂತೆ ನಟಿಸುವದು. ಗಂಟೆಗಟ್ಟಲೆ ಅವು ಇಂಥ ಚಟುವಟಿಕೆಗಳಲ್ಲಿ ಮೈಮರೆಯುವದುಂಟು. ಪ್ರೇಮಕ್ಕೆ ಋತುಮಾನಗಳ ಬಂಧನವಿಲ್ಲದಿದ್ದರೂ ಕಾಮ ಮಾತ್ರ ಬೇಸಿಗೆಯಲ್ಲಿಯೇ ನಡೆಯುವಂಥದು. ಕಾಮಜ್ವರದಿಂದ ಬಳಲುವ ದಂಪತಿಗಳು ಅತ್ಯಂತ ಗುಪ್ತಸ್ಥಳಕ್ಕೆ ಧಾವಿಸಿ ಸಂತಾನೋತ್ಪತ್ತಿಯ ಚಟುವಟಿಕೆಯಲ್ಲಿ ಮೈಮರೆಯುವವು. ಕಾಗೆಗಳು ಒಂದಾಗುವುದನ್ನು ಕಾಣಬೇಕಾದರೆ ಅದಕ್ಕಾಗಿ ಹೊಂಚುಹಾಕಿ ಕಾದು ಕೂಡ್ರದೇ ಬೇರೆ ವಿಧಿಯಿಲ್ಲ.

ಕಾರ್ಯೋನ್ಮುಖತೆ

ತಾನು ತಂದೆಯಾಗಲಿರುವೆನೆಂದು ಅರಿತೊಡನೆ ಕಾಕರಾಜ ಕಾರ್ಯೋನ್ಮುಖಿ. ಕೋತಿಗಳಂತೆ ಮನೆಯಿಲ್ಲದೇ ಸಂಸಾರ ಕಟ್ಟಿಕೊಂಡು ಇರುವದರಲ್ಲಿ ವಿಶ್ವಾಸವಿಡದ ಕಾಗೆ, ಈಗ ಗೂಡಿನ ನಿರ್ಮಾಣಕಾರ್ಯದಲ್ಲಿ ತೊಡಗುವದು. ಸುತ್ತಮುತ್ತಲೂ ಹರಡಿಕೊಂಡಿರುವ ಒಣಕಡ್ಡಿಗಳನ್ನು ಸಂಗ್ರಹಿಸಿ, ರೆಂಬೆಗೆ ಟಿಸಿಲು ಒಡೆಯುವಲ್ಲಿ ಅದನ್ನು ಜೋಡಿಸಲಾರಂಭಿಸುವದು. ತನ್ನ ಆಜನ್ಮ ವೈರಿಯಾದ ಹದ್ದಿಗೆ ಕಾಣದಂತೆ ಮುನ್ನೆಚ್ಚರಿಕೆ ವಹಿಸುವದಲ್ಲದೆ ಆ ತಾಣದ ಬಳಿ ಅಲ್ಲಿ ಇಲ್ಲಿ ಕುಳಿತು, ಬೇರೆ ಯಾರೂ ತನ್ನನ್ನು ಹಿಂಬಾಲಿಸುತ್ತಿಲ್ಲವೆಂದು ಖಚಿತಪಡಿಸಿಕೊಂಡು ಬಾಯಲ್ಲಿದ್ದ

ಕಡ್ಡಿಯನ್ನು ಗೂಡಿಗೆ ಸೇರಿಸುವದು. ಗೃಹನಿರ್ಮಾಣಕ್ಕೆ ಬೇಕಾಗುವ ತಾಂತ್ರಿಕ ಜ್ಞಾನವಾಗಲೀ ಅಂದಚೆಂದದ ಕಲ್ಪನೆಯಾಗಲೀ ಕಾಗೆಗೆ ಇಲ್ಲದ್ದರಿಂದ, ಕೆಲವೊಮ್ಮೆ ಕಷ್ಟಪಟ್ಟು ಸಂಗ್ರಹಿಸಿದ ಕಡ್ಡಿಗಳು ನೆಲಕ್ಕೆ ಉರುಳುವವು. ಜಾರಿದುದನ್ನು ತಿರುಗಿ ತರುವ ಗೋಜಿಗೆ ಹೋಗದೆ, ಇನ್ನಷ್ಟು ರೆಂಬೆಗಳನ್ನು ಮರಗಳಿಂದಲೇ ಮುರಿದು ತರುವದು. ಅನಿರೀಕ್ಷಿತ ಮಳೆ ಗಾಳಿಗಳಿಂದ ಗೂಡೇ ನೆಲಕ್ಕೆ ಉರುಳುವ ಪ್ರಸಂಗಗಳು ಬರುತ್ತವೆ. ಮರಗಳು ಭರದಿಂದ ಕಣ್ಮರೆಯಾಗುತ್ತಿರುವ ಈ ದಿನಗಳಲ್ಲಿ ನಗರವಾಸಿ ಕಾಗೆಗಳು, ದೀಪಸ್ತಂಭ, ದೂರವಾಣಿಯ ಕಂಬ, ರೇಲ್ವೆ ಸೂಚಕಗಳನ್ನು ತಮ್ಮ ಗೂಡುಗಳಿಂದ ಅಲಂಕರಿಸುವವು. ಮುಂಬಯಿಯಲ್ಲಿ ಕೆಲಕಾಲದಿಂದ ತೆರೆಯದ ಚಶ್ಮಾ (ಕನ್ನಡಕ) ಅಂಗಡಿಯೊಂದರ ಕಿರಿದಾದ ಕಿಡಕಿಯೊಳಗಿಂದ ಒಳಗೆ ನುಗ್ಗಿ, ಕೇವಲ ಚಶ್ಮಾದ ಫ್ರೇಮುಗಳಿಂದಲೇ ಗೂಡುಕಟ್ಟಿದ ಘಟನೆ ವರದಿಯಾಗಿದೆ.

ಕಾಗೆಯ ಸಂತಾನೋತ್ಪತ್ತಿ ಚಟುವಟಿಕೆಗಳ ಮೇಲೆ ಉಷ್ಣತೆ ಮತ್ತು ಆರ್ದ್ರತೆಗಳ ನಿಯಂತ್ರಣ ವಿಪರೀತ. ಕರಾವಳಿ ಪ್ರದೇಶದಲ್ಲಿ ಏಪ್ರಿಲ್-ಮೇ ತಿಂಗಳುಗಳಲ್ಲಿ ಗೂಡು ಕಟ್ಟಲಾರಂಭಿಸಿದರೆ, ಬಯಲು ಪ್ರದೇಶದಲ್ಲಿ ಮೇ-ಜೂನ್ ತಿಂಗಳಲ್ಲಿ ಈ ಚಟುವಟಿಕೆಗಳು ಕಾಣಸಿಗುವವು. ಶೀತಪ್ರದೇಶದಲ್ಲಿ ಇನ್ನೂ ವಿಳಂಬವಾಗುವದು. ಗಂಡು ಗೂಡು ಕಟ್ಟುವ ಕೆಲಸ ಮುಗಿಸಿದಾಗ ಹೆಣ್ಣು ರಾಣಿಯಂತೆ ಹಾರಿಬಂದು, ನೀಲಿಮಿಶ್ರಿತ ಕಂದು ಚುಕ್ಕೆಗಳಿರುವ ನಾಲ್ಕೈದು ಮೊಟ್ಟೆಗಳನ್ನು ಇಡುತ್ತದೆ. ಪ್ರಸೂತಿಯ ಮಡಿವಂತಿಕೆಯಲ್ಲಿ ಕಾಕವರ್ಗಕ್ಕೆ ನಂಬಿಕೆ ಯಿಲ್ಲದ್ದರಿಂದ ಸರದಿಯಂತೆ ಗಂಡು-ಹೆಣ್ಣು ಆಹಾರದ ಅನ್ವೇಷಣೆಯಲ್ಲಿ ಮತ್ತು ಕಾವು ಕೊಡುವದರಲ್ಲಿ ಪಾಲುಗೊಳ್ಳುವವು.

ಕೋಗಿಲೆಯ ಕುಯುಕ್ತಿ

ಸೋಮಾರಿತನವೇ ಮೈವೆತ್ತ ಕೋಗಿಲೆ, ಇದೇ ಅವಕಾಶಕ್ಕಾಗಿ ಕಾದುಕೊಂಡಿರುತ್ತದೆ. ಗಂಡು ಕೋಗಿಲೆ, ಕಾಗೆಯ ಗೂಡಿನ ತೀರ ಸನಿಹಕ್ಕೆ ನುಸುಳಿಕೊಂಡು ಕೂಹೂs ಕೂಹೂs ಎಂದು ಚೀರಿಡುತ್ತದೆ. ತನ್ನ ಮೊಟ್ಟೆಗಳಿಗೆಲ್ಲಿ ಗಂಡಾಂತರ ಬಂದೀತೋ! ಎಂದು ಕಾವು ಕೊಡುತ್ತಿದ್ದ ಕಾಗೆ ಅದನ್ನು ಬೆನ್ನಟ್ಟಿಕೊಂಡು ಓಡುತ್ತದೆ. ಅಷ್ಟರಲ್ಲಿ ಹೆಣ್ಣುಕೋಗಿಲೆ ಒಂದೆರಡು ಮೊಟ್ಟೆಗಳನ್ನು ಕಾಗೆಯ ಗೂಡಿಗೆ ಸೇರಿಸಿ, ತನ್ನ ಕರ್ತವ್ಯದಿಂದ ಜಾರಿಕೊಂಡುಬಿಡುತ್ತದೆ. ತನ್ನ ಗೂಡಿನತ್ತ ಸುಳಿದಾಡುತ್ತಿರುವ ಗಂಡುಕೋಗಿಲೆಯನ್ನು ಓಡಿಸಿ ಜಂಬದಿಂದ ಹಿಂದಿರುಗಿದ ಕಾಗೆಗೆ ತನ್ನ ಮೊಟ್ಟೆಗಳ ಸಂಖ್ಯೆಯಲ್ಲಿ ಹೆಚ್ಚಳವಾದದ್ದು ಲಕ್ಷ್ಯಕ್ಕೆ ಬರುವದೇ ಇಲ್ಲ. ಅವುಗಳ ಸಮಾಜದಲ್ಲಿ ಉತ್ತಮ ಗಣಿತಶಿಕ್ಷಕನ ಕೊರತೆ ಇದ್ದಂತಿದೆ! ಎಂಥ ಪ್ರಸಂಗದಲ್ಲಿಯೂ ಜಾಣ್ಮನ, ಚಾಣಾಕ್ಷತನದಿಂದ ವರ್ತಿಸುವ ಕಾಗೆ, ಕೋಗಿಲೆಯಿಂದ ಹೇಗೆ ಮೋಸ ಹೋಗುತ್ತದೆ ಎಂಬುದೇ ಆಶ್ಚರ್ಯದ ಮಾತು. ಬಹುಶಃ ಕಾಗೆಯ ಈ ಬೆಪ್ಪುತನ ಲಕ್ಷಿಸಿಯೇ, ನರಿಯಣ್ಣ ಕಾಕರಾಜನನ್ನು ಹೊಗಳಿ ಹಾಡಹಚ್ಚಿ ಮಾಂಸದ ತುಂಡಿನಿಂದ ವಂಚಿತನನ್ನಾಗಿಸಿದ ಘಟನೆಯ ಕವಿತೆ ಹುಟ್ಟಿಕೊಂಡಿರಬೇಕು!

ಮೊಟ್ಟೆಗಳಿಂದ ಮರಿಗಳು ಹೊರಗೆ ಬಂದ ಮೇಲಷ್ಟೆ ಕಾಗೆಗೆ ತಾನು ಮೋಸಹೋದದ್ದು ಅರಿವಾಗುತ್ತದೆ. ಕೂಡಲೇ ಕೋಗಿಲೆಮರಿಯನ್ನು ಗೂಡಿನಿಂದ ಓಡಿಸಿಬಿಡುತ್ತದೆ. ಹಸಿದಾಗೆಲ್ಲ ಕಾಗೆಮರಿಗಳು ಬಡಕಲು ಧ್ವನಿಯಿಂದ ಚೀರಿಟ್ಟಾಗ, ಅವುಗಳಿಗೆ ತಂದೆ-ತಾಯಿಗಳು ಹುಳ-ಹುಪ್ಪಡಿಗಳ ಗುಟುಕು ಕೊಡುತ್ತವೆ. ಆಸೆಯ ಮರಿಗಳು ಇನ್ನಷ್ಟು ಆಹಾರಕ್ಕಾಗಿ ಗೋಗರೆಯುವವು. ಸ್ವಲ್ಪ ರೆಕ್ಕೆ ಬಲಿತು ಹಾರುವಂತಾದಾಗ ಸ್ಪರ್ಧೆಯಿಂದ ಗೂಡಿನ ಹೊರಗೆ ಓಡಿ ಬಂದು, ಹೆಚ್ಚಿನ ಗುಟುಕಿಗೆ ಪಾಲಕರನ್ನು ಪೀಡಿಸಲಾರಂಭಿಸುವವು. ಅವು ಹಿಂಭಾಗದ ಗರಿಗಳನ್ನು ಬೀಸಣಿಕೆಯಂತೆ ಬೀಸುತ್ತ, ಕೋರಿಕೆಯ ಕಣ್ಣುಗಳಿಂದ ಚುಂಚನ್ನು ನಸುತೆರೆಯುವುದನ್ನು ಕಂಡರೆ, ಕಾಗೆಗೂ ಚೆಲುವಿದೆ ಎಂದು ಅನ್ನಿಸುತ್ತದೆ. ಬಲಿತ ಮರಿ, ಸರ್ವವಿಧದಲ್ಲಿ ತಂದೆ-ತಾಯಿಗಳನ್ನು ಹೋಲುವದರಿಂದ ಅದನ್ನು ಬೇರ್ಪಡಿಸುವದು ಕಷ್ಟ. ಆದರೆ ಮರಿಗಳ ಒಳಬಾಯಿಯ ಚರ್ಮ ಎಳೆತನದಲ್ಲಿ ಕೆಂಪಾಗಿದ್ದು, ಅದು ಕರಿಯ ಬಣ್ಣಕ್ಕೆ ಪರಿವರ್ತನೆ ಹೊಂದುವುದು ಪ್ರೌಢಾವಸ್ಥೆಯಲ್ಲಿಯೇ. ಈ ಅಂಶವನ್ನು ಗಮನಿಸಿ ಮರಿಗಳನ್ನು ವಿಂಗಡಿಸಬಹುದು. ಕೆಲಬಾರಿ ಶ್ವೇತವರ್ಣದ ಮರಿಗಳೂ (ಆಲ್‌ಬಿನೋ) ಹುಟ್ಟುವದುಂಟು. ಅಂಥವನ್ನು ಮೃಗಾಲಯದವರು ಗಮನಿಸಿ ತಂದು ಸಾಕಿ ಸಲಹದಿದ್ದರೆ, ಕಾಗೆಗಳು ತಮ್ಮ ಕುಟುಂಬಕ್ಕೆ ಸೇರಿದವಲ್ಲವೆಂದು ಅವನ್ನು ಕುಕ್ಕಿ ಕೊಲ್ಲುವುದು ಖಂಡಿತ.

ಪಿತೃರೂಪೀ ಕಾಗೆ

ಕಾಗೆಗಳಿಗೆ ವೈಕುಂಠ-ಕೈಲಾಸಗಳೊಡನೆಯಾಗಲಿ, ಯಮಧರ್ಮರಾಯನೊಡನಾಗಲಿ, ನೇರಸಂಪರ್ಕ ಇದೆ ಎಂದು ನಂಬಲು ಯಾವ ವೈಜ್ಞಾನಿಕ ಆಧಾರಗಳೂ ಸಿಕ್ಕಿಲ್ಲ. ಮೃತರ ನೆನಪಿಗೆ ವೈಕುಂಠಸಮಾರಾಧನೆ, ವಾರ್ಷಿಕ ತಿಥಿಗಳನ್ನು ಏರ್ಪಡಿಸಿದಾಗ, ಗದ್ದಲದಿಂದಾಗಿ ಕಾಗೆಗಳ ಬಣ ಬೆದರಿಕೊಳ್ಳುತ್ತದೆ. ಮಾನವರು ಧಾರಾಳವಾಗಿ ಪಿಂಡದ ರೂಪದಲ್ಲಿ ಅನ್ನ, ಇತರ ಸಿಹಿ ಪದಾರ್ಥಗಳನ್ನು ಕೊಡ ಬಂದಾಗ, ಈ ಅಪರೂಪದ ಔದಾರ್ಯವನ್ನು ಅರ್ಥಮಾಡಿಕೊಳ್ಳುವುದು ಕಾಗೆಗೆ ಕಷ್ಟಕ್ಕಿಟ್ಟುಕೊಳ್ಳುತ್ತದೆ. ಪ್ರತಿದಿನವೂ ಕಷ್ಟ ಪಟ್ಟು, ಮೋಸಮಾಡಿ ಸಂಪಾದಿಸಬೇಕಾಗಿದ್ದ ಆಹಾರವನ್ನು ಇಂದು ಮಾನವನೇ ತಾನಾಗಿ ಆಮಂತ್ರಿಸಿ ರಾಶಿ ರಾಶಿಯಾಗಿ ಕೊಡಮಾಡಿದ್ದರಿಂದ ಏನೋ ಸಂಚು ಇರಬೇಕೆಂಬ ಸಂಶಯ ಅವುಗಳಿಗೆ. ಆದ್ದರಿಂದ ಹತ್ತಿರ ಸುಳಿಯುವದೇ ಇಲ್ಲ. ಈ ನಡವಳಿಕೆಯನ್ನು ಅಪಾರ್ಥ ಮಾಡಿಕೊಂಡ ಮಾನವ, ಮೃತನ ಸಕಲ ಅಭೀಷ್ಟಗಳನ್ನೂ ಪೂರೈಸುವದಾಗಿ ಅಂಗಲಾಚಿ ಬೇಡಿಕೊಳ್ಳುತ್ತಾನೆ. ಇದೇ ಸಮಯದಲ್ಲಿ ಹಸಿವನ್ನೂ ತಾಳಲಾರದೇ ಎದುರಿಗಿದ್ದ ಅನ್ನಭಾಂಡಾರವನ್ನು ಬಿಡಲಾರದೇ ಕಸಿವಿಸಿಯಿಂದಲೇ ಕಾಗೆ ತನ್ನ ಬಳಗವನ್ನು ಕೂಗಿಕರೆದು ಬಾಯಿ ಹಾಕಿಯೇ ಬಿಡುತ್ತದೆ. ನಮ್ಮ ವಂಶಜರೇ ಕಾಕರೂಪದಲ್ಲಿ ಬಂದು ಈ ರಸದೌತಣದ ಆತಿಥ್ಯ ಸ್ವೀಕರಿಸುತ್ತಾರೆಂಬ ಈ ನಂಬಿಕೆಯನ್ನು ಭ್ರಾಂತಿಯೆನ್ನಲು ಅಡ್ಡಿಯಿಲ್ಲ. ಆದರೆ ಊರ ಕೊಳಚೆಯನ್ನೆಲ್ಲ ತನ್ನದೇ ವಿಧದಲ್ಲಿ ಸ್ವಚ್ಛಗೊಳಿಸುವ, ಸತ್ತ ಪ್ರಾಣಿಗಳನ್ನು ತಿಂದು ಹವೆಯನ್ನು ಅನಾರೋಗ್ಯತೆಯಿಂದ ರಕ್ಷಿಸುವ ಈ

ನೈಸರ್ಗಿಕ ಝಾಡಮಾಲಿಗಳನ್ನು ವರ್ಷಕ್ಕೆ ಒಮ್ಮೆಯಾದರೂ ನೆನೆದು ಕೃತಜ್ಞತೆಯ ಕೂಳನ್ನಿಡಲೆಂದೇ ನಮ್ಮ ಹಿಂದಿನವರು ಈ ಕಾಕಪಿಂಡದ ಏರ್ಪಾಡು ಮಾಡಿರಬೇಕು.

ಉಪ(ದ್ರವ)ಕಾರಿ

ಕಾಕಸಮಾಜದ ಮೇಲಿನ ಆಪಾದನೆಗಳು ಅಪಾರ. ಹಣ್ಣಿನ ತೋಟಗಾರನ ಗೋಳಾದರೋ, "ಇವು ಪ್ರತಿದಿನ ಹೊಟ್ಟೆ ಬಿರಿಯುವಷ್ಟು ಹಣ್ಣು ತಿಂದುಹೋದರೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಹಲಸು, ಮಾವು, ಸೇಬು, ಪಪಾಯಿ ಮುಂತಾದ ಹಣ್ಣುಗಳನ್ನು ಇನ್ನೂ ಕಾಯಿಯಿರುವಾಗಲೇ ಕುಕ್ಕಿ ಕುಕ್ಕಿ, ಚೆನ್ನಾಗಿಲ್ಲವೆಂದು ಅರ್ಧಭಾಗವನ್ನು ನೆಲಕ್ಕುರುಳಿಸಿ ಉಳಿದದ್ದನ್ನು ಗಿಡದಲ್ಲಿ ಹಾಗೇ ನೇತುಬಿಟ್ಟು ಹಾರಿಹೋಗುವವು. ತಿನ್ನುವುದು ಒಂದು ಗ್ರಾಂ, ಕೆಡಿಸುವದು ಕಿಲೋಗ್ರಾಂ" ಎಂದು. ಕೃಷಿಕನ ಆರೋಪ ಬೇರೆ: "ಎಣ್ಣೆಗಾಗಿ ತೆಂಗಿನಕಾಯಿ ಒಣ ಹಾಕಿರಲಿ, ಬೀಜಕ್ಕಾಗಿ ಗೋಡಂಬಿ ಇಟ್ಟಿರಲಿ, ಕಚ್ಚಿಕೊಂಡು ಪಲಾಯನ ಮಾಡಿದವೇ! ಮರದ ಮೇಲೆ ಕುಳಿತು ತಿನ್ನಲೆತ್ನಿಸಿ 'ಗಟ್ಟಿ, ಚೆನ್ನಾಗಿಲ್ಲ' ಎಂದು ಮುಖ ಗಂಟುಹಾಕಿ ಬಿಸಾಕಿದವೇ!" ಪಕ್ಷಿಧಾಮದ ಅಧಿಕಾರಿಗಳಿಗಂತೂ ಕಾಗೆ ಸಿಂಹಸ್ವಪ್ನ. ಟಿಬೆಟ್, ಸೈಬೀರಿಯಾಗಳಿಂದ ವಲಸೆಬರುವ ಅಪರೂಪದ ಹಕ್ಕಿಗಳು ವಾಸಸ್ಥಾನಕ್ಕಾಗಿ ಮರಗಳನ್ನು ಹುಡುಕುತ್ತಿದ್ದಂತೆ ಕಾಗೆಗಳು ಅವಕ್ಕೆ ಇಲ್ಲದ ಕಿರುಕುಳ ಕೊಡುತ್ತವೆ. ಅವು ಗೂಡು ಕಟ್ಟಿದ ಮೇಲೂ, ಮೊಟ್ಟೆಗಳನ್ನು ಕದಿಯುವದು, ಒಡೆದು ಹಾಕುವದು, ಅವುಗಳ ಮರಿಗಳನ್ನು ತಿನ್ನುವುದು ಇತ್ಯಾದಿ. ಆದ್ದರಿಂದ ಕಾಗೆಗಳು ಪ್ರಬಲವಾಗಿರುವ ಕಾಡಿನಲ್ಲಿ ಇನ್ನಿತರ ಪಕ್ಷಿಗಳು ವಸಾಹತು ಮಾಡಲು ಬೇಜಾರುಪಟ್ಟುಕೊಳ್ಳುತ್ತವೆ. ದನ ಕಾಯುವವರಿಗೂ ಕಾಗೆಯ ಉಪದ್ರವ ತಪ್ಪಿದ್ದಲ್ಲ. ಮೇಯುತ್ತಿರುವ ದನಕರುಗಳ ಗುದದ್ವಾರ, ಕಣ್ಣು ಕಿವಿಗಳನ್ನು ಕುಕ್ಕುವವಲ್ಲದೇ, ಎಲ್ಲಾದರೂ ಕಾಣಿಸಿಕೊಂಡ ಕಿರಿಗಾಯಗಳನ್ನು ಕುಕ್ಕಿ ಹಿರಿದನ್ನಾಗಿ ಮಾಡಿ ಗಾಸಿಗೊಳಿಸುತ್ತವೆ. ತಾಯಂದಿರಂತೂ ಕಾಗೆಗೆ ಶಾಪ ಹಾಕಿದಷ್ಟೂ ಕಡಿಮೆಯೇ! ಶಾಲೆಗೆ ಹೊರಟ ಮಕ್ಕಳಿಗೆ ಕಟ್ಟಿಕೊಟ್ಟ ತಿಂಡಿಪೊಟ್ಟಣ ಕಸಿದುಕೊಂಡು ಹಾರುವದು. ತಿಂದು ಇಟ್ಟ ಪುಟ್ಟ ಪ್ಲೇಟು, ಚಮಚಗಳನ್ನು ಒಯ್ದು ಎತ್ತೆತ್ತಲೋ ಹಾರಿ ಚೆಲ್ಲಿಬಿಡುವದು. ಎಷ್ಟೋ ಸಲ ಕುಡಿದು ಇಟ್ಟ ಚಹಾದ ಕಪ್ಪು ಬಸಿಗಳನ್ನು ನೆಲಕ್ಕುರುಳಿಸಿ ಒಡೆದೇ ಇಡುವುದು...

ಕಲಕತ್ತೆಯಲ್ಲಿ ಕಾಗೆಗಳದೇ ಸಾಮ್ರಾಜ್ಯ. ಬಂಗಾಲಿಗಳಿಗೆಲ್ಲ ತಿಂಡಿತೀರ್ಥ ಸೇವಿಸಿ ರಸ್ತೆಯ ಪಕ್ಕದಲ್ಲೇ ದೊನ್ನೆ, ಮಣ್ಣಿನ ಕುಡಿಕೆಗಳನ್ನು ಒಗೆಯುವ ಅಭ್ಯಾಸ. ಇವಕ್ಕೆಲ್ಲ ತಾನೇ ಬಾಧ್ಯಸ್ಥನೆಂಬ ದೃಢವಾದ ನಂಬಿಕೆಯಿಂದ, ಇತರ ಪಶುಪಕ್ಷಿಗಳಿಗೆ ಹತ್ತಿರ ಸುಳಿಯಬಿಡುವುದಿಲ್ಲ ಕಾಗೆ. ಅರಬರನ್ನೆಲ್ಲ ಸಡೆಬಡೆದ ಯಹೂದಿಯರೂ ಕಾಗೆಗಳ ಕಿರುಕುಳದಿಂದ ಬೇಸತ್ತಿದ್ದಾರೆ ಎಂದರೆ ನಂಬುವುದು ಕಷ್ಟ. ಅಲ್ಲಿ ಅವು ಮನೆಗೆ ಹಾಕಿದ ಗಾಜುಗಳನ್ನು ಒಡೆದು, ಮನೆಯನ್ನು ಪ್ರವೇಶಿಸಿ, ತಿಂಡಿ-ತಿನಿಸುಗಳನ್ನು ಮೆದ್ದು, ಉಳಿದವನ್ನು ಹಾಳು ಮಾಡಿಬಿಡುತ್ತವೆ. ಅಷ್ಟೇ ಅಲ್ಲ, ಮನೆಯಲ್ಲಿದ್ದ ಮಕ್ಕಳು ಮುದುಕರ ಮೇಲೆ ಹಲ್ಲೆ ನಡೆಸುತ್ತವೆ! ಇಂಥ ಭಯೋತ್ಪಾದಕ

ಕಾಗೆಗಳನ್ನು ಹೇಗೆ ನಿಯಂತ್ರಿಸುವುದೆಂದು ಅಲ್ಲಿಯ ವಿಜ್ಞಾನಿಗಳು ತಲೆಕೆರೆದುಕೊಳ್ಳುವಂತೆ ಆಗಿದೆ. ನಮ್ಮ ಹಳ್ಳಿಗರು ಕರಿ ಬಟ್ಟೆ, ಸುಟ್ಟ ತೆಂಗಿನಕಾಯಿ ಸಿಪ್ಪೆ, ಇಲ್ಲವೇ ಸತ್ತಕಾಗೆಯನ್ನು ತೂಗಹಾಕಿದರೆ ಕಾಗೆಗಳ ಉಪಟಳ ಕಡಿಮೆಯಾಗುತ್ತದೆ ಎನ್ನುತ್ತಾರೆ. ಅದರ ಜೊತೆಗೆ, ಬೆತ್ತ, ಕೋಲು, ಲಾಠಿಗಳನ್ನು ಇಟ್ಟರೆ ಇನ್ನೂ ಉತ್ತಮವಂತೆ. ನಗರಗಳಲ್ಲಿ ಕಿಡಕಿ ಬಾಗಿಲುಗಳಿಗೆ ಪರದೆ, ಜಾಳಿಗಳನ್ನು ಬಿಗಿದು ತಾವು ಪಂಜರಗಳಲ್ಲಿ ವಾಸಿಸುತ್ತ ಕಾಗೆಗಳಿಂದ ಸಂರಕ್ಷಣೆ ಪಡೆಯುತ್ತಾರೆ ನಾಗರಿಕರು. ಇನ್ನೂ ಕೆಲವರು, ಕೀಟನಾಶಕ ಮಿಶ್ರಿತ ಆಹಾರದಿಂದ ಅವುಗಳ ವಂಶವನ್ನೇ ನಿರ್ನಾಮ ಮಾಡಲು ಯತ್ನಿಸುತ್ತಾರೆ. ಆದರೆ ಕಾಗೆಗಳು ಉಪಯುಕ್ತ ಸಹಜೀವಿಗಳು; ನಮ್ಮಷ್ಟೇ ಅವಕ್ಕೂ ಜಗತ್ತಿನಲ್ಲಿ ಬಾಳಿ ಬದುಕುವ ಅಧಿಕಾರ ಇದೆ ಎಂದು ಅರಿತು, ಅವಕ್ಕೆ ಅನುವು ಮಾಡಿಕೊಡುವದು ಕ್ಷೇಮಕಾರಿ.

❑

ಉದರ ನಿರ್ವಹಣೆ

ಸರ್ವಭಕ್ಷಕ

ಕಾಕವೃಂದವು ತನ್ನ ಉದರನಿರ್ವಹಣೆ ಮಾಡಿಕೊಳ್ಳುವ ವಿಧಾನಗಳು ಅತ್ಯಂತ ಕುತೂಹಲಕಾರಿ ಮತ್ತು ವಿಸ್ಮಯಕಾರಿಯಾಗಿವೆ. ಕೋಗಿಲೆಗೆ ಫಲಾಹಾರ, ಹದ್ದಿಗೆ ಮಾಂಸಾಹಾರ, ಹೆಜ್ಜಾರ್ಲೆಗೆ ಮತ್ಸ್ಯಾಹಾರ, ಪಾರಿವಾಳಕ್ಕೆ ಕಾಳುಕಡಿಗಳೇ ಬೇಕು. ನಮ್ಮ ಕಾಕರಾಜನಿಗಾದರೋ ಇವೆಲ್ಲ ಅಲ್ಲದೇ ಬ್ರೆಡ್, ಬಿರಿಯಾನಿ, ಬಿಸ್ಕೀಟು, ಬಜ್ಜಿ, ಪಕೋಡಗಳನ್ನೂ ತಿಂದು ತೇಗುವ ಮನೋವೈಶಾಲ್ಯ ಇದೆ! ಇವನ್ನು ದೊರಕಿಸುವ ಆತನ ಉಪಾಯಗಳಾದರೂ ಅಪೂರ್ವವಾಗಿವೆ. ಇವಲ್ಲದೇ ಹೊಸ ಹೊಸ ವಿಧಾನಗಳನ್ನು ಸಂಶೋಧಿಸಿ ಜಾರಿಯಲ್ಲಿ ತರುತ್ತಲೇ ಇರುತ್ತಾನೆ.



ಪಕೋಡದೊಂದಿಗೆ ಕಾಗೆ

ಆಹಾರ ಸಂಪಾದನೆಯಲ್ಲಿ ಆತ ತೋರ್ಪಡಿಸುವ ಜಾಣ್ಮೆಯ ವೈಖರಿಗಳು ಎಂಥ ಚಾಣಾಕ್ಷನನ್ನೂ ತಲೆ ತಗ್ಗಿಸುವಂತೆ ಮಾಡಬಲ್ಲವು. ಇದಕ್ಕಾಗಿ ಕಲ್ಲು, ಕೋಲುಗಳಂತಹ ಯಾವ ಸಾಧನಗಳ ಮೊರೆಹೋಗದೆ ಕೇವಲ ತನ್ನ ಕಾಲು, ಕೊಕ್ಕುಗಳನ್ನೇ ನಂಬಿರುತ್ತಾನೆ ಎಂದರೆ ನಂಬುವುದು ಕಷ್ಟ!

ಗಣಪನಾಯ್ಕರದ್ದು ದಿನಸಿ ಅಂಗಡಿಯಿದೆ. ಇಲಿಗಳ ಕಾಟ ಅಸಹನೀಯವಾದ್ದರಿಂದ ರಾತ್ರಿ ಅಂಗಡಿ ಮುಚ್ಚುವ ಪೂರ್ವದಲ್ಲಿ, ಇಲಿ ಬೋನಿಗೆ ಭಜಿ ಸೇರಿಸಿ ಇಲಿಯನ್ನು ಆಕರ್ಷಿಸುವ ಏರ್ಪಾಡುಮಾಡಿ, ಮನೆ ಸೇರಿಕೊಳ್ಳುವದು ರೂಢಿ. ಪ್ರತಿದಿನವೂ ಒಂದೆರಡು ಇಲಿಗಳು ಮೋಸಹೋಗಿ ಬೋನಿನಲ್ಲಿ ಬಂಧಿತವಾಗಿಬಿಡುತ್ತಿದ್ದವು. ಮರುದಿನ ಅಂಗಡಿ ತೆಗೆದಾಕ್ಷಣ ಅವುಗಳನ್ನು ಆದಾಗಲೇ ನೆರೆಯಲಾರಂಭಿಸಿದ ಕಾಕಸಮೂಹಕ್ಕೆ ಅರ್ಪಿಸುವದು ನಾಯ್ಕರ ಪದ್ಧತಿ. ಹಸಿದ ಕಾಗೆಗಳು ಅರ್ಧಗಂಟೆ ಮೊದಲೇ ನಾಯ್ಕರ ಬರವಿಗೆ ಕಾದಿರುತ್ತಿದ್ದವು. ಇಲಿರಾಯ ಪಂಜರದಿಂದ ಹೊರಬಿದ್ದು, ಅಡಗುದಾಣಕ್ಕೆ ಧಾವಿಸುವಷ್ಟರಲ್ಲಿ ಕಾಗೆಯೊಂದರ ಪಂಜಗಳು ಅದನ್ನು ಬಂಧಿಸಿಬಿಡುತ್ತಿದ್ದವು. ಕಾಗೆಯ ತಾಳ್ಮೆಯನ್ನು ಮೆಚ್ಚಬೇಕು! ಅದು ಕೂಡಲೇ ತನ್ನ ಬೇಟೆಯನ್ನು ಕೊಂದು ಭಕ್ಷಣೆಯನ್ನು ಪ್ರಾರಂಭಿಸುವ ಬದಲಾಗಿ ಅದನ್ನು ಬಯಲೊಂದರ ಮಧ್ಯದಲ್ಲಿ ಒಯ್ದಿಟ್ಟು ಜೀವದಾನ ನೀಡಿದಂತೆ ನಟಿಸುವದು. ಇದೇ ಸುಸಂಧಿ!—ಎಂದು ಭಾವಿಸಿದ ಮೂಷಕನು ಕಾಲಿಗೆ ಬುದ್ಧಿ ಹೇಳುವಷ್ಟರಲ್ಲಿ ಕಾಕರಾಜನು ಅದರ ಮೇಲೆ ಎರಗಿ ಪುನಃ ಅದೇ ಸ್ಥಾನದಲ್ಲಿ ಹೊತ್ತು ತಂದು ಸ್ಥಾಪಿಸುವನು. ಕಾಗೆಯ ಈ ವಿನೋದ ವಿಹಾರ, ಬಹಳ ಹೊತ್ತು ನಡೆದ ಬಳಿಕ, ಇಲಿ ಅರೆಜೀವವಾಗಿ ಬವಳಿ ಬಂದು ಬೀಳುತ್ತದೆ. ಈ ಕ್ಷಣಕ್ಕಾಗಿ



ನಾಶ್ತಾಕ್ಕೆ ಇಲಿ ಸಿಕ್ಕಾಗ

ಕಾದಿರುವ ಕಾಗೆ, ಅದರ ಗುದದ್ವಾರವನ್ನು ಕುಕ್ಕುತ್ತ, ಅನ್ನನಳಿಕೆಯನ್ನು ಸಂಪೂರ್ಣವಾಗಿ ಹೊರಗೆ ಎಳೆದು ಅದರ ಭೋಜನ ಪ್ರಾರಂಭಿಸುತ್ತದೆ. ದಾರಿಹೋಕರಿಂದ ಭೋಜನಕ್ಕೆ ಅಡೆ-ತಡೆ ಉಂಟಾಗುವಂತೆ ಕಂಡುಬಂದರೆ, ಇಲಿಯ ಕಳೇಬರವನ್ನು ಎತ್ತಿಕೊಂಡು ಹತ್ತಿರದ ಮರವೇರುತ್ತದೆ.

ಅಲ್ಲಿ ಪ್ರತಿಸ್ಪರ್ಧಿಗಳು ದಾಳಿ ನಡೆಸಿದರೆ ಅದನ್ನು ಹೊತ್ತು ಇನ್ನೊಂದು ಆಶ್ರಯಕ್ಕೆ ಧಾವಿಸುತ್ತದೆ. ಹೊಟ್ಟೆ ಬಿರಿಯುವಷ್ಟು ಸೇವಿಸಿ, ಉಳಿದದ್ದನ್ನು ಯಾವುದಾದರೂ ಕಿಂಡಿಯಲ್ಲಿ ಸೇರಿಸಿ ಅದರ ಬಾಯಿಯನ್ನು ಒಣ ಎಲೆ ಇಲ್ಲವೇ ಚಿಕ್ಕ ಕಲ್ಲುಗಳಿಂದ ಮುಚ್ಚಿಬಿಡುತ್ತದೆ. ಹಸಿದಾಗೊಮ್ಮೆ ಜಾಗ್ರತೆಯಾಗಿ ಆಹಾರವನ್ನು ಹೊರಗೆಳೆದು ಭೋಜನವನ್ನು ಮುಂದರಿಸುವದು.

ಮರ್ತಪೈಗಳಿಗೆ ಮತ್ಸ್ಯಾಹಾರವೆಂದರೆ ಪಂಚಪ್ರಾಣ! ಅಂತೆಯೇ ಮಟಮಟ ಮಧ್ಯಾಹ್ನ ಮೀನು ಹೊತ್ತು ತರುವ ಕಡಲು ನಾವೆಗಳು ಬಂದರಕ್ಕೆ ಹಿಂದಿರುವಾಗ ಅಲ್ಲಿ ಉಪಸ್ಥಿತರಿದ್ದು ತಾಜಾ ಮೀನು ಕೊಂಡು ಮನೆಗೆ ಬರುವುದು ವಾಡಿಕೆ. ಬಳಿಕ ಸ್ನಾನಕ್ಕೆ ಇಳಿದರೆ, ಪತ್ನಿ ಮಸಾಲೆ ರುಬ್ಬುವಳು. ಕೆಲಸದವಳು ಮೀನು ಕೊಯ್ದು ಸ್ವಚ್ಛ ಮಾಡಲು ಪ್ರಾರಂಭಿಸುವಳು. ಇದಕ್ಕಾಗಿ ಕಾಯುತ್ತಿದ್ದ ನಾಯಿ, ಬೆಕ್ಕು, ಕಾಗೆಗಳ ಸಂತೆಯೇ ಹಿತ್ತಲಲ್ಲಿ ನೆರೆಯುವದು. ಮೀನಿನ ಶಿರ, ಬಾಲ, ಕರುಳುಗಳಿಗಾಗಿ ಈ ಪ್ರಾಣಿಗಳಲ್ಲಿ ತೀವ್ರಸ್ಪರ್ಧೆಯ ಚೀರಾಟ, ಕಚ್ಚಾಟ ಮಾಮೂಲಿ. ಅಂತೆಯೇ ಕೆಲಸದವಳು ಕೋಲೊಂದನ್ನು ಜೊತೆಗಿಟ್ಟುಕೊಂಡಿರುತ್ತಾಳೆ. ಮೊಟ್ಟಮೊದಲು ಬೆಕ್ಕಿನ ಪಾಲು ಕೊಡಮಾಡಿದರೆ ಅದನ್ನು ಎತ್ತಿಕೊಂಡು ಅದು ಭಕ್ಷಿಸಲು ಗುಪಿತಸ್ಥಾನಕ್ಕೆ ಧಾವಿಸುತ್ತದೆ. ಆ ನಂತರ ಕೆಲಸದಾಕೆಯು ಆಕಾಶದತ್ತ ತೂರಿದ ಮೀನ ಅಂಗಾಂಗಗಳನ್ನು ಕಾಕಸಮೂಹ ಪಂಜಗಳಲ್ಲಿ ಸೆರೆಹಿಡಿದು, ದೂರದ ಮರದಲ್ಲಿ ಆರೂಢವಾಗಿ, ವಿರಾಮವಾಗಿ ಕುಕ್ಕಿ ಕುಕ್ಕಿ ಭಕ್ಷಿಸಲಾರಂಭಿಸುವದು. ತನ್ಮಧ್ಯೆ ನಾಯಿಗಳು, ತಮ್ಮ ಪಾಲನ್ನು ಸ್ವಾಹಾ ಮಾಡಿ, ಇನ್ನಿಷ್ಟಕ್ಕಾಗಿ ಹಲುಬುವವು. ಈ ಮತ್ಸ್ಯಭೋಜನದ ವಿಭಜನೆಯ ಏರ್ಪಾಡನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವದೇ ತಮಾಷೆಯಾಗಿರುತ್ತದೆ. ಕಾಗೆಗಳು ಗುರಿಯಿಟ್ಟು ತಮ್ಮ ಪಾಲನ್ನು ಪಡೆಯುವ ಕಸರತ್ತು, ಕ್ಯಾಮರಾಧಾರಿಗೆ ವಿರಳ ಕ್ಷಣದ ಆಹ್ವಾನವಾಗಿ ಪರಿಣಮಿಸುತ್ತದೆ.

ಋಷಿ-ಮುನಿಗಳಂತೆ ಫಲಾಹಾರದ ಆಸೆಯಾದಾಗ ಕಾಕತಂಡ, ಪ್ರಭು ವಕೀಲರ ಹಣ್ಣಿನ ತೋಟಕ್ಕೆ ದಾಳಿಯಿಡುತ್ತದೆ. ಕಾಯಿ, ಅರೆಹಣ್ಣುಗಳ ಗೊಡವೆಗೆ ಹೋಗದೇ ಪರಿಪಕ್ವವಾದ ಹಣ್ಣುಗಳನ್ನೇ ಅವು ಆರಿಸಿಕೊಳ್ಳುವದು ವಿಸ್ಮಯಕಾರಿ! ಅವನ್ನು ಕೀಳುವ ಗೊಡವೆಗೆ ಹೋಗುವದಿಲ್ಲ; ಪಟ್ಟಾಗಿ ಕುಳಿತಲ್ಲೇ ಕುಕ್ಕಲಾರಂಭಿಸುವವು. ಹೊರಕವಚ, ಸಿಪ್ಪೆಗಳಿಗೆ ತಮ್ಮ ಉದರದಲ್ಲಿ ಸ್ಥಳವಿಲ್ಲದ್ದರಿಂದ ನೆಲಕ್ಕೆ ಉರುಳಿಸುವವು. ರಸಭರಿತ ಹಣ್ಣುಗಳನ್ನು ಕೊಕ್ಕಿಗೆ ಸೇರಿಸಿ, ಗಂಟಲಲ್ಲಿ ಇಳಿಬಿಡಲು ಗಗನದತ್ತ ಮುಖಮಾಡುವವು. ಕಾಗೆಗೆ ಹಲ್ಲಿಲ್ಲದ್ದರಿಂದ ಚರ್ವಣ ಮಾಡಲಾರವು. ಹಣ್ಣುಮುದುಕರಂತೆ ರಸವನ್ನು ನುಂಗಿಬಿಡುವವು. ಅದು ಸಂಗ್ರಹ ಚೀಲವನ್ನು ಸೇರಿದ ನಂತರ ಪಚನಕ್ರಿಯೆ ಪ್ರಾರಂಭವಾಗುವದು. ಈಳಿಗೆ, ಚಾಕು-ಕತ್ತರಿಯ ಸಂಸ್ಕೃತಿಯಲ್ಲಿ ವಿಶ್ವಾಸವಿಡದ ಕಾಕಕುಟುಂಬ, ಮರದಲ್ಲಿ ಹಣ್ಣು ಗೊನೆಯಲ್ಲಿ ನೇತಾಡುತ್ತಿರುವಂತೆಯೇ ಕಲಾತ್ಮಕವಾಗಿ ಅದನ್ನು ತಿನ್ನುವದನ್ನು ವೀಕ್ಷಿಸುವದೇ ಕಣ್ಣಿಗೆ ಹಬ್ಬವಾಗಿರುತ್ತದೆ. ಪಂಜಗಳಿಂದ ಹಣ್ಣನ್ನು ಬಲವಾಗಿ ಬಿಗಿದಪ್ಪಿ, ಕೊಕ್ಕನ್ನು ಸುತ್ತಿಗೆಯಂತೆ ಅದಕ್ಕೆ ಅಪ್ಪಳಿಸುತ್ತ, ಹಣ್ಣಿನ ಅಂತರಾಳಕ್ಕೆ ದಾರಿಮಾಡಿಕೊಳ್ಳುವದು. ನಂತರ, ಹಣ್ಣನ್ನು ಅತ್ಯಂತ ಕಿರಿಯ ಹೋಳು ಮಾಡಿ ನುಂಗಲಾರಂಭಿಸುವದು. ಪಪಾಯಿ (ಪರಂಗಿ) ಹಣ್ಣನ್ನು ತಿನ್ನುವಾಗ, ಅದರ ಕರಿ ಬೀಜಗಳು

ಅಡ್ಡಿ ತಂದರೆ, ತೊಲಗಾಚೆ! ಎಂದು ಬೈಯುತ್ತ ನೆಲಕ್ಕುರುಳಿಸಿಬಿಡುವದು. ಮಾವಿನ ಹಣ್ಣಾದರೆ ಗೊರಟೆಯ ಭಾಗವನ್ನಷ್ಟೆ ಬಿಟ್ಟು ಉಳಿದದ್ದನ್ನು ಭಕ್ಷಿಸುವದು. ಹಲಸಿನ ಹಣ್ಣಾದರೆ, ತೊಳೆಗಳನ್ನು ಬೇರ್ಪಡಿಸಿ, ಬೀಜವನ್ನು ಬಿಡುವದು. ಹಣ್ಣಿನ ಮರಗಳಿಂದ ಗುಹಾಲಯದಂತೆ ಹಣ್ಣುಗಳನ್ನು ಕೊರೆದಿಟ್ಟ ಹೊರಕವಚಗಳು, ಕಾಗೆಗಳು ಭೋಜನ ಕೂಟ ನಡೆಸಿದ್ದರ ಅವಶೇಷಗಳಾಗಿ ಉಳಿಯುತ್ತವೆ. ಅದೆಷ್ಟೋ ಕೃಷಿಕರು ತಮ್ಮ ಕಾಯಿಗಳು ಬಲಿತಿವೆಯೇ ಎಂದು ನಿರ್ಧರಿಸಲು ಕಾಕರಾಜನ ಆಕ್ರಮಣವನ್ನೆ ಅವಲಂಬಿಸಿರುತ್ತಾರೆ. ಕಾಡಿನಲ್ಲಿ ಕಾಗೆಗಳಿಗೆ ಆಹುತಿಯಾದ ಹಣ್ಣುಗಳನ್ನು ಆದಿವಾಸಿಗಳು ತಮ್ಮವನ್ನಾಗಿ ಮಾಡಿಕೊಳ್ಳುತ್ತಾರೆ.

ಬಿಟ್ಟಿ ಭೋಜನ

ಕಿಸೆಯಲ್ಲಿ ಕಾಸಿಲ್ಲದಿದ್ದರೂ ಬೇಕಾದ ತಿಂಡಿತಿನಸು ಪಡೆಯುವ ಕೌಶಲವನ್ನು ಕಾಗೆಗಳಿಂದಲೇ ಕಲಿಯಬೇಕು! ಕೃಷ್ಣಪ್ಪನು ಸಂಜೆಗೆ ಹುಡುಕಿಕೊಂಡು ಬರುವ ಗಿರಾಕಿಗಳಿಗಾಗಿ ಬಿಸಿ ಬಿಸಿ ಬೋಂಡಾ, ವಡೆ, ಭಜಿಗಳನ್ನು ಕರಿಯುತ್ತಿರುವಾಗ, ಕಾಕದಂಪತಿ ಹತ್ತಿರದ ಬೇವಿನ ಮರದ



ಆಹಾರದೊಂದಿಗೆ ಟೊಂಗೆಯೊಂದರ ಮೇಲೆ

ಟೊಂಗೆಯಲ್ಲಿ ತೂಗಿಕೊಳ್ಳುತ್ತ, ಬಾಯಿ ನೀರೂರಿಸುತ್ತಿರುವ ತಿಂಡಿಗಳನ್ನು ತಮ್ಮವನ್ನಾಗಿ ಹೇಗೆ ಮಾಡಿಕೊಳ್ಳುವದು? ಎಂದು ಸಂಚು ಮಾಡುತ್ತವೆ. 'ದಯವಿಟ್ಟು ತಟ್ಟೆಗೆ ಕೈಹಾಕಬೇಡಿ!' ಎಂಬ ಬೋರ್ಡು ತೂಗು ಹಾಕಿದ್ದರೂ, ತಮ್ಮ ಚುಂಚು ಕೈ ಅಲ್ಲವಲ್ಲ! ಎಂಬುದು ಕಾಗೆಯ ಕುತರ್ಕ. ಪತ್ನಿ ಬಲಗಡೆ ಹಾರಿ, ಕೃಷ್ಣಪ್ಪನ ಲಕ್ಷ ಅತ್ತ ಸೆಳೆದಾಗ, ಕಾಕಪತಿ, ಎಡಗಡೆಯಿಂದ ನುಗ್ಗಿ ಬೋಂಡಾ ಕಚ್ಚಿ, ಕ್ಷಣಾರ್ಧದಲ್ಲಿ ಮಾಯವಾಗುವದು. ಇತ್ತ ಕಾಕಪತ್ನಿಯೂ ಉಪಾಯದಿಂದ

ಅನುಸರಿಸುವಳು. ಆದರೆ ಒಂದೇ ಬೋಂಡಾದಿಂದ ಬಾಯಿಚಪಲ ತೀರಲಿಕ್ಕುಂಟೆ? ಅಂಗಡಿಕಾರ, ಈ ಬಾರಿ ಹೆಚ್ಚಿನ ಜಾಗ್ರತೆ ವಹಿಸಿ ದೊಣ್ಣೆಯೊಂದಿಗೆ ಕಾವಲಿಟ್ಟಿದ್ದಾನೆ. ಹಿಂದಿನ ಯುಕ್ತಿ ಈಗ ಕ್ಷೇಮಕರವಲ್ಲವೆಂದು ಪಕೋಡ ಕೊಂಡು ತಿನ್ನುವ ಗಿರಾಕಿಗಳತ್ತ ಗಮನಹರಿಸುವವು. ನವ ವಿವಾಹಿತರು ಪೊಟ್ಟಣದಲ್ಲಿರುವ ಕೊನೆಯ ಪಕೋಡವನ್ನು "ನೀನು ತಿನ್ನು ನೀನು ತಿನ್ನು" ಮಾತಿನ ರಭಸದಲ್ಲಿರುವಾಗ, ಕಾಕರಾಜನು, 'ಅದು ನನಗಿರಲಿ!' ಎನ್ನುತ್ತ ಎಂದು ಭರ್‍ರನೆ ಬಂದು ಕಚ್ಚಿಕೊಂಡು ಗಗನ ಮಂಡಲದಲ್ಲಿ ಹಾರಿಯೇ ಬಿಡುವ. ಮನೆಗೊಯ್ಯಲು ಕಟ್ಟಿಸಿಕೊಂಡ ಬೋಂಡಗಳ ಪೊಟ್ಟಣ ಉರುಳಿಸುವಲ್ಲಿ, ಮಕ್ಕಳ ಕೈಯೊಳಗಿನ ಭಜಿಯನ್ನು ಹಾರಿಸುವಲ್ಲಿ ಅದಕ್ಕೆ ಹೆಚ್ಚಿನ ಸಂತೋಷ.

ಅಪ್ಪಣ ಕಮ್ತಿಗಳ ಮಗನ ಮದುವೆಯಲ್ಲಿ ಊರವರಿಗೆಲ್ಲ ಜಿಲೇಬಿ ಊಟವಿತ್ತು. ಊರವರಿಗೆಲ್ಲ ಈ ಸಮಾಚಾರ ತಲುಪಿದರೂ ಬಡಪಾಯಿ ಕಾಗೆಗಳಿಗೆ ಬಿತ್ತರಿಸುವವರು ಯಾರು? ಆದರೆ ಕಾಕಸಂಕುಲ, ಸುತ್ತಮುತ್ತಲ ಚಟುವಟಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸದೇ ಇರುವುದಿಲ್ಲ. ಅಡಿಗೆಭಟ್ಟರು, ಜಿಲೇಬಿಗಳನ್ನು ಬಾಣಲೆಯಲ್ಲಿ ಕರಿದು ಸಕ್ಕರೆಯ ಪಾಕದಲ್ಲಿ ಅದ್ದಿ ತೆಗೆಯುವದನ್ನು ಅಡಿಗೆ ಚಪ್ಪರದ ಕಂಡಿಯಿಂದ ಕಂಡುಹಿಡಿದರೂ, ಜಿಲೇಬಿಯನ್ನು ತಮ್ಮವನ್ನಾಗಿಸುವದು ಸುಲಭ ಸಾಧ್ಯವಿರಲಿಲ್ಲ. ಏಕೆಂದರೆ ಬಾಲಕನೋರ್ವನಿಗೆ ದೊಣ್ಣೆ ಕೊಟ್ಟು ಸರ್ಪಕಾವಲಿಡಿಸಿದ್ದರು. ಅವಕ್ಕೆ ದೂರದ ಮರದಲ್ಲಿ ಅವಿತುಕೊಂಡು ಜಿಲೇಬಿ ರುಚಿಯ ಹಗಲುಗನಸು ಕಾಣುವದೊಂದೇ ಮಾರ್ಗವಾಗಿತ್ತು.

ಡಾಕ್ಟರರು, ವಕೀಲರು, ಮಾಮಲೇದಾರರಂಥ ಊರ ಪ್ರತಿಷ್ಠಿತರೆಲ್ಲ ಭೋಜನಕ್ಕೆ ಆಮಂತ್ರಿತರಾಗಿ ಸೇರಲಾರಂಭಿಸಿದರು. ಸ್ವತಃ ಯಜಮಾನರೇ ಆತಿಥ್ಯದ ಭಾರ ಹೊತ್ತು, ಆಗ್ರಹ ಪೂರ್ವಕ ಬಡಿಸಲು ನಿರ್ದೇಶನವೀಯುತ್ತಿದ್ದರು. ಮಾಮಲೇದಾರರ ಪತ್ನಿಗೆ ಜಿಲೇಬಿಗಳೆಂದರೆ ಪಂಚಪ್ರಾಣವೆಂದು ಅದು ಹೇಗೋ ಪತ್ತೆ ಹಚ್ಚಿ, ಕೊಂಚ ಹೆಚ್ಚೇ ಬಡಿಸಿದ್ದರು. ಹೊರಬಾಗಿಲ ಹತ್ತಿರ ಹೊಂಚು ಹಾಕುತ್ತಿದ್ದ ಕಾಗಣ್ಣನಿಗೆ ಅವರ ಎಲೆಯೊಳಗಿನ ಜಿಲೇಬಿರಾಶಿ ಗಮನಕ್ಕೆ ಬಿತ್ತು. ರಭಸದಿಂದ ಹಾರಿಬಂದು ಕ್ಷಣಾರ್ಧದಲ್ಲಿ ಜಿಲೇಬಿಯೊಂದನ್ನು ಕಚ್ಚಿಕೊಂಡು ಮಿಂಚಿನಂತೆ ಮಾಯವಾಗಬೇಕೇ? ಊಟಕ್ಕೆ ಕುಳಿತ ಪ್ರತಿಷ್ಠಿತರಿಗೆ ಇದು ತೀರ ಅವಮಾನಕಾರಿ ಆಘಾತವಾಗಿ ಬಿಟ್ಟಿತು! ಊಟವನ್ನು ಅರ್ಧಕ್ಕೇ ಬಿಟ್ಟು ಎದ್ದರು. ಯಜಮಾನ ಕೈಜೋಡಿಸಿ ಎಷ್ಟು ಒತ್ತಾಯಿಸಿದರೂ ತಿರುಗಿ ಕೂಡ್ರಲು ಒಪ್ಪಲೇ ಇಲ್ಲ. ಮಾಮಲೇದಾರರು ತನ್ನ ಪಟ್ಟೆವಾಲಾನಿಗೆ ಆ ಕಾಗೆಯನ್ನು ಶಿಕ್ಷಿಸಲು ಆಜ್ಞಾಪಿಸಿದರು. ಎಲ್ಲರೂ ಆತನಿಗೆ ಸಹಾಯಕರಾಗಿ, ಕಂಡಕಂಡ ಕಾಗೆಯನ್ನೆಲ್ಲ ಇದೇ ಆ ಭಂಡ ಕಾಗೆ! ಎಂದು ಬಟ್ಟುಮಾಡಿ ತೋರಿಸಲಾರಂಭಿಸಿದರು. ಆ ಬಡಪಾಯಿ, ಕಾಗೆಗಳನ್ನೆಲ್ಲ ಹಿಂಬಾಲಿಸಿ ಸುಸ್ತಾದ. ಅಂತೂ ಕೊನೆಗೊಮ್ಮೆ 'ಆ ಕಾಗೆಯ ಕಾಲು ಮುರಿದು ತಪ್ಪಿಗೆ ತಕ್ಕ ಶಿಕ್ಷೆಯನ್ನು ವಿಧಿಸಿದೆ' ಎಂದು ಪಟ್ಟೇವಾಲಾನು ಹೇಳಿದಾಗಲೇ ಮಾಮಲೇದಾರಿತಿ ಅವರ ಸ್ಥಾನಮಾನಕ್ಕೆ ತಕ್ಕ ಗೌರವ ಸಿಕ್ಕಿತೆನಿಸಿತು.

ಕದ್ದುಣ್ಣುವ ಕಾಗೆಗಳಿಗೂ ಬರಗಾಲವಿಲ್ಲ. ಧರ್ಮಿಷ್ಠ ಮಾರವಾಡಿಗಳು ಮುಂಜಾವಿನಲ್ಲಿ ಗಿಡುಗ (ಹದ್ದು)ಗಳ ಪೋಷಣೆಗೆ ಅವುಗಳತ್ತ ಪಕೋಡಗಳನ್ನು ತೂರುತ್ತಾರೆ. ಅವಿತು ಕುಳಿತ ಕಾಗೆಗಳು, ಹದ್ದುಗಳೊಂದಿಗೆ ಸ್ಪರ್ಧಿಸಿ, ಕೆಲವನ್ನು ತಮ್ಮ ಹೊಟ್ಟೆಗೆ ಇಳಿಸುವಲ್ಲಿ ಸಫಲವಾಗುತ್ತವೆ. ಕೊಕ್ಕರೆ ಬೆಳ್ಳೂರಿನಲ್ಲಿ ಠಾಣ್ಯ ಹೂಡಿದ ಹೆಜ್ಜಾರ್ಲೆಗಳು, ಹತ್ತಿರದ ಶಿಂಶಾ ನದಿಯಲ್ಲಿರುವ ಪುಟ್ಟ ಮೀನುಗಳನ್ನು ತಮ್ಮ ಮರಿಗಳಿಗಾಗಿ ಕೊಕ್ಕಿನಲ್ಲಿ ಹೊತ್ತು ಗೂಡಿಗೆ ಹಿಂದಿರುತ್ತವೆ. ಮೂರು-ನಾಲ್ಕು ಮರಿಗಳು ಸ್ಪರ್ಧೆಯಿಂದ ಆ ಮೀನುಗಳಿಗಾಗಿ ಹಪಹಪಿಸುವಾಗ ಅಲಕ್ಷದಿಂದಾಗಿ ಕೆಲವೊಂದು ಮೀನು ನೆಲಕ್ಕುರುಳುವವು. ಇದಕ್ಕಾಗಿಯೇ ಕಾದಿದ್ದ ಕಾಗೆಗಳು ಅವನ್ನು ತಮ್ಮದನ್ನಾಗಿಸಿಕೊಳ್ಳುವವು. ಮೈಸೂರು ಮೃಗಾಲಯದಲ್ಲಿ ಸಾಕಿದ ಪಕ್ಷಿಗಳಿಗಾಗಿ ಕಾಲಕಾಲಕ್ಕೆ ಕಾಳು-ಕಡಿಗಳನ್ನು ಪೂರೈಸಬೇಕಾಗುತ್ತದೆ. ಅದರ ಸಿಂಹಪಾಲನ್ನು ಕಾಗೆಗಳು ತಮ್ಮದನ್ನಾಗಿ ಮಾಡಿಕೊಳ್ಳುತ್ತವೆ. ಅದರಂತೆ ಸಾಕಿದ ಹೆಜ್ಜಾರ್ಲೆಗಳ ತಂಡಕ್ಕೆ ತಂದ ಮೀನುಗಳಲ್ಲಿ ಕೆಲವನ್ನಾದರೂ ಕಾಗೆಗಳು ಕಳವು ಮಾಡದೇ ಇರಲಾರವು!

ಕಾಡಿನ ಕಾಗೆಗಳು, ಇನ್ನೊಂದು ಬಗೆಯಲ್ಲಿ ತಮ್ಮ ಉದರ ಪೋಷಣೆ ಮಾಡಿಕೊಳ್ಳುತ್ತವೆ. ಕಾಡಾನೆಗಳು ಹೆಣ್ಣಿಗಾಗಿ, ಇಲ್ಲವೇ ತಮ್ಮ ತಂಡದಲ್ಲಿ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸುವಾಗ, ಕಾದಾಟದಲ್ಲಿ ತೊಡಗುವದು ವಾಡಿಕೆ. ಅಂತಹ ಪ್ರಸಂಗಗಳಲ್ಲಿ ಇರಿತ, ತುಳಿತಗಳಿಂದ ಗಾಯಗಳಾಗುವದು ತೀರಸಾಮಾನ್ಯ. ಅವುಗಳಲ್ಲಿ ಕೀವು ತುಂಬಿ ಹುಳಗಳು ಕಾಣಿಸಿಕೊಳ್ಳದೇ ಇರುವದಿಲ್ಲ. ಇಂಥಲ್ಲಿ ಕಾಗೆಗಳೇ ವೈದ್ಯನಾಗಿ ಪರಿಣಮಿಸುತ್ತವೆ. ಆನೆಗಳ ಮೇಲೆ ಆರೂಢರಾಗಿ ಹುಳಗಳನ್ನು ಹೆಕ್ಕಿ ತಿನ್ನುತ್ತವೆ. ಇದರಿಂದ ಕಾಡಾನೆಗಳಿಗೆ ನೆಮ್ಮದಿ ಅನಿಸಿದರೂ ಕೆಲವೊಮ್ಮೆ ವ್ರಣಗಳು ಉಲ್ಬಣಗೊಳ್ಳುವದೂ ಇದೆ. ಹಾಗಾದರೆ ಕಾಗೆಗಳ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ! ಕಾಡು ಕೋಣಗಳಿಗೂ ಕಾಗೆಗಳು ಸೊಪ್ಪುಹಾಕುವದಿಲ್ಲ. ಉಣ್ಣೆ, ಹೇನುಗಳನ್ನು ಹೆಕ್ಕುವದರ ಜೊತೆಗೆ, ಅವುಗಳ ಬೆನ್ನೇರಿ ಕಾಡಿನ ಉದ್ದಗಲಕ್ಕೆ ಸವಾರಿ ಮಾಡುತ್ತಿರುತ್ತವೆ. ಊರಿನ ದನಕರು, ಆಡು-ಕತ್ತೆಗಳಿಗೂ ಇಂಥ ಸೇವೆ ಕೂಡ ಮಾಡಿ ಸವಾರಿ ಗಿಟ್ಟಿಸುವದುಂಟು.

ಕಾಗೆಗಳು ಸದಾಕಾಲವೂ ಸುದೃಢವಾಗಿರುವದಿಲ್ಲ. ಅವುಗಳಿಗೂ ರೋಗರುಜಿನಗಳು ಕಾಡುತ್ತಿರುತ್ತವೆ. ಅಲ್ಲದೇ ಅಕಾಲದಲ್ಲಿ ಅಂಗವಿಕಲತೆ ಬರುವ ಸಾಧ್ಯತೆಗಳು ಅತಿಹೆಚ್ಚು. ಮಾನವನ ಕ್ರೌರ್ಯಕ್ಕೆ ಕಾಗೆಗಳು ಬಲಿಯಾಗುತ್ತವೆ. ಚುಂಚು ಮುರಿದು ಹೋಗುತ್ತದೆ. ರೆಕ್ಕೆಗಳು ಬಲಹೀನವಾಗುತ್ತವೆ. ಗರಿಗಳು ಉದುರಿಹೋಗುತ್ತವೆ. ಅಂಥ ಹಕ್ಕಿಗಳಿಗೆ ಯಾರೂ ಯಾವ ನೆರವೂ ನೀಡದಿದ್ದುದರಿಂದ, ಅವುಗಳ ಪಾಡು ಹೇಳತೀರದು. ಆದರೂ ಧೃತಿಗೆಡದೇ ಅವುಗಳು ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುವವು. ಪ್ರತಿಯೊಂದು ಮಹಾನಗರದಲ್ಲಿಯೂ ಜನ ಸೇರುವಲ್ಲಿ ಪಾರಿವಾಳಗಳಿಗೆ ಕಾಳುಕಡಿ ತಿನ್ನಿಸುವ ವಾಡಿಕೆ ಇದೆ. ಇಂಥ ಹೂದೋಟಗಳಲ್ಲಿ ಅಸಂಖ್ಯಾತ ಪಾರಿವಾಳಗಳ ಸಂತೆ ಸದಾಕಾಲ ಸೇರಿರುತ್ತದೆ. ಅವುಗಳ ನೆರಳಿನಲ್ಲಿ ಅಸಹಾಯಕ ಕಾಗೆಗಳಿದ್ದು ಕೆಲವು ಕಾಳುಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತವೆ. ಕೆಲವು ಧರ್ಮಿಷ್ಠರು ಮುಂಜಾವಿನಲ್ಲಿ ಪಶುಪಕ್ಷಿಗಳಿಗೆ ಅನ್ನದಾನಮಾಡಿ, ಸ್ವರ್ಗದಲ್ಲಿ ತಮಗೊಂದು ಸ್ಥಾನ

ಕಾದಿರಿಸಿಕೊಳ್ಳಲು ಯತ್ನಿಸುತ್ತಿರುತ್ತಾರೆ. ಇಂಥ ವೃದ್ಧರೊಬ್ಬರು, ಮಲ್ಲೇಶ್ವರಂದಲ್ಲಿ ಸ್ಯಾಂಕಿ ಕೆರೆಯ ದಂಡೆಯಲ್ಲಿ ಬ್ರೆಡ್ ಚೂರುಗಳನ್ನು ಹರಡುತ್ತ ಹೊರಟಿರುತ್ತಾರೆ. ಇದಕ್ಕಾಗಿಯೇ ಕಾದಿರುವ ಅಂಗವಿಕಲ ಕಾಗೆಗಳು, ಆ ಒಣ ಬ್ರೆಡ್ಡಿನಿಂದಲೇ ಉದರ ನಿರ್ವಹಣೆ ನಡೆಸುತ್ತವೆ. ಈ ಅದೃಷ್ಟಹೀನರ ಜೊತೆಯಲ್ಲಿ ಕೆಲ ಸೋಮಾರಿ ಕಾಗೆಗಳೂ ಈ ದಾನಧರ್ಮದ ದುರುಪಯೋಗ ಮಾಡಿಕೊಳ್ಳದೇ ಇರುವದಿಲ್ಲ. ಇಂಥ ಹಲ ಧರ್ಮಿಷ್ಠರು ಕಾಗೆಗಳಿಗಾಗಿ ಧರ್ಮ ಶಾಲೆಗಳನ್ನು ಹಲವೆಡೆ ನಿರ್ಮಿಸುವ ಜವಾಬ್ದಾರಿ ವಹಿಸಿಕೊಂಡಿದ್ದರೆ ಎಷ್ಟು ಸೊಗಸಾಗಿರುತ್ತಿತ್ತು!

❑

ಕಲಹಪ್ರಿಯ ಕಾಗೆ

ಹುಟ್ಟುಗುಣ

ಬಂಗಾಲಿಗಳಂತೆ, ವಾಕ್‌ಕಲಹ ಕಾಗೆಗಳ ಜನ್ಮಸಿದ್ಧ ಹಕ್ಕು! ಮೊಟ್ಟೆಯೊಳಗಿಂದ ಹೊರ ಬಂದಾಕ್ಷಣದಿಂದಲೇ ಕಲಹಕ್ಕೆ ಪ್ರಾರಂಭಿಸಿ ಬಿಡುವವು. ಗೂಡಿನಲ್ಲಿಯ ಪ್ರಶಸ್ತ ಸ್ಥಾನಕ್ಕಾಗಿ, ಹಿರಿಯರು ತಂದ ಗುಟುಕಿನ ದೊಡ್ಡಪಾಲಿಗಾಗಿ, ವಾಗ್ಯುದ್ಧ ಸದಾ ನಡೆದಿರುತ್ತದೆ. ಕಿರ್‌ಕಿಚ್! ಕಿಚ್‌ಕಿರ್! ಎಂದು ಕೂಗಿಕೊಳ್ಳುತ್ತಿರುವಾಗ ಬೈಗಳ ಸುರಿಮಳೆಗೆ ಯಾರೊಬ್ಬರೂ ಮಣಿಯದಿದ್ದಾಗ ಒಂದನ್ನೊಂದು ಕೊಕ್ಕಿನಿಂದ ತಿವಿಯುವದು ತೀರ ಸ್ವಾಭಾವಿಕ. ಪಂಜದಿಂದ ಪರಚುವದು,



ಕಾದಾಡಲು ಸಿದ್ಧರಾದಾಗ

ಗೋಣನ್ನು ತಿರುವು ಮುರುವು ಮಾಡುವ ಪ್ರಯತ್ನಗಳೂ ನಡೆದಿರುತ್ತವೆ. ಪಾಲಕರು ಮಧ್ಯೆ ಪ್ರವೇಶಿಸಿ ಸಂಭಾಳಿಸಬೇಕಾದರೆ, ಸಾಕಪ್ಪಾ ಕಾಕಸಂಸಾರ! ಎನಿಸಿಬಿಡುತ್ತದೆ. ಮರಿಗಳ ಈ ವೈಮನಸ್ಸಿನಿಂದ, ಅವು ಒಂದರಿಂದ ಇನ್ನೊಂದು ದೂರ ಸರಿದಾಗ, ಕಡು ವೈರಿಗಳಿಗೆ ಅವುಗಳನ್ನು ಅಪಹರಿಸಲು ಅನುಕೂಲವಾಗುತ್ತದೆ. 'ಮಕ್ಕಳ್ರಾ! ಕುಕ್ಕುಟ ಸಂಸಾರ ನೋಡಿ ಪಾಠ ಕಲೀರೋ! ಒಟ್ಟಿಗಿದ್ರೇ ನಮ್ಗೆ ಸಕ್ತಿ, ಬಲ ಕಣ್ರೊ!' ಎಂದು ತಾಯ್ತಂದೆ ಸಾರಿ ಸಾರಿ ಹೇಳಿದರೂ

ಯಾರೂ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ. 'ಕಾಲು ಕೆದರಿ ಕಾದಾಟಕ್ಕೆ ಇಳಿದವನು ನಾನಲ್ಲವೇ ಅಲ್ಲ!' ಎಂದು ಪುನಃ ಪುನಃ ಕಿರುಚಿ ಪ್ರತಿ ಮರಿಯೂ ಪ್ರತಿಪಾದಿಸುತ್ತದೆ. ಈ ಧೋರಣೆಯಿಂದಾಗಿ ಮೂರು-ನಾಲ್ಕು ಮರಿಗಳಲ್ಲಿ ಒಂದೆರಡಾದರೂ ಪ್ರೌಢಾವಸ್ಥೆ ತಲುಪಿದರೆ, ಅದೇ ದೊಡ್ಡ ಕೌಟುಂಬಿಕ ಸಾಧನೆಯಾಗಿ ಪರಿಣಮಿಸುತ್ತದೆ.

ವಸಂತ ಋತುವಿನ ಆಗಮನದಿಂದಾಗಿ ಪಕ್ಷಿ ಪ್ರಪಂಚವಿಡೀ ಕಾಮಜ್ವರಪೀಡಿತವಾಗುತ್ತದೆ. ಅಂತೆಯೇ ಉಳಿದ ದಿನಗಳಲ್ಲಿ ಒಂಟಿ ಸಲಗನಂತೆ, ಎಲ್ಲಿ ಬೇಕೆಂದಲ್ಲಿ ಹಾರಿಹೋಗಿ ಮೆದ್ದು ಹಾಯಾಗಿದ್ದ ತರುಣ ಪಕ್ಷಿಗಳು ಕೂಡ, ಈಗ ತಮ್ಮ ಕುಟುಂಬದ ಭವಿಷ್ಯ ಹಿತಚಿಂತನೆಯತ್ತ ಗಮನ ನೀಡುತ್ತವೆ. ಗೂಡುಕಟ್ಟಲು ನಿರ್ಧರಿಸುತ್ತವೆ. ಪ್ರತಿಪಕ್ಷಿಯ ಪ್ರಸೂತಿಗೆ ಒಂದೊಂದು ಗಿಡಮರವನ್ನು ಎಲ್ಲಿಂದ ತರುವದು? ಆದ್ದರಿಂದ ಇನ್ನಿತರ ಸ್ವಜಾತೀಯ, ಅಥವಾ ಪರಜಾತಿಯ ಹಕ್ಕಿಗಳೊಡನೆ ಹೊಂದಾಣಿಕೆ ಅನಿವಾರ್ಯವಾಗಿ ಬಿಡುತ್ತದೆ. ಆದರೆ ಕಾಕಕುಟುಂಬಗಳೊಂದಿಗೆ ಸಹಜೀವನ ಅತ್ಯಂತ ಬಿಕ್ಕಟ್ಟಿನದು! ಇದು ಯತ್ನಿಸಿದ ಪಕ್ಷಿಸಂಕುಲಕ್ಕೆಲ್ಲ ಅರಿವಾಗಬೇಕು. ಕಾಗಪ್ಪ, ಆ ಗಿಡ ಈ ಮರ, ಮಧ್ಯೆ, ಎತ್ತರದ ಸ್ಥಾನಗಳನ್ನೆಲ್ಲ ಅಲೆದಾಡಿ ಗೂಡುಕಟ್ಟಲು ಆಯಕಟ್ಟಿನ ಸ್ಥಳವನ್ನು ಗೊತ್ತುಪಡಿಸುತ್ತಾನೆ. ಆದರೆ ಸ್ವಂತ ಗೃಹನಿರ್ಮಾಣಕ್ಕೆ ಪೂರ್ವದಲ್ಲೇ, ಆ ಪರಿಸರದಲ್ಲಿ ಇತರೇ ಜೀವಿಗಳು ಸುಳಿಯದಂತೆ ಕಾವಲು ಇಟ್ಟಿರುತ್ತಾನೆ. ಸೂರಕ್ಕಿಯಂತಹ ಅತಿ ಚಿಕ್ಕ ಹಕ್ಕಿ ಹತ್ತಿರ ಸುಳಿದರೂ ಅದನ್ನು ಬೆನ್ನಟ್ಟಿಕೊಂಡು ಹೋಗಿ, ತನ್ನ ರಾಜ್ಯದ ಸೀಮೆಯಿಂದ ಹೊರಹಾಕಿಯೇ ನೆಮ್ಮದಿಯ ನಿಟ್ಟುಸುರು ಬಿಡುತ್ತಾನೆ. ಪ್ರತಿದ್ವಂದ್ವಿಗಳು ಬಲಶಾಲಿಗಳಿದ್ದರೆ, ಕುಸ್ತಿಗಿಳಿಯುತ್ತಾನೆ. ಕಾಕರಾಜನ ಕೊಕ್ಕಿನ, ಪಂಜದ ಶಕ್ತಿಯುತ ಏಟುಗಳನ್ನು ಸಹಿಸಲಾರದೇ ಆಗಂತುಕನು ಪಲಾಯನ ಮಾಡದೇ ಇರುವದಿಲ್ಲ. ಆದರೆ ದೊಡ್ಡ ಹಕ್ಕಿಯೊಂದು ಕಾಗಪ್ಪನ ತಾಣವನ್ನೇ ತನ್ನದನ್ನಾಗಿಸುವ ಯತ್ನ ನಡೆಸಿದಾಗ ಅವನಿಗೆ ಕಷ್ಟಕ್ಕಿಟ್ಟುಕ್ಕೊಳ್ಳುತ್ತದೆ. ಮೊದಲು ಹೆದರಿಸಿ, ಬೆದರಿಸಿ, ಪ್ರತಿಭಟಿಸಲು ಯತ್ನಿಸಿ, ಸಾಧ್ಯವಾಗದಿದ್ದಾಗ, ಒಪ್ಪಂದಕ್ಕೆ ಸಿದ್ಧನಾಗುತ್ತಾನೆ. ತನ್ನ ಸ್ಥಾನವನ್ನು ಬಲಿಷ್ಠ ಹಕ್ಕಿಗೆ ಬಿಟ್ಟುಕೊಟ್ಟು, ಇನ್ನೊಂದು ಭಾಗ ತನ್ನದೆಂದು ಸರ್ವರಿಗೂ ತಿಳಿಯುವಂತೆ ಕಾಕಘೋಷಣೆ ಬೀರುತ್ತಾನೆ.

ಆತ್ಮರಕ್ಷಣೆಗೆ ಆಕ್ರಮಣ

ಮೊಟ್ಟೆಗಳ ಆಸೆಯಿಂದ ಕೇರೆಹಾವು ಒಮ್ಮೊಮ್ಮೆ ಮರವೇರಿ ಬರುವದುಂಟು. ಅಂತೆಯೇ ಮರಿಮಾಡುವ ದಿನಗಳಲ್ಲಿ ಕಾಕದಂಪತಿ, ಗೂಡಿನ ಹತ್ತಿರವೇ ಇದ್ದು ಸದಾ ಕಾಕದೃಷ್ಟಿಯ ಕಾವಲು ಇಟ್ಟಿರುತ್ತವೆ. ಹಾವು ಮರದತ್ತ ಸುಳಿಯಲಾರಂಭಿಸಿದ ಕ್ಷಣ, ಕಾಕ ವಿಮಾನದಾಳಿ ಪ್ರಾರಂಭವಾಗಿಬಿಡುವದು. ಏಕ ಪ್ರಕಾರವಾಗಿ ಕಿರುಚುತ್ತ ಕೊಕ್ಕು-ಪಂಜಗಳಿಂದ ಆಕ್ರಮಣ ನಡೆಸಿಬಿಡುವದು ಕಾಕಪರಿವಾರ. ಹಾವಿಗೆ ತಾನು 'ಸೆಗಣಿ ತಿನ್ನುವ' ಕೆಲಸ ಮಾಡಿದ್ದರ ಅರಿವು ತಡವಾಗಿ ಆಗುವುದು. "ಬಿಟ್ಟುಬಿಡ್ರೊ! ನಿಮ್ಮ ದಮ್ಮಯ್ಯ! ಬದುಕಿದ್ರೆ ಭಿಕ್ಷೆ ಬೇಡಿ ತಿನ್ನುವೆ! ಎನ್ನುತ್ತ ಭರದಿಂದ ಮರ ಇಳಿದು ಹರಿದು ಹೋಗಲು ಯತ್ನಿಸುವದು. ಅದಕ್ಕೂ ಅವಕಾಶ

ನೀಡದೇ ಕಾಕ ಸಮುದಾಯ ಅದರ ಸರ್ವನಾಶಕ್ಕೆ ಯತ್ನಿಸುವದು. ಹಾವು ತಲೆಮರೆಸಿಕೊಂಡು ತನ್ನ ಬಿಲ ಸೇರಿಕೊಳ್ಳುವ ತನಕ ಬೆನ್ನಟ್ಟಿಕೊಂಡೇ ಹೋಗುವವು. ಈ ಸರ್ಪಯಜ್ಞದಲ್ಲಿ ವಿಜಯಿಯಾದ ಠೀವಿಯಿಂದ ಹಿಂದಿರುಗಿ ಅವು ತಂತಮ್ಮ ಗೂಡು ಸೇರಿಕೊಂಡಾಗಲೇ ಪರಿಸರದಲ್ಲಿ ಶಾಂತಿ ಸ್ಥಾಪಿತವಾಗುವದು.

ಕೆಂಪು ಮೂತಿಯ ಮಂಗಗಳು ಮರದಿಂದ ಮರಕ್ಕೆ ಜಿಗಿಯುತ್ತಲೇ ಇರುವದು ತಮ್ಮ ಜನ್ಮಸಿದ್ಧ ಹಕ್ಕು ಎಂದು ತಿಳಿದಿವೆ. ಆದರೆ ಕಾಕಸಂಸಾರ ಗೂಡು ಕಟ್ಟಲಿರುವ ಮರದ ಮೇಲೆ ಇವು ಬಂದು ತಂಗಿದರೆ, ಅವುಗಳಿಗೆ ಫಜೀತಿ ಆಗದೇ ಇರಲಾರದು. ಮೊಟ್ಟಮೊದಲಿಗೆ ಪತಿ-ಪತ್ನಿ-ಬಂಧು-ಬಾಂಧವರು ಸೇರಿ ಚೀರಾಟ ನಡೆಸುವವು. ಅದಕ್ಕೆ ಸೊಪ್ಪು ಹಾಕದಿದ್ದರೆ, ಮೇಲಿನಿಂದ, ಕೆಳಗಿನಿಂದ, ಎಡದಿಂದ, ಬಲದಿಂದ, ಒಂದೊಂದು ಕಾಗೆಯೂ ಆಕ್ರಮಣ ನಡೆಸಿ ಬಿಡುವದು. ಕಂಗೆಟ್ಟ ಕೋತಿಯು, ಅವನ್ನು ಶಿಕ್ಷಿಸಲು ಯತ್ನಿಸಿದಾಗ ಹಾರಿಹೋಗಿ, ತಿರುಗಿ ಬಂದು ಆಕ್ರಮಣ ನಡೆಸುವವು. 'ಇವುಗಳ ಮನೆ ಹಾಳಾಗ!' ಎಂದು ಶಪಿಸುತ್ತ ಮರ್ಕಟ ಮಹಾಶಯನು, ಅಲ್ಲಿಂದ ಬಾವಿಕಟ್ಟೆಗೆ ಜಿಗಿದಾಗಲೇ ಶಾಂತಿ ಸ್ಥಾಪನೆಯಾಗುವದು. ಕೆಲ ಬಾರಿ ಕಪ್ಪು ಮೂತಿಯ ಕೋತಿಗಳು ಕಾಗೆಗಳ ವಾಸಸ್ಥಾನದ ಮೇಲೆ ತಾವಾಗಿ ಆಕ್ರಮಣ ನಡೆಸುವುದುಂಟು. ಆದರೆ ಅದರ ದೊಡ್ಡ ಆಕಾರ, ಭಯಾನಕ ರೂಪಕ್ಕೆ ಅಂಜಿದ ಕಾಗೆಗಳು ಅವುಗಳ ಗೊಡವೆಗೇ ಹೋಗದೇ ದೂರದಲ್ಲಿ ಅಡಗಿ ಕುಳಿತು, ಅವುಗಳ ಚಟುವಟಿಕೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ವೀಕ್ಷಿಸುವವು. ಅವು ಮೊಟ್ಟೆ-ಮರಿಗಳಿಗೆ ಹಾನಿಮಾಡಲು ಯತ್ನಿಸಿದಾಗ ಮಾತ್ರ ಕಾಕಸೈನ್ಯವೇ ಬಂದಿಳಿದು, ನಾಲ್ಕೂ ದಿಕ್ಕಿನಿಂದ ಕಾವ್! ಕಾವ್! ಎಂದು ಆಕ್ರಮಣ ಮಾಡಿ ಬೆದರಿಸಿ, ಬೆನ್ನಟ್ಟಿಕೊಂಡು ಹೋಗುತ್ತವೆ. ಇಷ್ಟಾದರೂ ಒಂದೆರಡು ಕಾಗೆಮರಿಗಳು ಕೋತಿಗೆ ಆಹುತಿಯಾಗುವದು ಸಾಮಾನ್ಯ. ಆದರೂ ಪೀಡೆ ಕಳೆಯಿತಲ್ಲ! ಎಂದು ಕೋತಿಯನ್ನು ಓಡಿಸಿದ ಬಳಿಕ ನೆಮ್ಮದಿಯ ಉಸಿರು ಬಿಡುತ್ತವೆ.

ಪಾಡೇಕಾರನ ಪಾಡು

ಕಾಗೆಗಳು ತಮ್ಮ ಸಂಸಾರ ಹೂಡಲು ಯಾವ ವೃಕ್ಷವನ್ನು ಆಯ್ಕೆ ಮಾಡಿಕೊಳ್ಳುತ್ತವೆಯೆಂದು ಕಟ್ಟುನಿಟ್ಟಾಗಿ ಹೇಳಲು ಬರುವದಿಲ್ಲ. ಮಾವು, ಹಲಸು, ತೆಂಗು, ಗೋಡಂಬಿ ಮರಗಳ ಮೇಲೆ, ದಾಳಿಂಬೆ ಗಿಡದ ಮೇಲೆ ಗೂಡುಕಟ್ಟುವದು ಸಾಮಾನ್ಯ. ಈ ಅವಧಿಯಲ್ಲಿ ಆಯಾ ಮರವೇರುವ ಸಾಹಸವನ್ನು ಮಾಡುವ ಪ್ರಾಣಿಗೆ ಈ ಜನ್ಮವೇ ಬೇಡ ಎನಿಸಿಬಿಡುತ್ತದೆ. ತೆಂಗಿನ ಮರ ಹತ್ತಿ ಕಾಯಿ ಬೀಳಿಸುವದನ್ನೇ ವೃತ್ತಿಯಾಗಿಸಿಕೊಂಡ 'ಪಾಡೇಕಾರ'ನು ಕಾಗೆಯೊಂದಿಗೆ ಕಾದಾಡಲು ಬೇಕಾಗುವ ಪರಿಕರಗಳನ್ನು ತನ್ನೊಂದಿಗೆ ಒಯ್ಯಲೇ ಬೇಕಾಗುತ್ತದೆ. ಅವು ಹೆಚ್ಚಾಗಿ ತಲೆ ಪರಚುವದು, ಕುಕ್ಕುವದು ಮಾಡುವದರಿಂದ ದಪ್ಪ ಬಟ್ಟೆಯ ರುಮಾಲನ್ನು ಸುತ್ತಿಕೊಳ್ಳ ಬೇಕಾಗುತ್ತದೆ. ಸೊಂಟಕ್ಕೆ ನೇತುಹಾಕುವ ಕತ್ತಿಯನ್ನು ಬಲಗೈಯಲ್ಲಿ ಎತ್ತಿ ಹಿಡಿದು, ಇನ್ನೊಂದು ಕೈಯಿಂದ ಭದ್ರವಾಗಿ ಮರವನ್ನು ಬಿಗಿದಪ್ಪಿಕೊಳ್ಳಬೇಕಾಗುತ್ತದೆ. ಇಷ್ಟಾದರೂ ಕತ್ತಿಯೇಟಿಗೂ

ಕಾಗೆಗಳು ಹಿಂಜರಿಯದಿದ್ದಾಗ, ಕೊಯ್ಲು ಮಾಡದೆಯೇ ಮರ ಇಳಿದು ಬರುವ ಪ್ರಸಂಗಗಳೂ ಬಾರದಿರುವದಿಲ್ಲ. ಕಾಗೆಗಳ ಗೂಡು ನೆಲಕ್ಕುರುಳಿಸಿದರಂತೂ ಅವುಗಳ ಕೂಗಾಟ, ಚೀರಾಟ, ಕಚ್ಚಾಟಗಳಿಂದ ತಲೆ ಚಿಟ್ಟು ಹಿಡಿಯದೇ ಇರಲಾರದು!

ಹದ್ದುಗಳು ಕಾಗೆಗಳ ಆಜನ್ಮ ವೈರಿಗಳು. ವಿಷ್ಣುಪರಮಾತ್ಮನ ವಾಹನವಾದ ಗರುಡನ ವಂಶಕ್ಕೆ ಸೇರಿದ ಹದ್ದುಗಳಿಗೆ ಸಕಲ ಜೀವಕೋಟಿ ಅಂಜಿದರೂ, ಯಃಕಶ್ಚಿತ್ ಕಾಗಣ್ಣ, ಅವಕ್ಕೆ ಸಿಂಹಸ್ವಪ್ನವಾಗಿದ್ದಾನೆ ಎಂದು ನಂಬುವದು ಕಷ್ಟವಲ್ಲವೇ? ಹದ್ದುಗಳು ಬುದ್ಧಿಪೂರ್ವಕ ಕಾಗೆಗಳಿಂದ ಹರದಾರಿ ದೂರ ಇರಲು ಬಯಸುವವು. ಆದರೂ ಎಂದಾದರೊಮ್ಮೆ ಎದುರು ಬದುರಾದಾಗ, ಬೈಗಳ ಮಳೆ, ಶಾಪಾವಳಿ, ಕಾದಾಟ, ಹೋರಾಟಗಳಿಲ್ಲದೇ ಬೇರೆ ಮಾರ್ಗವಿಲ್ಲ. ಹದ್ದು ಕಾಗೆಗಿಂತ ಬಲಿಷ್ಠವಾದ ಹಕ್ಕಿ. ಅದರ ಕೊಕ್ಕು, ಗರಿ, ಪಂಜ, ದೃಷ್ಟಿಗಳು ಕಾಗೆಯದಕ್ಕಿಂತ ಉತ್ಕೃಷ್ಟ ದರ್ಜೆಯವಾಗಿದ್ದರೂ ಕಾಗೆಗಳನ್ನು ಕಂಡೊಡನೆ ಅದು ಪಲಾಯನ ಮಾಡದೇ ಇರದು! ಇದಕ್ಕೆ ಮುಖ್ಯ ಕಾರಣ, ಹದ್ದು ಒಂಟಿ ಜೀವಿ. ಎಂಥ ಗಂಡಾಂತರ ಪ್ರಸಂಗದಲ್ಲಿಯೂ ಅದರ ನೆರವಿಗೆ ಇನ್ನೊಂದು ಹದ್ದು ಬಾರದು. ಅದೇ ಕಾಗೆಗಳು ತಮ್ಮ ತಮ್ಮಲ್ಲಿ ಅದೆಷ್ಟೇ ವೈಮನಸ್ಸು ಇದ್ದರೂ ಪರಕೀಯರನ್ನು ಎದುರಿಸುವಾಗ ಸಂಘಜೀವಿಗಳೆಂದು ತೋರಿಸಿಕೊಳ್ಳುವವು. 'ತನ್ನ ಸೀಮೆಯಲ್ಲಿ ಒಳಹೊಕ್ಕು ಬಂದ! ತನ್ನ ಗೂಡಿನತ್ತ ದೃಷ್ಟಿ ಹಾಯಿಸಿದ! ಮೊಟ್ಟೆ ಮರಿಗಳನ್ನು ಅಪಹರಿಸಲು ಯತ್ನಿಸಿದ!' ಮುಂತಾದ ಆಪಾದನೆಗಳನ್ನು ಹೊರಿಸಿ ಒಂದು ಕಾಗೆ, ಹದ್ದನ್ನು ಬೆನ್ನಟ್ಟಿಕೊಂಡು ಹೊರಟರೆ ಸಾಕು. ಹತ್ತಾರು ಇನ್ನಿತರ ಕಾಗೆಗಳು ಕೂಡಲೇ ಅದರ ನೆರವಿಗೆ ಧಾವಿಸಿ ಬರುವವು. ಈ ಕಾಕ ಸೈನಿಕರಿಂದ ರಕ್ಷಣೆ ಪಡೆಯುವದು ಹೇಗೆ ಎಂದು ತಿಳಿಯದೆ ದಿಕ್ಕೆಟ್ಟು ಅದು ಗಗನ ಮಂಡಲದ ಎತ್ತರಕ್ಕೆ ಏರುತ್ತ ಹೋಗುತ್ತದೆ. ಕಾಗೆಗಳಿಗೆ ಅಷ್ಟು ಎತ್ತರದಲ್ಲಿ ಸುಲಭವಾಗಿ ಹಾರಲಾಗುವದಿಲ್ಲ. ಹೀಗಾಗಿ ಹದ್ದನ್ನು ಓಡಿಸಿ ತಾವೇ ಜಯಶಾಲಿಯಾದೆವು! ಎಂಬ ಹರ್ಷದಿಂದ ತಮ್ಮ ಗೂಡಿಗೆ ಮರಳುವವು.

ಶಕ್ತಿಯ ಮೀರಿಸುವ ಯುಕ್ತಿ

ಆಹಾರಕ್ಕಾಗಿಯೂ ಕಾಗೆ-ಹದ್ದುಗಳಲ್ಲಿ ಚಕಮಕಿ ನಡೆಯುವದುಂಟು. ಸತ್ತು ಬಿದ್ದ ಹೆಗ್ಗಣ, ವಾಹನದಡಿಯಲ್ಲಿ ಸಿಕ್ಕು ಅಸು ನೀಡಿದ ಮಂಡೂಕರಾಯ, ಸಾಗಾಟದಲ್ಲಿ ರಸ್ತೆಗುರುಳಿದ ಮೀನು, ಮಾಂಸದ ಅಂಗಡಿಯವನು ಬಿಸಾಕಿದ ಚೂರು-ಪಾರುಗಳು, ಇವೆಲ್ಲ ಯಾರ ಸೊತ್ತು ಎಂದು ನಿರ್ಧರಿಸುವದು ಕಷ್ಟಕ್ಕೆ ಇಟ್ಟುಕೊಳ್ಳುತ್ತದೆ. ಬೀದಿಯ ನಾಯಿಗಳು ತಮ್ಮ ಪಾಲಿನೊಂದಿಗೆ ಪಲಾಯನ ಮಾಡಿದ ಬಳಿಕ, ಉಳಿದದ್ದೆಲ್ಲ ತಮ್ಮದೇ ಎಂದು ಕಾಕವರ್ಗ ನಂಬಿದರೂ, ಹದ್ದುಗಳು ಈ ಸಿದ್ಧಾಂತವನ್ನು ಸುಲಭದಲ್ಲಿ ಒಪ್ಪಿಕೊಳ್ಳುವದೇ ಇಲ್ಲ. ಆಕಾಶದಲ್ಲಿ ಎಣೆಯಿಲ್ಲದೇ ಸುತ್ತು ಹೊಡೆಯುವ ಹದ್ದುಗಳು, ಭೂಮಿಯ ಮೇಲೆ ನಡೆಯುವ ಸಕಲ ಕಾರ್ಯಕಲಾಪಗಳ ಮೇಲೆ ಸದಾಕಾಲ ಒಂದು ಕಣ್ಣು ಇಟ್ಟಿರುವಾಗ, ಕಾಕ ಸಮೂಹದ ಸುಖಭೋಜನವನ್ನು ನಿಟ್ಟಿಸದೇ ಇರುತ್ತವೆಯೇ? ಕಾಗೆಗಳು ಮಾಂಸದೂಟದಲ್ಲಿ ಮೈಮರೆತಾಗ, ಕ್ಷಣಾರ್ಧದಲ್ಲಿ

ಹದ್ದೊಂದು, ಎರಗಿ ದೊಡ್ಡ ಚೂರೊಂದನ್ನು ಪಂಜಗಳಲ್ಲಿ ಭದ್ರಪಡಿಸಿ, ಭರ್‍ರೆಂದು ಕಣ್ಮರೆಯಾಗಿ ಬಿಡುವದು. ಈ ಪರಿಯ ಮೋಸ, ಕಾಕಕೋಟಿಗೇ ಶುದ್ಧ ಅವಮಾನವೆಂದು ಬಗೆದ ಕಾಕಸ್ವಯಂಸೇವಕರು, ನಾಲ್ಕೂ ದೆಸೆಗೆ ಚದರಿ, ಅಪಹರಣಕಾರಿ ಹದ್ದಿನ ಹುಡುಕಾಟವನ್ನು ಪ್ರಾರಂಭಿಸುತ್ತವೆ. ಎತ್ತರದ ಮರದ ಆಶ್ರಯದಲ್ಲಿ ಹದ್ದು ಅಕ್ರಮ ಭೋಜನ ನಡೆಸಿರುವದನ್ನು ಕಂಡಾಕ್ಷಣ ಕಾಗೆ-ಹದ್ದುಗಳಲ್ಲಿ ದೃಷ್ಟಿಯುದ್ಧ, ಮಲ್ಲಯುದ್ಧ, ದ್ವಂದ್ವಗಳು ಪ್ರಾರಂಭವಾಗುವವು. ಕಾಗೆಗಳಿಗೆ ಬಲಶಾಲಿ ಗೃಧ್ರದೊಂದಿಗೆ ಕುಸ್ತಿಯಾಡುವ "ಹಿಮ್ಮತ್" ಎಲ್ಲಿಂದ ಬರಬೇಕು? ಕಳ್ಳ ಹೆಜ್ಜೆ ಹಾಕುತ್ತ ಬಂದು ಅದರ ಪುಚ್ಛ ಕುಕ್ಕುವದು, ಕಾಲು ಎಳೆಯುವದು, ಶಿರೋಭಾಗ ಪರಚುವದು, ಮುಂತಾದ ಕೀಟಲೆಯನ್ನು ಪ್ರಾರಂಭಿಸುವವು. ಈ ಹಿಂಸೆಯಿಂದ ತಪ್ಪಿಸಿಕೊಳ್ಳಲು ತಾನು ತಿನ್ನುತ್ತಿದ್ದ ಕಳೇಬರದ ಭಾಗವನ್ನೆತ್ತಿಕೊಂಡೇ ಹದ್ದು ಕಂಬಿ ಕೀಳುವದು. ಆಗಲೂ ಕಾಗೆಗಳು ಹಿಂಬಾಲಿಸದೇ ಇರುವದಿಲ್ಲ. ಕೊನೆಗೂ ಕದ್ದು ತಂದ ಮಾಂಸವೇ ತನ್ನ ಕಷ್ಟಕ್ಕೆ ಕಾರಣವೆಂದು ಅದನ್ನು ಮರದಲ್ಲಿಯೇ ಬಿಟ್ಟು, ಹದ್ದು ಗಗನಮಂಡಲ ಸೇರಿದಾಗ, ಕಾಗೆಗಳು ಅದನ್ನು ಪುನಃ ತಮ್ಮದನ್ನಾಗಿ ಮಾಡಿಕೊಳ್ಳುವ ಗೋಜಿಗೂ ಹೋಗದೇ, ಹದ್ದಿಗೆ ಬುದ್ಧಿ ಕಲಿಸಿದ ಉತ್ಸಾಹದಲ್ಲಿ ಪುನಃ ಭೋಜನಕೂಟಕ್ಕೆ ಮರಳುವವು.

ಪೈಪೋಟಿ

ಜೀವನದುದ್ದಕ್ಕೂ ಕಾಕಸಮೂಹವು ತಮ್ಮ ತಮ್ಮಲ್ಲಿ ತೀವ್ರ ಸ್ಪರ್ಧೆ, ಕಾದಾಟ, ಹೋರಾಟಗಳನ್ನು ಹೆಜ್ಜೆಹೆಜ್ಜೆಗೂ ಎದುರಿಸಲೇ ಬೇಕಾಗುತ್ತದೆ. ಪ್ರೌಢಾವಸ್ಥೆ ತಲುಪಿದ ಕಾಗೆ ತನ್ನ ಅಂಕಿತದಲ್ಲಿಡ ಬಯಸಿದ ಕ್ಷೇತ್ರವನ್ನು ಗುರುತಿಸಿ, ಜಾತಿಯ ಸಕಲರೂ ಅರಿಯುವಂತೆ ಕೂಗಿ ಸಾರುವದು. ಪ್ರತಿಸ್ಪರ್ಧಿ ಇದನ್ನು ಒಪ್ಪಿಕೊಳ್ಳದಿದ್ದರೆ ಕಾಳಗಕ್ಕೆ ಆಹ್ವಾನಿಸಿದಂತೆಯೇ. ಮೊದಲು, ಘೋಷಕ ಕಾಗೆ, ತನ್ನನ್ನು ಪ್ರಶ್ನಿಸಿದ ಆಗಂತುಕನ ಮೇಲೆ ಮುನ್ಸೂಚನೆ ಇಲ್ಲದೇ ಆಕ್ರಮಣಕ್ಕೆ ಧಾವಿಸುವದು. ತನ್ನ ಪಂಜದಿಂದ ವಿರೋಧಿಯ ಬ್ರಹ್ಮಾಸ್ತ್ರವಾದ ಕೊಕ್ಕನ್ನು ಅದುಮಿ ಹಿಡಿಯುವದು. ಪ್ರತಿಯಾಗಿ ವೈರಿಯೂ ಅದರ ಕೊಕ್ಕನ್ನು ಬಂಧಿಸಲು ಹವಣಿಸುವದು. ಈಗ ದ್ವಿತೀಯ ದರ್ಜೆಯ ಮಾರಕಾಸ್ತ್ರವಾದ ಈರ್ವರ ಪಂಜಗಳೂ ಕೆಲಸಕ್ಕೆ ಬಾರದಂತೆ ಹೆಣೆದುಕೊಳ್ಳುವವು. ಕಪಿಮುಷ್ಟಿಗಿಂತ ಭದ್ರವಾದ ಬಂಧನದಿಂದ ಏಕಕಾಲಕ್ಕೆ ಬಿಡುಗಡೆ ಹೊಂದಲು ಹವಣಿಸಿ ಸಾಧ್ಯವಾಗದೇ ಎರಡೂ ನೆಲಕ್ಕುರುಳುವವು. ಇಷ್ಟಾದರೂ ಹಿಡಿತವನ್ನು ಸಡಿಲಿಸದೇ ಒಂದರ ಮೇಲೊಂದು ಹೊರಳಾಡುವವು. ಈ ಪೇಚು, ಕುಸ್ತಿ, ಮಾರಾಮಾರಿ ನೋಡುವದೇ ಪಾಪಕರವೆಂದು ದಾರಿ ಹೋಕರು, ಕಣ್ಣು ಮುಚ್ಚಿಕೊಂಡು, ಮೂಗು ಹಿಡಿದು ದೂರದಿಂದಲೇ ಹೋಗಲಾರಂಭಿಸುವರು. ಹೊಗೆ ಕಾರುತ್ತ, ವಾಯುವೇಗದಿಂದ ವಾಹನವೊಂದು ಆ ರಸ್ತೆಯಿಂದ ಹಾದು ಹೋಗದಿದ್ದರೆ, ಅದೆಷ್ಟು ಹೊತ್ತು ವೈರತ್ವದ ಜ್ವಾಲೆಯಿಂದ ಅವೆರಡೂ ಕಾದಾಡುತ್ತಿದ್ದವೋ! ಬಂಧಮುಕ್ತ ಕಾಗೆ ತಕ್ಷಣ ಪಲಾಯನ ಮಾಡಲು ಯತ್ನಿಸಿದರೆ, ಜಂಭದ ಕಾಗೆ, ಅದನ್ನು ಬೆನ್ನಟ್ಟಿಕೊಂಡು ಹೋಗುತ್ತದೆ. ಮೊದಲು ಕಾಗೆ ಎತ್ತರಕ್ಕೆ ಹಾರಿ ಕೆಳಗಿಳಿಯುತ್ತದೆ,

ಪಲ್ಟಿ ಹೊಡೆಯುತ್ತದೆ. ದೂರ ಹಾರಿ ಮೃತಪಟ್ಟಂತೆ ನೆಲಕ್ಕೆ ಉರುಳುವ ಕಸರತ್ತು ಮಾಡುತ್ತದೆ. ಅಂತೂ ಅದನ್ನು ತನ್ನ ಕ್ಷೇತ್ರದಾಚೆಗೆ ತೊಲಗಿಸಿದ ಬಳಿಕವೇ ಪ್ರೌಢವಾದ ಸ್ವತಂತ್ರ ಕಾಗೆಗೆ ನೆಮ್ಮದಿ ದೊರೆಯುತ್ತದೆ.

ಹೆಣ್ಣಿನ ವಶೀಕರಣ ಸಂದರ್ಭಗಳಲ್ಲಿಯೂ ಇಂತಹ ತೀವ್ರಸ್ಪರ್ಧೆ, ಕಚ್ಚಾಟ, ಕದನಗಳು ತೀರ ಸಾಮಾನ್ಯವಾಗಿವೆ. ತನ್ನ ರಾಜ್ಯದ ಸ್ಥಾಪನೆಯಾಗಿ ಕ್ಷೇತ್ರವು ನಿರ್ದಿಷ್ಟಪಟ್ಟ ನಂತರ ಕಾಕಯುವಕನು 'ನಾನು ಹರೆಯಕ್ಕೆ ಬಂದಿದ್ದೇನೆ. ಕಾಕಪುಷ್ಪವತಿಯೇ! ನಿನ್ನನ್ನು ಸ್ವಾಗತಿಸುತ್ತೇನೆ!' ಎಂದು ಗಂಟಲು ಹರಿಯುವಂತೆ ಶಂಖನಾದಮಾಡಿ ನಾಲ್ದೆಸೆಗೂ ಅದು ಹರಡುವಂತೆ ನೋಡಿಕೊಳ್ಳುತ್ತಾನೆ. ಮೆಚ್ಚಿ ಹತ್ತಿರ ಬಂದವಳೊಡನೆ ಮೆಲುದನಿಯ ಕಾವ್ ಕಕ್! ಸಂಭಾಷಣೆಯಲ್ಲಿ ತೊಡಗುತ್ತಾನೆ. ಅವಳ ಅಂಗಾಂಗಗಳನ್ನು ಸವರಿ, ಸುಖಪಡುತ್ತಾನೆ. ಅವಳಿಗೆ ಹೇನುಗಳ ಬಾಧೆಯಿದ್ದರೆ, ಒಂದೊಂದಾಗಿ ಹೆಕ್ಕಿ ತನ್ನ ಉದರಕ್ಕೆ ಇಳಿಸುತ್ತಾನೆ. 'ನಾನು ನಿನಗೆ ಒಪ್ಪಿಗೆ ಯಾದೆನೇ?' ಎಂದು ವಿಚಾರಿಸುತ್ತಿದ್ದಂತೆ, ಬೇರೊಂದು ಗಂಡುಕಾಗೆ ಹತ್ತಿರದಲ್ಲಿ ಸುಳಿದಾಡಿದರೆ, ಈತನ ಕೋಪ ನೆತ್ತಿಗೆ ಏರುವದು. "ಇದೀಗಲೇ ಈ ಜಾಗ ಖಾಲಿ ಮಾಡು! ಇಲ್ಲದಿದ್ದರೆ....!" ಎಂದು ಚೀರಿ ಚೀರಿ ಹೇಳಿದಾಗ, "ಇಲ್ಲದಿದ್ದರೆ ಏನು ಮಾಡ್ತೀಯಾ ಮಗನೇ!" ಎಂದು ಅದು ತರುಣಕಾಗೆಯ ಶಕ್ತಿ-ಸಾಮರ್ಥ್ಯಗಳಿಗೆ ಸವಾಲು ಹಾಕಿದರೆ, ಕದನಕ್ಕೆ ಆಹ್ವಾನ ನೀಡಿದಂತೆ. ಒಂದನ್ನು ಇನ್ನೊಂದು ಬಗ್ಗು ಬಡಿಯಲು ಸರ್ವಪ್ರಯತ್ನ ನಡೆಸಿದಾಗ, ಹೆಣ್ಣು ಮುಸಿ ಮುಸಿ ನಗುತ್ತ ಮೋಜು ನೋಡುತ್ತಿರುತ್ತದೆ. ಸೆಣಸಾಟದಲ್ಲಿ ಯಾರು ಗೆದ್ದರೂ ಅವನೊಡನೆ ಸ್ವಯಂವರ ಮಾಡಿಕೊಳ್ಳಲು ಕಾಕಯುವತಿಯ ಆಕ್ಷೇಪಣೆ ಇಲ್ಲವೇ ಇಲ್ಲ! ಸೋತ ಪ್ರಾಣಿ ಈಗ, ಮುದಿಯಳಾದರೂ ನಡೆದೀತು! ಎಂದು ಹುಡುಕಿಕೊಂಡು ಹಾರಿಹೋಗುತ್ತದೆ.

❑

ನಮ್ಮ ಕಾಗೆಯ ಕತೆ


ಮೊಂಡು ಮೂತಿಯ ಕರಿಯಪ್ಪ

ನಮ್ಮ ಈ ರಾಜಧಾನಿಯಲ್ಲಿ ಕಾಕರಾಜನೇ ಪಕ್ಷಿರಾಜ. ಜನಜಂಗುಳಿ, ವಾಹನಗಳ ಓಡಾಟ, ಕಾರಖಾನೆಗಳ ಜಂಜಾಟಗಳಿಂದ ಅವನ ನೆಮ್ಮದಿಯ ಬಾಳಿಗೆ ಎಳ್ಳಷ್ಟೂ ಆತಂಕ ಬಾರದ್ದರಿಂದ ತನ್ನ ಸಂತತಿಯ ಅಭಿವೃದ್ಧಿ ಮಾಡುತ್ತಲೇ ನಡೆದಿದ್ದಾನೆ ಕಾಗಣ್ಣ. ನನಗೊಮ್ಮೆ, ಇತರ ಪಕ್ಷಿಗಳನ್ನು ಹುಡುಕಿಕೊಂಡು ರಂಗನತಿಟ್ಟು, ಕಾನ್ಹಾ, ಭರತಪುರ್‌ಗಳ ಪಕ್ಷಿಧಾಮಗಳಿಗೆ ಧಾವಿಸಿ ಕಾಲ-ಕಾಸುಗಳನ್ನು ವ್ಯಯಿಸುವದಕ್ಕಿಂತ, ಕಾಕರಾಜನನ್ನೇ ಪ್ರೀತಿಸಿ ನಿರೀಕ್ಷಿಸಿದರೆ ಹೇಗೆ? ಎಂಬ ವಿಚಾರ ನೆಮ್ಮದಿ ತಂದಿತು. ಬಿಡುವಿನ ಸಮಯವನ್ನೆಲ್ಲ ಕಳೆಯುತ್ತಿದ್ದ ಬಾಲ್ಕನಿಯ ಎದುರಿಗೆ ನೆರೆಮನೆಯವರ ಬೃಹದಾಕಾರದ ಹಲಸಿನ ಮರವಿತ್ತು. ಅದು ಕಾಗೆಗಳ ತಂಡವೊಂದರ ಆಶ್ರಯಸ್ಥಾನ. ಕಾಕ ಪಂಗಡದಲ್ಲಿ ಒಂದನ್ನು ಇನ್ನೊಂದರಿಂದ ಬೇರ್ಪಡಿಸುವದು ಇರುವೆಯೊಂದನ್ನು ಇನ್ನೊಂದರಿಂದ ಗುರುತಿಸುವಷ್ಟೇ ಕಷ್ಟ! ಅಂತೆಯೇ ಕಾಳಗವೊಂದರಲ್ಲಿ ಚುಂಚನ್ನು ಮೊಂಡು ಮಾಡಿಕೊಂಡಿದ್ದ ಕರಿಯಪ್ಪನನ್ನೇ ನಮ್ಮ ಪಕ್ಷಿಯೆಂದು ಗುರುತಿಸಿಕೊಂಡೆವು.

ಪಲ್ಲಕ್ಕಿಯಂತೆ ಅರೆವರ್ತುಲವಾಗಿ ಬಾಗಿ ನಂತರ ಗಗನದತ್ತ ಮುಖ ಮಾಡಿದ ಟೊಂಗೆ ನಮ್ಮ ಕರಿಯಪ್ಪನಿಗೆ ತುಂಬಾ ಇಷ್ಟ. ಆಕಾಶವಾಣಿಯಂತೆ ಸರಿಯಾಗಿ ಆರು ಗಂಟೆಗೆ ಎಲ್ಲಿಂದಲೋ ಪ್ರತ್ಯಕ್ಷನಾಗಿ ದನಿಯೇರಿಸಿ, "ಕಾಕಾSS ಅದಾಗಲೇ ದೊಡ್ಡ ಮುಂಜಾವು ಆಗಿದೆ. ಎಲ್ಲರೂ ಎದ್ದೇಳಿ" ಎಂದು ಅಧಿಕಾರವಾಣಿಯಿಂದ ಕೂಗಿ ಹೇಳುವ. ನಮಾಜಿಗೆ ಕರೆಕೊಟ್ಟವನ ಗೆಲುವಿನಿಂದ ಪ್ರಾತರ್ವಿಧಿಗಳನ್ನು ಪೂರೈಸಿಕೊಳ್ಳುವ. ಕಾಲಿನ ಪಂಜಗಳಿಂದ ಕಪೋಲಗಳನ್ನು ಕೆರೆದುಕೊಂಡು, ಅಲ್ಲಿ ಬೀಡುಮಾಡಿದ ಒಂದೆರಡು ಹೇನುಗಳನ್ನು ಮೋಕ್ಷಕ್ಕೆ ಕಳಿಸಿಬಿಡುವ. ಹಿಂದಿನ ಊಟದ ಮುಸುರೆ ಕೊಕ್ಕಿಗೆ ಸೇರಿಕೊಂಡಿರಬಹುದೆಂಬ ಅನುಮಾನದಿಂದಲೇ ತೊಗಟೆ ಸಹಾಯದಿಂದ ಶುಭ್ರಗೊಳಿಸುವ. ಅಷ್ಟರಲ್ಲಿ ಬೆನ್ನು ತುರಿಕೆ ಕಾಣಿಸಿಕೊಂಡಿದ್ದರಿಂದ ಕಪ್ಪೆಗಿದ್ದಂತಹ ಗಿಡ್ಡ ಗೋಣನ್ನು ಜಿರಾಫೆಯಂತೆ ಉದ್ದ ಮಾಡಿ ಹಿಂದಿನ ಪುಕ್ಕಗಳನ್ನು ಕಟಕಟ ಕಡಿದು, ಒಂದೆರಡು ಕಿರುಗರಿಗಳನ್ನು ನೆಲಕ್ಕೆ ಉರುಳಿಸುವ. ಗೂಡು ಬಿಡುವಾಗ ಶೌಚ ಸರಿಯಾಗಿರಲಿಲ್ಲವೆಂದು ನೆನೆದು ಇನ್ನೊಮ್ಮೆ ಯತ್ನಿಸಿ ಇಷ್ಟು 'ಪಿಷ್ಟ' ಹೊರಹಾಕುವ. ಈಗ ಮೈ ಹಗುರಾಗಿ, ಹೊಸ ಚೈತನ್ಯ ಪಡೆದು ಒಂದೊಂದಾಗಿ ರೆಕ್ಕೆ ಪಸರಿಸಿ, ಐದಾರು ಸಲ ಬೀಸಿ, ಮುಂಜಾವಿನ ಫಳಾರಕ್ಕಾಗಿ ಗಸ್ತಿಗೆ ಪ್ರಾರಂಭಿಸುವನು.

ಬ್ರೆಡ್ ಮಾಯ

ಕರಿಯಪ್ಪನಿಗೆ ಪರರ ಮನೆಯ ತಂಗಳ, ತಿಪ್ಪೆಯ ಮುಸುರೆಗೆ ಎಡತಾಕುವುದು ಒಪ್ಪಿಗೆಯಾಗದು. ಆದ್ದರಿಂದ ಆತನ ಸಕಲ ಆಹಾರದ ಆವಶ್ಯಕತೆಯನ್ನು ನಾವೇ ಪೂರೈಸುವದೆಂದು ನಿರ್ಧರಿಸಿದೆವು. ನಾಶ್ತಾಕ್ಕೆ ಬ್ರೆಡ್ ಚೂರುಗಳನ್ನು ಚಾಚಿದಾಗ ಅನುಮಾನಿಸುತ್ತ, ಹತ್ತಿರ ಸುಳಿದು



ನನಗೂ ಒಂದಿಷ್ಟು ಕೊಡೊ ಅಣ್ಣಾ!

ಸ್ವಸ್ಥಾನಕ್ಕೆ ಮರಳಿದ. ತಾನೊಬ್ಬನೇ ಸ್ವಾಹಾ ಮಾಡುವದು ಕ್ಷೇಮಕರವಲ್ಲವೆಂದು ತನ್ನ ಬಳಗದವರನ್ನೆಲ್ಲ ಕರೆಸಿಕೊಂಡ. ಆಮಂತ್ರಿತರು ಸಭಾಮರ್ಯಾದೆ ಪಾಲಿಸದೆ ತಿನ್ನಲು ಸ್ಪರ್ಧೆಗೆ ಇಳಿದಿದ್ದರಿಂದ, ರೇಗಿ ಅವರನ್ನು ಕುಕ್ಕಿದ. ಇನ್ನಿತರರಿಗೆ ಬುದ್ಧಿ ಕಲಿಸಲು ನಾವು ಎಸೆದ ಬ್ರೆಡ್ ತುಣುಕು ನೆಲಕ್ಕುರುಳುವ ಮೊದಲೇ ಗಗನ ವಿಹಾರಿಯಾಗಿ ತನ್ನವನ್ನಾಗಿ ಮಾಡಿಕೊಂಡ. ಮಿತವಾದ ವೇಗದಲ್ಲಿ ಹಾರುತ್ತ ಗುರಿ ಇಟ್ಟು ತುಣುಕನ್ನು ಬಾಯಲ್ಲಿ ಸೇರಿಸುವ ಚಮತ್ಕಾರವನ್ನು ನೋಡುವದೇ ಕಣ್ಣಿಗೊಂದು ಹಬ್ಬ... ಇಷ್ಟರಲ್ಲಿ "ಒಂದು ಪೌಂಡ್ ಅಯ್ಯಂಗಾರಿ ಬ್ರೆಡ್ ಕಾಗೆಗಳ ಪಾಲಾಯಿತು!" ಎಂದು ಅಡಿಗೆಮನೆಯಿಂದ ಎಚ್ಚರಿಕೆ ಬಂದಿತು. ಕೈಯಿಂದಲೇ ತಿನ್ನಿಸಬೇಕೆಂಬ ಚಪಲದಿಂದ ಚಕ್ಕುಲಿಯೊಂದನ್ನು ಹೊರತಂದೆ. ಕಾಗೆಗಳ ತಂಡದೆಡೆಗೆ ತೂರಿದ ಚೂರುಗಳು ಕ್ಷಣದಲ್ಲಿ ಮಾಯವಾಗಿ ಕೈಯಲ್ಲಿದ್ದ ಚಕ್ಕುಲಿಗೇ ಎರಗಿದವು. ಅವು ಹಾರಿಬಂದ ರಭಸಕ್ಕೆ ಪಂಜಗಳ ನಖಗಳು ಚೆನ್ನಾಗಿ ಕೈಯನ್ನು ಪರಚಿದವು. ಕಾಗೆಯ ಚುಂಚು ಇಷ್ಟೊಂದು ಗಟ್ಟಿಯಾಗಿರುತ್ತದೆಂದು ಕುಕ್ಕಿಸಿಕೊಂಡಾಗಲೇ ಅರಿವಾಯಿತು. ಒಂದು ಚಕ್ಕುಲಿಯಿಂದ ಕರಿಯಪ್ಪನ ಬಳಗಕ್ಕೆ ತೃಪ್ತಿ ಹೇಗಾದೀತು? 'ಇನ್ನಷ್ಟು ತರಬಾರದೇ!' ಎಂದು ಗೋಣನ್ನು ಅತ್ತ ಇತ್ತ ತಿರುಗಿಸಿ

ಅಂಗಲಾಚಿದವು. ಬ್ರೆಡ್ಡಿಗೆ ಆಗಲೇ ಎಚ್ಚರಿಕೆ ಬಂದದ್ದರಿಂದ ಚಕ್ಕುಲಿ ಡಬ್ಬಕ್ಕೆ ಇನ್ನೊಮ್ಮೆ ಕೈಹಚ್ಚುವ ಧೈರ್ಯವಾಗಲಿಲ್ಲ!

ಹಸಿರಾದ ಟೊಂಗೆಯ ಮೇಲೆ ಕುಳಿತು ಗಾಳಿ ಬೀಸಿದಾಗೊಮ್ಮೆ ತೂಗಿಕೊಳ್ಳುವದು ಕರಿಯಪ್ಪನಿಗೆ ತುಂಬ ಇಷ್ಟವಾದ ಆಟ. ಗಾಳಿ ಅಬ್ಬರಿಸಿ ಬೀಸಿದಾಗಲೂ ಒಂದಿಷ್ಟೂ ಅಳುಕದೆ ಸಮತೂಕ ತಪ್ಪದಂತೆ ಗರಿಬಿಚ್ಚಿ, ರೆಂಬೆ ಅವಚಿಕೊಂಡು, ಅಲ್ಲಿಯೇ ಸ್ಥಾಯಿಯಾಗಿರುವಂತೆ, ಮುನ್ನೆಚ್ಚರಿಕೆ ವಹಿಸುವದು. ಸಾಕಾಗುವಷ್ಟು ಆಹಾರ ಸೇವನೆ ಆಯಿತೆಂದರೆ, ಇನ್ನಿತರರು ಎಷ್ಟು ಕೂಗಿ ಕರೆದರೂ ಹೋಗುವದಿಲ್ಲ. ಕುಳಿತು ಕುಳಿತು ಬೇಸರವಾದಾಗ, ಕಣ್ಣು ಕೂರಿ ಬಂದಾಗ ಕೆಲ ನಿಮಿಷ ನಿದ್ದೆ ಹೋಗುವದು. ಒಮ್ಮೆ ಎದ್ದು ನೆನಪಾದಂತೆ, ಕಾಲು ನಡಿಗೆಯಲ್ಲಿ ಮರದ ಬೇರೆ ಬೇರೆ ಅಂಗಗಳ ಮೇಲೆ ಓಡಾಡಲಾರಂಭಿಸಿದ. ಅಲ್ಲೊಂದು ಇಲ್ಲೊಂದು ಸೀಳಿ ನಿಂತ ಒಣತೊಗಟೆ ಕಿತ್ತು ನೆಲಕ್ಕುರುಳಿಸುವ. ವರಲೆಯ ಮಣ್ಣುಗೂಡನ್ನು ಒಡೆದು ಒಳಗಿರುವ ಪ್ರೊಟೀನ್ ಭರಿತ ಕೀಟಗಳನ್ನು ಭಕ್ಷಿಸುವ. ಹತ್ತಿರದಲ್ಲೇ ಅಡಗಿದ ಓತಿಕಾಟವನ್ನು ಕಂಡು ಬೆಚ್ಚಿಬೀಳುವ. ನಂತರ ಅರೇ! ಇದಕ್ಕೆ ಅಂಜಿದೆನಲ್ಲ! ಎಂದು ಮರುಗಿ ಅದನ್ನು ಶಿಕ್ಷಿಸಲು ಅಟ್ಟಿಸಿಕೊಂಡು ಹೋಗುವ. ಓತಿಕಾಟ ಹೆದರಿ ಮರವನ್ನೆಲ್ಲ ಸುತ್ತುತ್ತ ಮೇಲೆ ಕೆಳಗೆ ಓಡುವಾಗ ಕರಿಯಪ್ಪ ಅದನ್ನು ಹಿಂಬಾಲಿಸುವದನ್ನು ನೋಡುವದೇ ಮೋಜು. ಈ ಕಾಕರಾಜ ಸುಲಭದಲ್ಲಿ ಸೋಲುವವನಲ್ಲ ಎಂದು ಅರಿತ ಓತಿಕಾಟ, ನೆಲದ ಮೇಲೆ ಹಬ್ಬಿದ ಮುಳ್ಳು ಪೊದೆಯಲ್ಲಿ ಸೇರಿದಾಗಲೇ ಕರಿಯಪ್ಪ ಸ್ವಸ್ಥಾನಕ್ಕೆ ಹಿಂದಿರುಗುವ. ಕೆಲವೊಮ್ಮೆ ಮುಟ್ಟಾಟದಲ್ಲಿ ಮೈಮರೆತ ಇಣಚಿಗಳು ಕರಿಯಣ್ಣನ ಅಸ್ತಿತ್ವವನ್ನು ಅಷ್ಟಾಗಿ ಲಕ್ಷ್ಯಕ್ಕೆ ತಂದುಕೊಳ್ಳದೇ ಅವನನ್ನು ಡಿಕ್ಕಿ ಹೊಡೆದು ಬಿಡುತ್ತವೆ. ಒಮ್ಮೆ ಇದರಿಂದ ಮುನಿದು ಒಂದನ್ನು ಶಿಕ್ಷಿಸಲು ಹೊರಟಾಗ ಕಂಗಾಲಾದ ಶ್ರೀರಾಮನ ಪುಟ್ಟ ಅನುಯಾಯಿ, ದಿಕ್ಕೆಟ್ಟು ಓಡಾಡಲಾರಂಭಿಸಿತು. ಕೊನೆಗೊಮ್ಮೆ ತೊಗಟೆಯ ಪೊಳ್ಳಿನಲ್ಲಿ ಸೇರಿಕೊಂಡು ಮಿಸುಕಾಡದೇ ಕುಳಿತಾಗಲೇ, ಅದರ ಇರವನ್ನು ಗುರುತಿಸಲಾಗದೆ ಕರಿಯಪ್ಪ ಸ್ವಸ್ಥಾನಕ್ಕೆ ಮರಳಿದ್ದು. ನಂತರ ಇಣಚಿಗಳ ಆಟ ಮುಂದರಿದರೂ ಅವು ಬಳಸು ದಾರಿಯನ್ನು ಆರಿಸಿದವು.

ಕಾಗೆಗೆ ಆಟ......

ಬೇಟೆಯಾಡುವದೆಂದರೆ ಕರಿಯನಿಗೆ ಬಲು ಜೀವ. ಕಪ್ಪೆಯೊಂದು ಕೀಟಕ್ಕೆ ಆಸೆಪಟ್ಟು ಜಿಗಿದಾಕ್ಷಣ ಕರಿಯ ವಾಯುವೇಗದಿಂದ ಭೂಮಿಗಿಳಿದು. ಬೇಟೆಯೊಡನೆ ಮರಕ್ಕೆ ಹಿಂದಿರುಗಿದ ಮಂಡೂಕರಾಜ, “ಜೀವದಾನ ಮಾಡಯ್ಯ! ಮಕ್ಕಳು, ಮರಿಮಕ್ಕಳೆಲ್ಲ ನಿನ್ನ ಹೆಸರಿನಿಂದ ಬದಕೋತವೆ” ಎಂದು ಚೀತ್ಕಾರ ಮಾಡುತ್ತಿದ್ದರೂ ಕೇಳದೇ ಕಲ್ಲೆದೆಯವನಾದ. ಎರಡೂ ಪಂಜಗಳಿಂದ ಮರವನ್ನು ಕಪ್ಪೆಯೊಂದಿಗೆ ಗಟ್ಟಿಯಾಗಿ ಹಿಡಿದು, ಕಪ್ಪೆಯ ಒದ್ದಾಟಕ್ಕೆ ಆಸ್ಪದ ಕೊಡದೇ ಕುಕ್ಕಲಾರಂಭಿಸಿದ. ಇನ್ನೇನು ಊಟ ಪ್ರಾರಂಭಿಸಬೇಕೆನ್ನುವದರೊಳಗೆ ಕಪಟಣ್ಣ, ತನಗೂ ಅದರಲ್ಲಿ ಪಾಲುಬೇಕೆಂದು ಏರಿ ಬಂದ. ಎರಡಕ್ಕೂ ಕೊಕ್ಕಿನ ಯುದ್ಧ ಪ್ರಾರಂಭವಾಗಿ

ಜೊತೆಗೇ ನೆಲಕ್ಕುರುಳಿದವು. ಕರಿಯಪ್ಪ ತನ್ನ ಮೊಂಡಾದ ಚುಂಚುವಿನಿಂದಲೇ ಕಪಟಣ್ಣನ ಎರಡು ಗರಿಗಳನ್ನು ಕಿತ್ತ. ಹೀಗಾಗಿ ಆತ ಪಲಾಯನ ಮಾಡಿದ. ನಂತರ ಯಾವ ಅಡ್ಡಿ ಆತಂಕಗಳೂ ಇಲ್ಲದ್ದರಿಂದ ಭೋಜನ ಸರಾಗವಾಯಿತು. ಇಲಿ ಕಂಡಾಗಲೆಲ್ಲ ಕರಿಯ ಬಾಯಿ ಚಪ್ಪರಿಸುವದುಂಟು. ಶೆಟ್ಟರ ಪತ್ನಿ ಆಗಾಗ ಪಂಜರದಲ್ಲಿ ಸಿಕ್ಕಿಕೊಳ್ಳುವ ಇಲಿ ಮರಿಯನ್ನು ಕರಿಯನಿಗಾಗಿ ಮೀಸಲಿಡುತ್ತಾಳೆ. ಪಂಜರದಿಂದ ಹೊರಬಿದ್ದೊಡನೆ ಮರಿ, ಆಸರೆ ಹುಡುಕಿ ಧಾವಿಸುವಾಗ ಕರಿಯ ಅದರ ಬಾಲವನ್ನು ಚೊಂಚಿನಲ್ಲಿ ಹಿಡಿದು ಸುಲಭವಾಗಿ ತಪ್ಪಿಸಿಕೊಳ್ಳದ ಸ್ಥಳದಲ್ಲಿ ಇಡುತ್ತಾನೆ. ತನಗೆ ಕೊಲ್ಲುವದರಲ್ಲಿ ಆಸಕ್ತಿ ಇಲ್ಲವೇನೋ ಎಂಬ ಭಾವ ತಳೆದು



ಮರಿಕಾಗೆಗೆ ಆಹಾರ ತಿನ್ನಿಸುತ್ತಿರುವಾಗ

ಮರದ ಮೇಲೆ ಕೂತಿರುತ್ತಾನೆ. ಇಲಿ ಬದುಕಿ ಉಳಿಯುವ ಯತ್ನವನ್ನು ಇನ್ನೊಮ್ಮೆ ಮಾಡಿದಾಗ, ತಿರುಗಿ ಅದೇ ನಾಟಕ. ಅರ್ಧ ತಾಸಾದರೂ ಈ ಬಗೆಯ ನಾಟಕ ಮುಂದುವರಿಯುತ್ತಿದ್ದರೇ ಆತನಿಗೆ ಖುಷಿ. ಇದರಿಂದ ನಿತ್ರಾಣಗೊಂಡ ಮರಿ ಮಿಸುಕಾಡದೇ ಬಿದ್ದುಕೊಂಡಾಗ, ಅದನ್ನು ಮರದ ಮೇಲೆ ಎತ್ತಿಕೊಂಡು ಹೋಗಿ ಭೋಜನ ಪ್ರಾರಂಭಿಸುವ.

ಕರಿಯಪ್ಪನ ಲಯಬದ್ಧ ತಾಳಬದ್ಧ ಸಂಗೀತವನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಪ್ರಬಂಧವೊಂದನ್ನು ಬರೆದರೆ ಅದೊಂದು ಉತ್ತಮ ಸಂಶೋಧನಾ ಗ್ರಂಥವಾಗುವದರಲ್ಲಿ ಸಂದೇಹವಿಲ್ಲ. ಆಹಾರ ಸಂಪಾದನೆಯಲ್ಲಿ ಮಾನವನಿಂದ ಗಂಡಾಂತರದ ಶಂಕೆಯಿದ್ದಾಗ ಸಂಗಡಿಗನಿಗೆ ಕೊಡುವ ಕರೆ ಶಂಖನಾದದಂತೆ ಇದ್ದರೆ, ತಾನು ಸಂಪಾದಿಸಿದ ಬೋಂಡಾವನ್ನು ಇನ್ನಿತರರು ಪಾಲುಗೊಳ್ಳದಂತೆ ಕೊಡುವ ಎಚ್ಚರಿಕೆ, ಕಹಳೆಯಂತೆ ಇರುತ್ತದೆ. ತಮ್ಮ ಸಮಾಜದ ಕಾನೂನು-ಕಟ್ಟಳೆ ಉಲ್ಲಂಘಿಸಿದವನ ಬ಼ಗ್ಗೆ ದೂರಿಕೊಳ್ಳುವಾಗ ಗಗನವಿಹಾರಿಯಾಗಿ ಮಾಡುವ ಘಂಟಾಘೋಷವೇ ಬೇರೆ. ನವಯುವತಿಯನ್ನು ಬರಮಾಡಿಕೊಳ್ಳುವುದಕ್ಕೆ ಪುಕ್ಕ ರೆಕ್ಕೆಗಳನ್ನು

ಬೀಸುತ್ತ, ಗೋಣು ಹಾಕುತ್ತ, ತೀರ ಮೆಲುವಾಗಿ ಕರ್‌s, ಕಕ್, ಕಕ್ ಕರ್ ಎಂದು ಕರೆದಾಗ ಕಾಳಮ್ಮ ಈ ಕರೆಯಿಂದ ಮುಗ್ಧಳಾಗಿ ಬಂದೇ ಬಿಡುತ್ತಾಳೆ. ಕರಿಯ ಅವಳ ಮೈದಡುವುತ್ತಾನೆ. ಹೇನು ಹೆಕ್ಕುತ್ತಾನೆ. ಪುಸಲಾಯಿಸಿ ದಟ್ಟ ಎಲೆಗಳ ಮರೆಯ ಏಕಾಂತಕ್ಕೆ ಕರೆದೊಯ್ಯುತ್ತಾನೆ. ಕೆಲವೇ ನಿಮಿಷಗಳಲ್ಲಿ ಆಹಾರದ ಅನ್ವೇಷಣೆಗೆ ಸತಿಯೊಂದಿಗೆ ಹೊರಡುತ್ತಾನೆ.

ಕರಿಯ ಎಂದೂ ರಾತ್ರಿಯನ್ನು ನಮ್ಮ ಮನೆಯ ಸನಿಹದ ಆ ಮರದ ಮೇಲೆ ಕಳೆಯುವದಿಲ್ಲ. ಸೂರ್ಯಾಸ್ತದ ಪೂರ್ವದಲ್ಲಿಯೇ ಉತ್ತರ ದಿಕ್ಕಿಗೆ ಹಾರಿಹೋಗಿಬಿಡುವ. ಮಲ್ಲೇಶ್ವರದಿಂದ ಎರಡು ಕಿಲೋಮೀಟರ್ ದೂರದ ಯಶವಂತಪುರದ ಕೆಲವು ಮರಗಳು ನೂರಾರು ಕಾಗೆಗಳಿಗೆ ಇರುಳಲ್ಲಿ ಆಶ್ರಯ ಕೊಡುತ್ತವೆ. ಅವುಗಳಲ್ಲಿ ಕರಿಯನೂ ಒಬ್ಬನಿರಬಹುದು. ಅವುಗಳಿಗೆ ಶಾಶ್ವತ ಸ್ಥಾನವೊಂದು ಇರದ್ದರಿಂದ ಪ್ರತಿದಿನವೂ ಯಾರು ಎಲ್ಲಿ ವಿರಮಿಸಬೇಕೆಂಬುದರ ಬಗ್ಗೆ ಕೂಗಾಟ, ಚೀರಾಟ, ಕಾದಾಟಗಳಾದ ನಂತರವೇ ಅವು ನಿದ್ದೆ ಹೋಗುವವು. ತಂದೆಯಾಗಲಿರುವ ಕರಿಯ ತನ್ನ ಪ್ರೀತಿಯ ತೂಗುಮರದಲ್ಲೇ ಗೂಡು ಕಟ್ಟಲು ನಿರ್ಧರಿಸಿ ಕಾರ್ಯೋನ್ಮುಖಿಯಾದ. ಭಾವಿ ಪೀಳಿಗೆಗೂ ತನ್ನಂತೆ ತೂಗಿಕೊಳ್ಳುವದು ಇಷ್ಟವಾಗಬಹುದೆಂಬ ಗ್ರಹಿಕೆಯಲ್ಲಿ, ಗಾಳಿ ಬೀಸಿದಾಗೊಮ್ಮೆ ತಲೆದೂಗುವ ರೆಂಬೆಯೊಂದರ ಮೇಲೆ ಪತ್ನಿಯ ಸಹಾಯದಿಂದ ಗೂಡು ಕಟ್ಟಲಾರಂಭಿಸಿದ. ಮೂರು ಸಲ, ಅರ್ಧ ನಿರ್ಮಾಣವಾಗಿದ್ದ ಗೂಡು ಉರುಳಿ ನೆಲ ಸೇರಿತು. ನಂತರ ಪತ್ನಿಯ ಸಲಹೆಗೆ ಕಿವಿಕೊಟ್ಟು, ಸುರಕ್ಷಿತ ಸ್ಥಳದಲ್ಲಿ ಬೇರೊಂದು ಗೂಡುಕಟ್ಟಿದ. ಗೃಹಪ್ರವೇಶ ಮಾಡಿದ ನಂತರ, ಗೃಹಸ್ಥನಿಗೆ ವಿರಾಮವಾಗಿ ಕುಳಿತು ತೂಕಡಿಸಿ ಹಗಲುಗನಸು ಕಾಣುವಾಗ ಪ್ರಪಂಚವೇ ಮರೆತು ಬಿಡುತ್ತದೆ. ನಾಲ್ಕು ಮೊಟ್ಟೆಗಳನ್ನಿಟ್ಟು ಕಾವು ಕೊಡಲು ಪತ್ನಿ ಕುಳಿತಾಗ ಸರ್ಪಕಾವಲಿಡುವ ದಿನಗಳಲ್ಲಂತೂ ಅನ್ನ, ನೀರು, ಕ್ರೀಡೆ, ಮನೋರಂಜನೆಗಳನ್ನು ಅಲಕ್ಷಿಸಿದ. ರಣಹದ್ದು, ಕೋತಿ, ಹಾವುಗಳನ್ನು ಸನಿಹದಲ್ಲಿ ಕಂಡಾಗೊಮ್ಮೆ ತನ್ನ ವಂಶಜರೊಂದಿಗೆ ಅವುಗಳ ಮೇಲೆ ಎರಗಿ ಪಲಾಯನ ಮಾಡುವತನಕ ಹಿಂಬಾಲಿಸುತ್ತಿದ್ದ. ಓತಿಕಾಟ, ಇಣಚಿಗಳು ಆ ದಾರಿಯಿಂದ ಹೊರಟಿದ್ದರೆ, ಅವುಗಳನ್ನು ಸ್ವರ್ಗಕ್ಕೆ ಕಳಿಸುವೆ ಎಂದು ಬೆದರಿಸುತ್ತಿದ್ದ. ಇಷ್ಟಾದರೂ ಎರಡು ಮೊಟ್ಟೆಗಳನ್ನು ಮಾರುತನು ನೆಲಕ್ಕುರುಳಿಸಿದಾಗ ಕರಿಯ ನಿಂದ ಏನೂ ಮಾಡಲಾಗಲಿಲ್ಲ. ಮೊದಲ ಮರಿ ಹೊರ ಬಂದಾಗ, ಕರ್ ಕರ್ ಎಂದು ಅಪ್ಪನನ್ನು ಗುರುತಿಸಿದಾಗ ಕರಿಯಪ್ಪನ ಆನಂದಕ್ಕೆ ಕೊನೆಮೊದಲಿಲ್ಲ.

ಕಷ್ಟ ಪರಂಪರೆ

ಬೆಳೆಯುತ್ತಿರುವ ಕುಟುಂಬಕ್ಕೆ ಆಹಾರ ಪೂರೈಕೆಯ ಜವಾಬ್ದಾರಿ ಕರಿಯನಿಗೆ ಕಷ್ಟಕ್ಕಿಟ್ಟು ಕೊಂಡಿತು. ಶುಚಿ ರುಚಿಗಳಿದ್ದ ತಿಂಡಿ ತಿನಸುಗಳನ್ನು ಮರೆತು, ಸುಲಭವಾಗಿ ಸಿಗುವಂತಹ ಕಡೆಗೆ ಹಾರಬೇಕಾಯಿತು. ಜೀನಸು ಅಂಗಡಿಯ ಸೆಟ್ಟರು ಆದಾಯಕರ ಖಾತೆಗಾಗಿ ಖೋಟಾ ಲೆಕ್ಕಾಚಾರ ಬರೆಯುವುದರಲ್ಲಿ ಮೈಮರೆತಾಗ ಕಾಳು ಕಡಿಗಳಿಗೆ ಬಾಯಿ ಹಾಕುವದನ್ನು ರೂಢಿಸಿಕೊಂಡಿತು. ಬೆದರಿಸಲು ಇಟ್ಟ ದೊಣ್ಣೆ, ನೇತುಹಾಕಿದ ಕರಿಗೊಂಬೆಗಳು ನಿಷ್ಪ್ರಯೋಜಕ

ವೆಂದು ಶೆಟ್ಟಿ ಬಲುಬೇಗ ಅರಿಯುವಂತಾಯಿತು. ಒಂದು ಮುಂಜಾನೆ ಟೇಬಲ್ಲಿನ ಅಂಚಿನಲ್ಲಿಟ್ಟ ಭಜಿಯೊಂದರ ಮೇಲೆ ಕಾಕದೃಷ್ಟಿ ಬಿತ್ತು. ಬೆಳೆಯುವ ಮರಿಗಳು ಈ ತಿಂಡಿಯಿಂದ ಖುಷಿಪಟ್ಟಾವೆಂದು ಪಿತೃವಾತ್ಸಲ್ಯದಿಂದ, ಶೆಟ್ಟರು ನೋಟಿನ ಕಂತೆ ಎಣಿಸುವದರಲ್ಲಿ ತಲ್ಲೀನರಾದಾಗ, ಕರಿಯ ಮಿಂಚಿನ ವೇಗದಿಂದ ಅಂಗಡಿಗೆ ನುಗ್ಗಿ ಭಜಿ ಕಚ್ಚಿಕೊಳ್ಳಬೇಕೆಂದಿರುವಲ್ಲಿ ಏನೋ 'ಛಟಲ್' ಎಂದು ಶಬ್ದವಾಯಿತು. ಶೆಟ್ಟರು ಮೋಸದಿಂದ ಇಟ್ಟಿದ್ದ ಇಲಿಕತ್ತರಿಯಲ್ಲಿ ಕರಿಯಪ್ಪನ ಕಾಲು ಸಿಕ್ಕಿಕೊಂಡಿತ್ತು. ಈ ಕ್ಷಣಕ್ಕಾಗಿ ಹೊಂಚು ಹಾಕಿದ್ದ ಅಂಗಡಿಕಾರ ಶಿಕ್ಷಿಸಲು ನಾಗಬೆತ್ತದೊಂದಿಗೆ ಹೊರಬಂದ. ಬದುಕಿಕೊಳ್ಳಲು ಸರ್ವಶಕ್ತಿ ಬಳಸಿ, ಕತ್ತರಿಯೊಂದಿಗೇ ಜಿಗಿಯಲು ಯತ್ನಿಸಿದ ಕರಿಯ ಹೇಗೋಹಾರಿಹೋದ. ಆದರೆ ಅದನ್ನು ಮೊಳೆಯೊಂದಕ್ಕೆ ದಾರದಿಂದ ಬಿಗಿದದ್ದರಿಂದ ಅರೆಕಾಲು ಅದರಲ್ಲಿಯೇ ಉಳಿದುಕೊಂಡಿತು! ಶೆಟ್ಟಿಯ ಕಪಟಕ್ಕೆ ಬಲಿಯಾಗಿ ಕಾಲು ಕಳೆದುಕೊಂಡ ಅವಮಾನದಿಂದ ಇಡೀ ದಿನ ಕರಿಯ ಗೂಡು ಬಿಟ್ಟು ಈಚೆಗೆ ಬರಲೇ ಇಲ್ಲ.

ಕರಿಯ ಅವಿತುಕೊಂಡ ನಿಜವಾದ ಕಾರಣ ಅಂದು ಸಂಜೆ ಅರಿಯುವಂತಾಯಿತು. ಅದು ಹೇಗೋ ಅವನು ಸಿಕ್ಕಿಕೊಂಡ ವಾರ್ತೆ ಕಾಕಸಮಾಜದಲ್ಲಿ ಹರಡಿಕೊಂಡುಬಿಟ್ಟಿತು. ಮುಖಂಡರು, ಕಾ, ಕಾ ಕರೆಕೊಟ್ಟು ಮಹಾಸಭೆ ಕರೆದರು. ಚಿಟ್ಟೂರರ ಬಂಗಲೆಯ ಪಾರ್ಶ್ವದಲ್ಲಿದ್ದ ಮಾವು, ಹಲಸು, ಬೇವಿನ ಮರಗಳಲ್ಲಿ ಸದಸ್ಯರು ಸೇರಿದಾಗ, ನ್ಯಾಯವಿಚಾರಣೆ ಪ್ರಾರಂಭವಾಯಿತು. ಕರಿಯ, ಯಾವುದೇ ವಿವರಣೆ ಕೊಡದೇ ತಲೆತಗ್ಗಿಸಿ ಕುಳಿತಿದ್ದರಿಂದ ಅವನು ಕಾಗೆಯ ಸಮಾಜಕ್ಕೆ ತಂದ ಕಳಂಕಕ್ಕಾಗಿ ರೆಕ್ಕೆಗಳಿಂದ ಎರಡು ಗರಿಗಳನ್ನು ಕೀಳಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಕ್ಷಣಾರ್ಧದಲ್ಲಿ ನಾಲ್ಕೈದು ಕಾಗೆಗಳು ಅವನ ಮೇಲೆ ಎರಗಿ ಶಿಕ್ಷಿಸಿಯೇ ಬಿಟ್ಟವು. ಇದರಿಂದ ಅವನ ಸ್ಥಿತಿ ಶೋಚನೀಯವಾಗಿ, ಆಹಾರ ಗಳಿಸುವಲ್ಲಿ ಇನ್ನಿತರರೊಂದಿಗೆ ಸ್ಪರ್ಧಿಸುವದು ತೀರ ದುಸ್ತರವಾಯಿತು. ಹಾರುವದು ಕಷ್ಟವೆಂದರೆ, ಒಂಟಿ ಕಾಲಿನಲ್ಲಿ ಸಮತೋಲನದಲ್ಲಿ ಆಹಾರಕ್ಕಾಗಿ ಕಾದು ಕೂಡ್ರುವುದು ಇನ್ನೂ ಕಠಿಣವಾಯಿತು. ಕಾಕ ಸಮಾಜದಲ್ಲಿ ಅಂಗವಿಕಲರಿಗೆ ವಿಶೇಷ ಸವಲತ್ತುಗಳು ಇಲ್ಲವಾದ್ದರಿಂದ, ಕರಿಯ ಅತ್ಯಂತ ಚಾಣಾಕ್ಷತನದಿಂದ ಸುತ್ತಮುತ್ತಲಿನ ಮನೆಗಳಲ್ಲಿಯ ಜನರ ಓಡಾಟಗಳನ್ನು ಅಭ್ಯಸಿಸಲಾರಂಭಿಸಿದ. ಇದರಿಂದಾಗಿ ತಿಂಡಿ, ತಿನಸುಗಳನ್ನು ದೊರಕಿಸುವದರಲ್ಲಿ ಹೆಚ್ಚಿನ ಸಹಾಯವಾಗಲಾರಂಭಿಸಿತು. ಡಿಸೋಜನು ರವಿವಾರ ತಂದ ಮಟನ್ ತುಂಡುಗಳನ್ನು ಮುಚ್ಚಿಡಲು ಮಡದಿ ಒಂದು ಕ್ಷಣ ಮರೆತರೆ ಕರಿಯ, ಕಳ್ಳಹೆಜ್ಜೆಯಿಂದ ಮನೆಯನ್ನು ಪ್ರವೇಶಿಸಿ ಒಂದು ತುಂಡು ಕಚ್ಚಿಕೊಂಡು ಹಾರಿದಾಗಲೇ ಮೇರಿಗೆ ತನ್ನ ಅಜಾಗ್ರತೆ ಲಕ್ಷ್ಯಕ್ಕೆ ಬಂದಿತು. ಮರುದಿನ ಪ್ರಭುಗಳ ಮನೆಯಿಂದ ಅರೆತೆಂಗಿನ ಹೋಳನ್ನು ಕಚ್ಚಿಕೊಂಡೇ ಹಾರಿತು. ಈ ಕಳ್ಳತನ ತಪ್ಪಿಸುವದಕ್ಕಾಗಿ ನೆರೆಹೊರೆಯವರು ಸುಲಭವಾಗಿ ಎಟುಕದ ಸ್ಥಳದಲ್ಲಿ ಆಮಿಷವಾಗಿ ಆಹಾರವಸ್ತುಗಳನ್ನು ಇಡಲಾರಂಭಿಸಿದಾಗ ಅವು ಇರುವೆಗಳ ಸೊತ್ತಾದವೆ ವಿನಾ ಕರಿಯ ಅವುಗಳಲ್ಲಿ ಇಷ್ಟೂ ಆಸಕ್ತಿ ತೋರಿಸಲಿಲ್ಲ.

ಒಂದೇ ತಿಂಗಳು ಕಳೆಯುವದರೊಳಗೆ ಕರಿಯ ತನ್ನ ವಿಕಲತೆಗೆ ಹೊಂದಿಕೊಂಡು, ಜೀವಿಸುವದನ್ನು ರೂಢಿ ಮಾಡಿಕೊಂಡು ಬಿಟ್ಟ. ಹಿಂದಿನ ಸಂಗೀತಸಭೆ, ಕಪ್ಪೆ-ಇಲಿಗಳ ಬೇಟೆ,

ವೈರಿಗಳೊಂದಿಗೆ ಕಾದಾಟ, ಗಾಳಿ ಬೀಸಿದಾಗ ರೆಂಬೆಯ ಜೋಕಾಲಿಯಾಟಗಳನ್ನು ತಿರುಗಿ ಪ್ರಾರಂಭಿಸಿದ. ನಲ್ಲೆಯೊಂದಿಗಿರಲಿ, ಸ್ನಾನಕ್ಕೆ ಇಳಿದಿರಲಿ, ಜೊತೆಯವರು ಅವನನ್ನು ಕಡೆಗಾಣಿಸಲಿಲ್ಲ; ಪರಿಹಾಸ್ಯ ಮಾಡಲಿಲ್ಲ. ಆದ್ದರಿಂದ ಮಾನವ, 'ಪಾಪ! ಕುಂಟು ಕಾಗೆ' ಎಂದು ತೋರಿಕೆಯ ಮರುಕ ತೋರಿದಾಗ, ಅವನಿಗೆ ರೇಗುತ್ತಿತ್ತು. ನಾಲ್ಕು ಕಾಳು ಕಡಿ ತಾನು ತಿಂದರೆ ಶೆಟ್ಟಿ ಬಡವನಾಗುವದು ಅಷ್ಟರಲ್ಲಿಯೇ ಇತ್ತು ಎಂಬ ಆತನ ತರ್ಕ ಅಲ್ಲಗಳೆಯುವಂತಿರಲಿಲ್ಲ. ಅಂದು ಸ್ನಾನ ಮುಗಿಸಿ ಸ್ವಸ್ಥಾನಕ್ಕೆ ಮರಳುತ್ತಿದ್ದ ಕರಿಯ, ಶಾಲೆ ತಪ್ಪಿಸಿ ಬರುತ್ತಿದ್ದ ಪೋಲಿ ಹುಡುಗರ ಲಕ್ಷ್ಯ ಸೆಳೆದ. ಒಬ್ಬ ಚುಡಾಯಿಸಿದ, ಇನ್ನೊಬ್ಬ ಕಲ್ಲು ತೂರಿದ. ಮಗದೊಬ್ಬ ಕೈಚೀಲದಲ್ಲಿ ಅಡಗಿಸಿಟ್ಟ ಚಿಟ್‌ಬಿಲ್ಲನ್ನು (ಕ್ಯಾಟಪಲ್ಟ್) ಹೊರಗೆಳೆದು ಗುರಿಯಿಟ್ಟು ಕಲ್ಲು ಹೊಡೆದ ರಭಸಕ್ಕೆ ಕರಿಯ ಜ್ಞಾನ ತಪ್ಪಿ ಕೆಳಗುರುಳಿದ. ಅದಕ್ಕೆ ಒಂದಿಷ್ಟು ಗಾಳಿ, ನೀರು ಪೂರೈಸುವ ಬದಲಾಗಿ ಪಡ್ಡೆ ಹುಡುಗರು ಅವನ ಕೊಲೆ ಮಾಡಿಯೇ ಬಿಟ್ಟರು. ಅಂದು ಮನೆಗೆ ಹಿಂದಿರುಗಿದಾಗ, ಕಾಕಕೋಟಿಯ ಚೀತ್ಕಾರದಿಂದ ಏನೋ ಅನಾಹುತ ನಡೆದಿರಬೇಕೆಂದು ವಿಚಾರಿಸಿದೆ. ಮಡದಿಯಿಂದ ವಿವರ ತಿಳಿದು ಕಳವಳವಾಯಿತು. ಧಾವಿಸಿ ಕರಿಯನ ಕಳೇವರವೆತ್ತಿದಾಗ ತಣ್ಣಗೆ ಕೊರೆಯುತ್ತಿತ್ತು. ಸತ್ತ ಕರಿಯನಿಗೆ ಈ ಕರುಣೆ ಬೇಕಿಲ್ಲವೆಂಬ ಪ್ರತಿಭಟನೆಯಿಂದ ಕಾಗೆಗಳು ಆಕ್ರಮಿಸಲು ಬಂದವು. ಅಂತೆಯೇ ಅದನ್ನು ಹಾಗೇ ಬಿಟ್ಟು ಹಿಂದಿರುಗಬೇಕಾಯಿತು. ಮರುದಿನ ಬೆಳಿಗ್ಗೆ ಕರಿ ಇರುವೆಗಳು ಕರಿಯನ ಕಳೇಬರದ ಮೇಲೆ ಭೋಜನಕೂಟ ನಡೆಸಿದ್ದವು. ಇದು ಮನಸ್ಸಿಗೆ ಬಾರದೆ ಒಂದಡಿ ಹೊಂಡ ತೋಡಿ, ಕರಿಯನ ಅಂತ್ಯಸಂಸ್ಕಾರ ಮಾಡಿದಾಗ ಏನೋ ಕರ್ತವ್ಯ ನೆರವೇರಿಸಿದ ನೆಮ್ಮದಿಯೆನಿಸಿತು. ಕರಿಯ ತೂಗಿಕೊಳ್ಳುತ್ತಿದ್ದ ರೆಂಬೆ, ಮಣ್ಣಾಗಿ ಹೋದ ನೆಲ ನೋಡಿದಾಗೊಮ್ಮೆ ಆತನ ನೆನಪಾಗಿ ಕಸಿವಿಸಿಯಾಗುವದು.

❑

ಕಾಗೆಯ ಭಾಷೆ

ಸುಪ್ರಭಾತ!

ಕಾಕಸಮಾಜದಲ್ಲಿ ಸಂಗೀತ, ನೃತ್ಯ ತರಬೇತಿಯ ಕೇಂದ್ರಗಳು ಬೇಕಿಲ್ಲ! ಕಾಗೆಗಳು ಹುಟ್ಟಾ ಭಾವಭಾಷೆಗಳಲ್ಲಿ ಪರಿಣತವಾಗಿರುತ್ತವೆ. ಆದರೆ ಅವುಗಳ ಭಾಷೆ ಅರಿಯಲು, ಸಂಗೀತ ಆಲಿಸಲು, ಹಾವ-ಭಾವಗಳನ್ನು ವೀಕ್ಷಿಸಲು ಮಾನವನಿಗೆ ತಾಳ್ಮೆ ಹಾಗೂ ಬಿಡುವುಗಳಿರುವದಿಲ್ಲ ಅಷ್ಟೆ. ಇನ್ನೂ ಕಗ್ಗತ್ತಲಿರುವಾಗಲೇ ಕಾಕಸಮೂಹ, ಸುಖನಿದ್ರೆಯಿಂದ ಎದ್ದೇಳುವದನ್ನು ರೂಢಿಸಿ ಕೊಂಡುಬಿಟ್ಟಿವೆ. ರೆಕ್ಕೆಗಳನ್ನು ಝೂಡಿಸಿಕೊಂಡು, ಆಕಳಿಸಿ, ಕಂಠವನ್ನು ಶ್ರುತಿಗೊಳಿಸಿ, ಕರ್! ಕರ್! ಎಂದು ಕಾಗಪ್ಪ ಹತ್ತಿರವಿದ್ದ ಕಾಕಮ್ಮನಿಗೆ 'ಸುಖನಿದ್ರೆಯಾಯಿತೇ?' ಎಂದು ವಿಚಾರಿಸುವನು.



ಯುಗಲಬಂದಿಯಲ್ಲಿ!

ಅವಳು ಕಾss‌ಕ್... ಕಾsಕ್ ಎಂದು, 'ನಿನ್ನ ಸಹವಾಸದಲ್ಲಿ ಕೊರಡಿನಂತೆ ಮಲಗಿಬಿಟ್ಟೆ!' ಎಂದು ಅವನ ಬೆನ್ನು ತಟ್ಟುವಳು. ಆಚೆ ಈಚೆ ಮರದ ರೆಂಬೆಗಳಲ್ಲಿ ನಿದ್ರೆಹೋದ ಯುವಜನಾಂಗ ಇನ್ನೂ ಎಚ್ಚೆತ್ತಿಲ್ಲವೆಂದು ಮರುಗಿ, ಖರ್s! ಖರ್ರ್! ಎಂದು ಗಡಸು ದನಿಯಲ್ಲಿ ಕರೆಗಂಟೆ ಬಾರಿಸುವುದು. ಅವುಗಳಿಂದ ಪ್ರತ್ಯುತ್ತರ ಬಾರದಿದ್ದಾಗ, 'ಏನಯ್ಯ, ನಾಚಿಕೆಗೇಡು! ಮಾನವಪ್ರಾಣಿ

ಏಳುವ ಸಮಯವಾದರೂ, ನಿಮಗಿನ್ನೂ ಏಳಲಾಗುವದಿಲ್ಲವೇ?' ಎಂದು ಹಿರಿಯ ಕಾಗಪ್ಪನು ಛೀಮಾರಿ ಹಾಕಿದಾಗ, ಕಾಕಾ ಕಾಕಾss! ಎಂದು ತಾವು ಎದ್ದೇ ಬಿಟ್ಟಿದ್ದೇವೆ, ಎಂದು ಸಂಕೇತ ನೀಡುವವು. ನೆರೆಹೊರೆಯ ಕಾಕ ಕುಟುಂಬಗಳು ಎಚ್ಚರಗೊಂಡಿವೆಯೇ? ಎಂದು ಪರೀಕ್ಷಿಸಲು, ಧ್ವನಿ ಎತ್ತರಿಸಿ ಖಾ ಖಾ! ಖಾ ಖಾ ಖರ್! ಎಂದು ಕರೆ ನೀಡುವದು. ಇದನ್ನು ಆಲಿಸಿದ ಕಾಗೆಗಳು ಅಷ್ಟೇ ಖಾರವಾಗಿ 'ನಾವು ಅದಾಗಲೇ ನಮ್ಮ ದಿನಚರಿಯನ್ನು ಪ್ರಾರಂಭಿಸಿಬಿಟ್ಟಿದ್ದೇವೆ!' ಎಂದು ಉತ್ತರಿಸುವವು. ಕಾಕಕೋಟಿಯ ಈ ಉದಯರಾಗವನ್ನು ಕೇಳಿ ಮಾನವನು, ಶಪಿಸುತ್ತ ಹಾಸಿಗೆಯನ್ನು ಬಿಟ್ಟೇಳುವದನ್ನು ರೂಢಿಸಿಕೊಂಡಿದ್ದಾನೆ.

ಕಾಗೆಯ ಕ್ರಕ್ರಾಕ್ರಿಕ್ರೀ...

ಕಾಕಭಾಷೆಯೆಂಬುದು, ನಮ್ಮದಕ್ಕಿಂತ ತೀರ ಭಿನ್ನವಾಗಿದ್ದರಿಂದ, ಭಾಷಾಂತರಿಸುವದು ಸುಲಭವಲ್ಲ. ಅವು ಬಳಸುವ ಅಕ್ಷರಗಳು ನಮ್ಮ ವರ್ಣಮಾಲಿಕೆಯಲ್ಲಿ ಇಲ್ಲವೇ ಇಲ್ಲ! ಕಾಗೆಗಳು ಎಂದೂ ಮನುಷ್ಯರು ಬಳಸುವ 'ಕ, ಖ,' ಅಕ್ಷರಗಳನ್ನು ಉಚ್ಚರಿಸುವದಿಲ್ಲ. ಏಕಾಗ್ರತೆಯಿಂದ ಆಲಿಸಿದಾಗ ಕಾಗೆಯ ಕೂಗಿನಲ್ಲಿ 'ಕ' ಹಾಗೂ 'ಖ'ದ ಮಿಶ್ರಣದ ಬೇರೆಯೇ ಅಕ್ಷರವೊಂದನ್ನು ಅವು ತಮ್ಮದನ್ನಾಗಿಸಿವೆ ಎಂಬುದು ಅರಿವಾಗುವದು. ಮಾನವನ ಭಾಷೆಗಳಲ್ಲಿ ಅದೆಷ್ಟು ಉಚ್ಚಾರದ ಅಂತರಗಳಿಲ್ಲ? ಉತ್ತರ ಭಾರತದವರು 'ಖಾನಾ ಖಾಯಾ?' ಎಂದು ಬರೆದದ್ದನ್ನು ಕೇರಳದವರು ಕಾಣಾ ಕಾಯಾ? ಎಂದು ಉಚ್ಚರಿಸುವದಿಲ್ಲವೇ? ಕರಾವಳಿಯವರು 'ಕಾಮತ' ಎಂದು ಬರೆದದ್ದನ್ನು ಧಾರವಾಡದವರು ಕಾಮತ್ ಎಂದೂ ಬೆಂಗಳೂರಿನವರು ಕಾಮತಾ ಎಂದೂ ಉಚ್ಚರಿಸುತ್ತಾರೆ. ಅದು ಅಮೇರಿಕನ್ನರಿಗೆ 'ಕ್ಯಾಮಟ್' ಆಗುವದುಂಟು! ಮೋಕ್ಷಗುಂಡಂ, ಅಳಗಿರಿ, ಸುಬ್ರಮಣ್ಯಂ ಮುಂತಾದ ಹೆಸರುಗಳು ಆಂಗ್ಲನಾಲಿಗೆಗೆ ಒಗ್ಗುವದೇ ಇಲ್ಲ! ನಾವೇನೋ, ಕಾಗೆಗಳು ಕಾ ಕಾ ಎಂದು ಕೂಗುತ್ತವೆ, ಎಂದುಕೊಂಡರೆ ಇಂಗ್ಲಿಷ್ ಭಾಷೆಯಲ್ಲಿ ಅದು ಕಾವ್! ಕಾವ್! (caw) ಎಂದು ಪರಿವರ್ತನೆಯಾಗುತ್ತದೆ. ನಮ್ಮ ಕಿವಿಗಳಿಗೆ ಎಲ್ಲಾ ಕಾಗೆಗಳೂ ಏಕ ಪ್ರಕಾರವಾಗಿ ಕರ್ಕಶವಾದ ಕಂಠವನ್ನು ಹೊಂದಿರುತ್ತವೆ ಎನಿಸಿದರೂ, ಗಂಡು ಹೆಣ್ಣು ಕಾಗೆಗಳ ಕಂಠಗಳಲ್ಲೂ ಪ್ರಭೇದವಿದ್ದಂತೆ, ರೂಪದಲ್ಲೂ ಒಂದಿಷ್ಟು ವ್ಯತ್ಯಾಸವಿರುವದು ಸಾಮಾನ್ಯ. ಅವು ತಮ್ಮಲ್ಲಿ ಕಪ್ಪಣ್ಣ, ಕರಿಯಣ್ಣ, ಕಾಡಿಗಪ್ಪ ಎಂದು ನಾಮಕರಣದ ಪದ್ಧತಿ ಇಟ್ಟುಕೊಳ್ಳದಿದ್ದರೂ, ಧ್ವನಿಯಿಂದಲೇ ತಮ್ಮ 'ಜಾತ್‌ಭಾಯ್'ನನ್ನು ಗುರುತಿಸಬಲ್ಲವು. ಈ ತಳಹದಿಯ ಮೇಲೆಯೇ ತಮ್ಮ ಪತಿ, ಪತ್ನಿ, ಪುತ್ರ, ಪುತ್ರಿಯರನ್ನು ಅವು ಗುರುತಿಸುತ್ತವೆ. ಹರದಾರಿ ದೂರದಿಂದ ಕೊಟ್ಟ ಕರೆ ಯಾರದೆಂದು ಥಟ್ಟನೆ ಗುರುತಿಸಿ, ಅದಕ್ಕೆ ಪ್ರತ್ಯುತ್ತರ ನೀಡುವ ಸಾಮರ್ಥ್ಯವನ್ನು ಕಾಕಕೋಟಿ ಪಡೆದಿದೆ.

ಮಾನವ ಶಿಶು ಹುಟ್ಟಿದಾಕ್ಷಣ ಅಳಬಹುದು. ಆದರೆ ಮಾತನಾಡಲು ಕಲಿಯುವದು ಇನ್ನೊಬ್ಬರ ಅನುಕರಣೆಯಿಂದಲೇ! ಆತ ಹುಟ್ಟು ಕಿವುಡ, ಮೂಕನಾಗಿರುತ್ತಾನೆ. ಆದರೆ

ಕಾಗೆಮರಿ, ಭೂಮಿಗೆ ಇಳಿದು ಬರುವಾಗ ತನ್ನ ಸ್ವರಪೆಟ್ಟಿಗೆಯನ್ನು ಜೊತೆಗೇ ತಂದಿರುತ್ತದೆ. ಹೀಗಾಗಿ ಅದನ್ನು ಒಂಟಿಯಾಗಿ ಬೆಳೆಸಿದರೂ, ತನ್ನ ನಾದ-ನಿನಾದವನ್ನು ಹೊರಹೊಮ್ಮಿಸದೇ ಇರುವದಿಲ್ಲ. ಬೆಳೆದ ಮರಿ, ಇನ್ನೂ ಮೊಟ್ಟೆಯ ಕವಚದಲ್ಲಿ ಇರುವಾಗಲೇ ತನ್ನನ್ನು ಬಂಧಮುಕ್ತ ಮಾಡಲು ಏಕಾಕ್ಷರದ ಮೆಲುದನಿಯಲ್ಲಿ 'ಕಾ' ನಾದ ಹೊರಡಿಸುತ್ತದೆ! ಇದನ್ನು ಆಲಿಸಿದ ಪಾಲಕಪಕ್ಷಿ, ಚುಂಚಿನಿಂದ ಕವಚವನ್ನು ಪೂರ್ತಿಯಾಗಿ ಒಡೆದು ಭಾವೀ ಪೀಳಿಗೆಯನ್ನು ಇಹಲೋಕಕ್ಕೆ ಬರಮಾಡಿಕೊಳ್ಳುತ್ತದೆ. ಬೆಳೆಯುವ ಮರಿಗಳಿಗೆ ವಿಪರೀತ ಹಸಿವು! ತಾಳಿಕೊಳ್ಳಲಾರದೇ ಗುಟುಕಿಗಾಗಿ ಕೂಗಿ ಕೂಗಿ ಗೋಗರೆಯುತ್ತವೆ. ಒಂದೇ ಅಕ್ಷರದಿಂದ ಪ್ರಾರಂಭಿಸಿ, 'ಕಾಽಖಾಽ' ಎಂದು ಕೂಗಿ ಸಕಾಲದಲ್ಲಿ ಆಹಾರ ಬಾರದಿದ್ದರೆ ಜೋರಾಗಿ ಚೀರುತ್ತವೆ. ಮರಿಗಳ ಚೀರಾಟದಿಂದ ಅವುಗಳ ಇರವು ಪಾಲಕರಿಗಷ್ಟೇ ಅಲ್ಲದೇ ಕಡುವೈರಿಗಳಿಗೂ ತಲುಪುವಂತೆ ಆಗುತ್ತದೆ. ಮರಿಗಳು ಬೆಳೆಯುತ್ತ ಹೋದಂತೆ, ಅವುಗಳ ಕಂಠದ ಕಸುವೂ ಅಭಿವೃದ್ಧಿಯಾಗುತ್ತ ಹೋಗುತ್ತದೆ. ನಾಡ ಕಾಗೆಗೆ ಹೆಣ್ಣು ಧ್ವನಿಯಿದ್ದರೆ, ಕಾಡುಕಾಗೆಗೆ 'ಗಂಡುಗಂಟಲು' ಇರುತ್ತದೆ. ಮುದಿ ಕಾಗೆಗಳ ಧ್ವನಿಪೆಟ್ಟಿಗೆ ಗೊಗ್ಗರು ಆಗುತ್ತದೆ. ಕಾಗೆಗಳ ಕೂಗನ್ನು ಲಕ್ಷವಿಟ್ಟು ಆಲಿಸಿಯೇ ಅವುಗಳ ವಯಸ್ಸು, ಪ್ರಭೇದಗಳನ್ನು ಗುರುತಿಸಬಹುದಾಗಿದೆ.

ಕಾಗೆಗಳು ತಮ್ಮ ದಿನನಿತ್ಯದ ಚಟುವಟಿಕೆಗಳಿಗೆ ಹೊಸ ಹೊಸ ತಾಣಗಳನ್ನು ಹುಡುಕಿಕೊಂಡು ಹೋಗುವದಕ್ಕಿಂತ, ತಮ್ಮ ನಿರ್ದಿಷ್ಟ ಸ್ಥಾನಗಳಿಗೇ ಸೀಮಿತಗೊಂಡು ಜೀವಿಸುವದು ಹೆಚ್ಚು. ನಸುಕಿನ ನಾಶ್ತಾಕ್ಕೆ ತಿಪ್ಪೆರಾಶಿ, ಕಸದ ತೊಟ್ಟಿಗೆ ಭೇಟಿಕೊಡುತ್ತವೆ. ಅಲ್ಲಿ ಪ್ರತಿಸ್ಪರ್ಧಿಗಳ ಸುಳುಹು ಇಲ್ಲದಿದ್ದರೆ, ವಿರಾಮವಾಗಿ ಕುಳಿತು, ಸಿಕ್ಕಷ್ಟನ್ನು ತಿಂದು ತೇಗುತ್ತವೆ. ಆಹಾರವು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿದ್ದರೆ, ಕಾ ಕಾ ಎಂದು ಆತ್ಮೀಯರನ್ನೂ, ಯಥೇಷ್ಟವಾಗಿದ್ದರೆ, ಕಾಽ ಕಾಽ ಕಾಽ ಎಂದು ಇಡೀ ಕಾಕಕೇರಿಗೆ ಕೇಳಿಸುವಂತೆಯೂ ಕೂಗಿ ತಮ್ಮವರೆಲ್ಲರನ್ನೂ ಬರಮಾಡಿಕೊಂಡು, ಪಾಲ್ಗೊಳ್ಳುವದರಲ್ಲಿ ಸಹಾಯ ಮಾಡುತ್ತವೆ. ತಂತಮ್ಮ ಪಾಲನ್ನು ಪಡೆದ ಕಾಗೆಗಳು ಹತ್ತಿರದ ಗಿಡ, ಮರವೇರಿ ಹಸಿವು ನೀಗಿಸಿಕೊಳ್ಳುತ್ತವೆ. ವಿಶ್ರಾಂತಿಯಲ್ಲಿರುವ ಕಾಗೆ ಬಳಗವನ್ನು ಕಂಡ ಪೋಲಿ ಹುಡುಗರು ಕಲ್ಲು ಎಸೆಯಲಾರಂಭಿಸಿದಾಗ, ಇವರ ಮನೆ ಹಾಳಾಗ ಎಂದು ಶಪಿಸುತ್ತ ಹಾರಿಹೋಗುವವು. ಹೊಟ್ಟೆ ಭಾರವಾಗಿ, ಬಿಸಿಲಿನ ತಾಪ ಏರಲಾರಂಭಿಸಿದಾಗ, ದೈಹಿಕ ಚಟುವಟಿಕೆಗಳಿಗೆ ಪೂರ್ಣವಿರಾಮ ಕೊಟ್ಟು, ನೆರಳಿದ್ದ ಸುರಕ್ಷಿತ ಸ್ಥಳದಲ್ಲಿ ನಿಶ್ಶಬ್ದವಾಗಿ ವಿರಮಿಸುವವು. ಒಂಟಿತನ ಬೇಸರಕ್ಕಿಟ್ಟುಕೊಂಡಾಗ, ಕಾಕರಸಿಕ, ಕಾವ್, ಕಾವ್ ಎಂದು ಮೆಲುದನಿಯಲ್ಲಿ ನಲ್ಲೆಗೆ ಕರೆ ಕೊಡುವ. ತೂಕಡಿಸುವ ಅವಳೋ! ಈ ಮುಟ್ಠಾಳನಿಗೆ ಉಳಿದ ವೇಳೆ ನಾನು ಕಾಲುಕಸ, ತಾನೇ ರಾಜನಂತೆ ವರ್ತಿಸುತ್ತಾನೆ ಎಂದು ಗೊಣಗಿ ಅವನನ್ನು ಪೂರ್ಣವಾಗಿ ಅಲಕ್ಷಿಸುತ್ತಾಳೆ. ರೊಚ್ಚಿಗೆದ್ದ ಕಾಮುಕನು, ಖಾಖಾಖಾ ಎಂದು ಶಾಪ ಹಾಕುತ್ತ, ಬೇರೆಯವಳು ಸಿಕ್ಕಿಯಾಳೇ? ಎಂದು ಹುಡುಕಾಟಕ್ಕೆ ಹಾರಿ ಹೋಗುತ್ತದೆ. ಹೆಣ್ಣು ಕಾಗೆ, 'ಸದ್ಯ ಪೀಡೆ ತೊಲಗಿತಲ್ಲ!, ಎಂದು ನೆಮ್ಮದಿಯಿಂದ ತೂಕಡಿಕೆಯನ್ನು ಮುಂದರಿಸುತ್ತದೆ.

ಕಾಕಪಂಚಾಯತಿ

ಬೇಕು, ಬೇಡಗಳ ಪೂರೈಕೆಯಾದ ಬಳಿಕ ಬೇಲಿ, ಮರ, ಕಾಂಪೌಂಡ ಗೋಡೆ, ಕಟ್ಟೆಗಳ ಮೇಲೆ ಕುಳಿತು, ಊರ ಉಸಾಬರಿಯ ಮಾತು ಪ್ರಾರಂಭಿಸುತ್ತವೆ. 'ಕರ್‌ಕರ್ ಕರಿಯಣ್ಣ, ಕೇಳಿದೆಯೇನಯ್ಯ? ಕರಿಮಗು, ಇನ್ನೂ ಪುಷ್ಪವತಿಯಾಗದಿದ್ದರೂ ಕೆಂಚಣ್ಣನೊಡನೆ ಕೂಡಿಕೊಂಡ ಳಂತೆ! ಕಾಕಸಮಾಜಕ್ಕೆ ಇದು ಕಳಂಕವಲ್ಲವೇನಯ್ಯ?' ಎಂದಾಗ ನೆರೆದವರಿಂದ ಹೌದು! ಹೌದು! ಎಂಬ ಪ್ರತಿಕ್ರಿಯೆ ಬರುತ್ತದೆ. ಇದಕ್ಕೆ ತಕ್ಕ ಶಾಸ್ತಿ ಆಗಲಿಕ್ಕೇ ಬೇಕು. ಇಲ್ಲದಿದ್ದರೆ ಇಂಥ ನಡವಳಿಕೆಗೆ ಕೊನೆಮೊದಲೆಲ್ಲಿ? ಎಂದು ಕರರ್! ನಾದವನ್ನು ಹಿರಿಕಾಗೆ ಹೇಳಿದಾಗ, ಹೌದೆಂದು ಅಲ್ಲಿ ಇಲ್ಲಿ ಸುತ್ತುವರಿದ ಕಾಗೆಗಳು ಸ್ಥಾನಪಲ್ಲಟದ ಪ್ರತಿಕ್ರಿಯೆ ತೋರುವವು. ತಕ್ಷಣ ಇದರ ನ್ಯಾಯ ವಿಚಾರಣೆ ಆಗಬೇಕು! ಎಂದು ಹಿರಿಯ ಕರಿಯ ಸೂಚಿಸಿದಾಗ, ಎಲ್ಲವೂ ಕಾವ್! ಕಾವ್! ಅನುಮತಿ ಸೂಚಿಸುತ್ತವೆ. 'ಹಲಸಿನ ಮರದಲ್ಲಿ ಸಭೆ ಸೇರಬೇಕು. ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸಲೇಬೇಕು' ಎಂಬ ಸಮಾಚಾರ ಇತರ ಕಾಕವೃಂದಕ್ಕೆ ತಲುಪಿದಾಗ, ಎಲ್ಲವೂ ಕಾರ್ಯಕಲಾಪಗಳನ್ನು ಅಲ್ಲಿಗೇ ನಿಲ್ಲಿಸಿ, ಇತರರನ್ನೂ ಎಬ್ಬಿಸಿಕೊಂಡು ಬರುತ್ತವೆ. ಅಲ್ಲಿ ಚಿಕ್ಕವಯಸ್ಸಿನ ಕಾಗೆಗಳು ಹಿರಿಯ ಕಾಗೆಯ ಅಭಿಪ್ರಾಯವನ್ನು ಪ್ರಶ್ನಿಸುತ್ತವೆ. "ಕೆಂಚಣ್ಣ ಮಾಡಿದ್ದು ತೀರ ಸ್ವಾಭಾವಿಕ. ಅದಕ್ಕಾಗಿ ನ್ಯಾಯ ವಿಚಾರಣೆ ಏಕೆ?" ಎಂದು ಅಡ್ಡ ಮಾತು ಬರುತ್ತದೆ. ನೀವು ಸುಮ್ಮನಿರಿ! ಎಂದು ಹಿರಿಯ ಕಾಗೆಗಳು ಜಬರಿಸುತ್ತವೆ. ಎಳೆಯರು ಹೆಚ್ಚೆಚ್ಚಾಗಿ ಸೇರಿಕೊಂಡು ಎರಡು ಬಣಗಳಲ್ಲಿ ಕಾ ಖಾ ಖಾ ಕಾ, ಕರ್! ಖರರ್! ಕರ್ ಎಂದು ವಾಗ್ಯುದ್ಧ ಪ್ರಾರಂಭವಾಗಿಬಿಡುತ್ತದೆ. ಸಭೆಯಲ್ಲಿ ಹಿರಿಯರದೇ ಮೇಲುಗೈ ಆದಾಗ, ಕಿರಿಯವು, ಕಾ! ಕಾ! ಎಂದು ಜೋರಾಗಿ ಪ್ರತಿಭಟನೆಯ ಕೂಗಾಡುತ್ತ ಹಾರಿಹೋದವು. ನ್ಯಾಯವಾದಿ ಹಿರಿಯ ಕಾಗೆ, ಮುಖ ತಗ್ಗಿಸಿ ಕುಳಿತ ಕೆಂಚಣ್ಣನನ್ನು ತರಾಟೆಗೆ ತೆಗೆದುಕೊಂಡು, 'ಸಕಲರೂ ನಿನ್ನಂತೆ ಮನಸ್ವೀ ವರ್ತಿಸಿದರೆ ಕಾಕಸಮಾಜದ ಮರ್ಯಾದೆ ಮೂರಾಬಟ್ಟೆ ಆಗುತ್ತದೆ! ನಾವು ಮನುಷ್ಯ ಸಮಾಜದಂತೆ ತೀರ ಕಳಪೆಯಾಗಿ ವರ್ತಿಸಕೂಡದು!' ಎಂದು ಬೋಧಿಸಿ ಕಾಕೋ! ಕಾಕೋ! ಎಂದು ಅವನ ನೆತ್ತಿಗೆ ಎರಡು ಬಾರಿ ಕುಕ್ಕಿ ಸಭೆಯನ್ನು ಬರ್ಖಾಸ್ತು ಮಾಡಿತು.

ಕಾಕಶೋಕ

ಸಾಹಸಿ ಕಲ್ಲಣ್ಣ, ಖಾನಸಾಹೇಬರ ಮಟನ್ ಬಿರಿಯಾನಿಗೆ ತಂದ ಮಾಂಸವನ್ನು ಹಾರಿಸಲೆತ್ನಿಸಿ ಕಲ್ಲೇಟಿಗೆ ತುತ್ತಾಗಿ, ಕಾs ಆs ಎಂದು ಆರ್ದ್ರ ಧ್ವನಿಯಿಂದ ಕೂಗುತ್ತ ಸಾಲುಮರದಡಿ ಬಂದು ಬಿದ್ದಾಗ ಸುತ್ತಲಿನ ಕಾಕಸಮಾಜ, ತನ್ನ ಚಟುವಟಿಕೆಗಳನ್ನೆಲ್ಲ ಸ್ಥಗಿತಗೊಳಿಸಿ ಕಲ್ಲಣ್ಣನನ್ನು ಸುತ್ತುವರೆದಿತ್ತು. ಕಾsss ಕಾsss ಎಂದು ತಮಗಾದ ದುಃಖ ಸಂತಾಪಗಳನ್ನು ವ್ಯಕ್ತ ಮಾಡುತ್ತಿದ್ದವು. ದೂರದ ನೆಂಟರಿಷ್ಟರಿಗೂ ಈ ಸಮಾಚಾರ ತಲುಪಿ ಇನ್ನಷ್ಟು ಕಾಗೆಗಳು ಎಂದು ಸೇರಿದವು. ಚೀರುತ್ತ, ಚಡಪಡಿಸುತ್ತ ಅನ್ಯಾಯದ ವಿರುದ್ಧ ಪ್ರತಿಭಟನೆ ಸೂಚಿಸಿದವು. "ಈ ಮಾನವಪ್ರಾಣಿ, ಎಷ್ಟೊಂದು ಸ್ವಾರ್ಥಿ! ರುಚಿ ನೋಡಲೆಂದು

ಈತ ದಿನರಾತ್ರಿ ಕಬಳಿಸುವ ಮಾಂಸದ ಪಕ್ವಾನ್ನದಿಂದ ಒಂದೇ ಒಂದು ತುಣುಕನ್ನು ತಿಂದದ್ದಕ್ಕಾಗಿ ಮರಣಶಿಕ್ಷೆ ವಿಧಿಸುವದೇ? ಇದಾವ ನ್ಯಾಯ? ಅನ್ಯಾಯಗಳ ವಿರುದ್ಧ ಹೋರಾಟ ಇವನೊಬ್ಬನದೇ ಹಕ್ಕೇ? ನಾವೆಲ್ಲ ಒಟ್ಟಾಗಿ ಒಂದೇ ಒಂದು ವಾರ ಸಂಪು ಹೂಡಿದರೆ, ಕೊಳಚೆ ದುರ್ವಾಸನೆ-ರೋಗರುಜಿನಗಳು ತೀವ್ರವಾಗಿ ಹರಡಿ ಈ ಮಾನವಕೋಟಿ, ಹುಳಗಳಂತೆ ಸಾಯುವದರಲ್ಲಿ ಸಂದೇಹವಿಲ್ಲ! ಆದರೆ ನಾವು ಮುಯ್ಯಕ್ಕೆ ಮುಯ್ಯಿ ತೀರಿಸುವ ಜಾತಿಯವರಲ್ಲ. ನಮ್ಮ ಮೈಬಣ್ಣ ಕಪ್ಪಾದರೂ ಹೃದಯ ಅತ್ಯಂತ ಶುಭ್ರವಾಗಿದೆ. ಅಂತೆಯೇ ಮನುಷ್ಯ ಪ್ರಾಣಿಯ ಸಕಲ ದೌರ್ಜನ್ಯ, ಹಿಂಸಾಚಾರಗಳನ್ನು ಹೊಟ್ಟೆಗೆ ಹಾಕಿಕೊಳ್ಳುತ್ತೇವೆ!"..... ಎಂದು ಮೂಕಭಾಷೆಯಲ್ಲಿ ತಮ್ಮ ಭಾವನೆಗಳನ್ನು ಕೆಲ ಹಿರಿಯಕಾಗೆಗಳು ವ್ಯಕ್ತಪಡಿಸಿದಾಗ, ಕರ್‌ಽ ಕರ್‌ಽ ಎಂದು ನೆರೆದ ಕಾಗೆಗಳೆಲ್ಲ ತಮ್ಮ ಸಮ್ಮತಿ ಸೂಚಿಸಿದವು.

ರಕ್ತಸ್ರಾವ ನಿಲ್ಲದೇ ಕಲ್ಲಣ್ಣ ಕೊನೆಯುಸಿರು ಎಳೆದ. ಕಾಗೆಬಳಗ ಈಗ ಇನ್ನೂ ಖಾರವಾಗಿ ಕಾಽ ಕಾಽಽ ಎಂದು ಶೋಕಿಸುತ್ತ ತಮ್ಮ ಕಳವಳ ತೋರ್ಪಡಿಸಿದವು. ಯಡ್ರಾ ತಡ್ರಾ ಹಾರಲಾರಂಭಿಸಿದವು. ಹತ್ತಿರದ ಗಿಡ-ಮರಗಳ ಎಲೆಗಳನ್ನು ಕಿತ್ತು ಕಿತ್ತು ಎಸೆಯಲಾರಂಭಿಸಿದವು. ಇನ್ನೂ ಶೋಕಾರ್ತವಾದವು, ಮರದ ತೊಗಟೆಯನ್ನು ಕೊಕ್ಕಿನಿಂದ ಸುಲಿಯಲಾರಂಭಿಸಿದವು. ಶೀಘ್ರದಲ್ಲಿ ಕಲ್ಲಣ್ಣನ ದೇಹ ಬಿದ್ದಲ್ಲಿ ಸ್ಮಶಾನಮೌನ ನೆಲೆಸಿತು. ಕೆಂಪಿರುವೆಗಳ ತಂಡ ಬಂದು ಮುತ್ತಿಗೆಹಾಕಿ ಆತನ ಇರವನ್ನು ಸಂಪೂರ್ಣವಾಗಿ ಇಲ್ಲವಾಗಿಸಿದವು. ಹುಟ್ಟು-ಸಾವುಗಳು ನಿಸರ್ಗದ ನಿಯಮವೆಂದು ಕಾಕಸಮಾಜವೂ ಅರಿತುಕೊಂಡಂತೆ ಅನಿಸುತ್ತದೆ.

* * *

ಒಮ್ಮೆ ನಮ್ಮೂರಾದ ಹೊನ್ನಾವರಕ್ಕೆ ಹೋದಾಗ, "ಈ ಕಾಗೆಗಳ ಕಾಟದಿಂದ ಬೇಸರ ಬಂದುಬಿಟ್ಟಿದೆ" ಎಂದು ಮಾತೋಶ್ರೀಯವರು ನಡೆದ ಸಮಾಚಾರ ಹೇಳಿದರು. 'ಅಡಿಗೆಮನೆಯಲ್ಲಿ ಬೆಳಕಿನ ವ್ಯವಸ್ಥೆ ಸರಿ ಇಲ್ಲದ್ದರಿಂದ ಹಿತ್ತಲ ಹೊರಬಾಗಿಲನ್ನು ಸದಾ ತೆರೆದಿಡಬೇಕಾಗುತ್ತದೆ. ಆದರೆ ಕಾಕಕುಟುಂಬ ಹೊಂಚು ಹಾಕಿ ಕೂತಿರುತ್ತದೆ. ಅವಕಾಶ ಸಿಕ್ಕಿಕೂಡಲೇ ಒಳನುಗ್ಗಿ ತುರಿದಿಟ್ಟ ತೆಂಗಿನಕಾಯಿ, ಹುರಿದಿಟ್ಟ ಹಪ್ಪಳ-ಸಂಡಿಗೆ, ಸಿದ್ಧವಾಗುತ್ತಿರುವ ಭಜಿ ಪೋಡಿಗಳಲ್ಲಿ ಹೊರಲು ಸಾಧ್ಯವಿದ್ದವನ್ನೆಲ್ಲ ಎತ್ತಿಕೊಂಡು ಕ್ಷಣಾರ್ಧದಲ್ಲಿ ಮಾಯವಾಗಿ ಬಿಡುತ್ತವೆ. ಆ ಮಾವಿನಮರದ ಎತ್ತರ ಟೊಂಗೆಯ ಮೇಲೆ ಕುಳಿತು ಆರಾಮಾಗಿ ತಿಂದು ಮುಗಿಸುತ್ತವೆ. ಇದು ಪ್ರತಿದಿನದ ಘಟನೆಯಾಗಿದೆ' ಎಂದರು. ಅವನ್ನು ಹೆದರಿಸಲು, ಓಡಿಸಲು ಏನೆಲ್ಲ ಉಪಾಯ ಮಾಡಿದರೂ ಅವಕ್ಕೆ ಸೊಪ್ಪು ಹಾಕುತ್ತಿರಲಿಲ್ಲ. ಅಂತೆಯೇ ಒಂದೆರಡು ಕಾಗೆಗಳನ್ನು ಬಂಧಿಸಿ ಜೀವಭಯ ಹುಟ್ಟಿಸಿದರೆ, ಮತ್ತೆ ಖಂಡಿತ ಈ ದಿಕ್ಕಿನಲ್ಲಿ ಸುಳಿಯಲಾರವು ಎಂದು ನಿರ್ಧರಿಸಿದೆ. ನಾನು ಕೋಲು ಹಿಡಿದು ಅಡಿಗೆ ಮನೆಯಲ್ಲಿ ಅಡಗಿನಿಂತೆ. ತಮ್ಮನಿಗೆ ಬಾಗಿಲ ಹಿಂದೆ ನಿಂತು, ಕಾಗೆ, ಒಳಗೆ ಬಂದಾಕ್ಷಣ ಕದ ಮುಚ್ಚಿಬಿಡುವಂತೆ ನಿರ್ದೇಶಿಸಿದೆ. ತಂಗಿಗೆ ಅಂಗಳದಲ್ಲಿ ನಿಂತು, ಕಾಗೆಗಳ ಚಲನವಲನದ ವರದಿ ಒಪ್ಪಿಸಲು ಹೇಳಿದೆ. ಅವಳು ಆಗ ಕನ್ನಡದಲ್ಲಿ ಗುಪ್ತಭಾಷೆ

ಬಳಸಿದಾಗ, "ಏನು? ನಿಮ್ಮಲ್ಲಿಯ ಕಾಗೆಗಳೆಲ್ಲ ಬರೇ ಕೊಂಕಣಿ ಭಾಷೆಯನ್ನು ಅರ್ಥಮಾಡಿಕೊಳ್ಳುತ್ತವೆಯೇ?" ಎಂದು ಗೇಲಿಮಾಡಿದೆ. ಆದರೆ ನಿಜಕ್ಕೂ ಅವಳು ಕೊಂಕಣಿಯಲ್ಲಿ ಮಾತು ಮುಂದರಿಸಿದಾಗ, ಕಾಗೆಗಳು ಎಂದಿನಂತೆ ಒಳನುಗ್ಗಿ ಬರುವ ಬದಲಾಗಿ ಪಲಾಯನ ಮಾಡಿದವು! ಕನ್ನಡ ಬಳಸಿದಾಗ ಆಲಿಸುತ್ತ, ಅನುಮಾನಿಸುತ್ತ, ನಿಧಾನವಾಗಿ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಬಂದು, ಒಂದು ಕಾಗೆ ಅಡಿಗೆ ಮನೆಯ ಒಳಗೆ ಹೊಕ್ಕಿತು. ಆದರೆ ಬಾಗಿಲು ಮುಚ್ಚಲು ಅರೆಕ್ಷಣ ವಿಳಂಬವಾದ್ದರಿಂದ, ನಮ್ಮ ಕಣ್ಣಿಗೆ ಮಣ್ಣೆರಚಿ ಮಾಯವಾಗಿಬಿಟ್ಟಿತು. ಕಾಯುತ್ತಿದ್ದ ಇತರೇ ಕಾಗೆಗಳೂ ಮಂಗಮಾಯ! ಕಾಗೆಗಳಿಗೆ ಮಾನವನ ಭಾಷಾಜ್ಞಾನವಿಲ್ಲದಿದ್ದರೂ, ಬಳಸುವ ಶಬ್ದಗಳ ಮತ್ತು ಚಲನವಲನಗಳ ಆಧಾರಗಳನ್ನು ಅರ್ಥೈಸಿಕೊಳ್ಳುವ ಜಾಣ್ಮೆ ಇದೆ ಎಂದು ತಿಳಿಯುವಂತಾಯಿತು. ವರದಿಗಾಗಿ ಇಂಗ್ಲಿಷ್ ಭಾಷೆ ಬಳಸಿದಾಗ ಕಾಗೆಗೆ ಖಂಡಿತವಾಗಿ ಅರ್ಥಮಾಡಿಕೊಳ್ಳಲಾಗಲಿಲ್ಲ.

ಭಾಷಾ ವೈವಿಧ್ಯ

ತನ್ನ ಮಕ್ಕಳ ಲಾಲನೆ-ಪಾಲನೆಯಲ್ಲಿ, ಕಾಕಭಾಷೆ ಮಹತ್ವದ ಪಾತ್ರ ವಹಿಸುತ್ತದೆ. ಗರ್ಭಿಣಿ ಕಾಗೆ, ಪೆದ್ದಗಂಡನಿಗೆ, ಗೂಡುಕಟ್ಟಲು ಪ್ರಾರಂಭಿಸು ಎಂದು ಕಾರ್s ಕಾssರ್ ಪಿಸುಮಾತಿನಲ್ಲಿ ಹೇಳುತ್ತದೆ. ಅವನೋ ಸುಲಭವಾಗಿ ಸಿಗುವ ಕಡ್ಡಿ, ಕಾಗದದ ಚೂರು ತಂದಾಗ, 'ಇವು ಏನೇನೂ ಪ್ರಯೋಜನವಿಲ್ಲ! ಗಟ್ಟಿಯಾದ ಪೇರಲ, ನೇರಳೆ, ಕರಿಬೇವಿನ ಕಡ್ಡಿಗಳನ್ನು ತಾ!' ಎಂಬಂತೆ ಖಿಕ್! ಖಿಕ್! ಎಂದು ಬಜಾಯಿಸಿ ಹೇಳುತ್ತದೆ. ತಾನಿಟ್ಟ ಮೂರು ಮೊಟ್ಟೆಗಳನ್ನು ಕಾಯುತ್ತ ಅವು ನೆಲಕ್ಕುರುಳುವ ಸಾಧ್ಯತೆ ಇದ್ದಾಗ, ಅವನ್ನು ಗೂಡಿನ ನಟ್ಟನಡುವೆ ಇಟ್ಟು ರಕ್ಷಿಸುವಂತೆ, ಕಾಕ್! ಕಾಕ್! ಎಂದು ಸೂಚಿಸುತ್ತಾಳೆ. ತನಗೆ ಕಾವು ಕೊಡುವದು ಬೇಸರಕ್ಕೆ ಇಟ್ಟುಕೊಂಡಾಗ, ಕಾವ್ ಕಕ್! ಕಾವ್ ಕಕ್ ಎಂದು ಪತಿಗೆ ಸಹಾಯ ಮಾಡಲು ಕೇಳಿಕೊಳ್ಳುತ್ತಾಳೆ. ಮೊಟ್ಟೆಯೊಡೆದು ಮರಿ ಹೊರಬರುವ ಸೂಚನೆಯನ್ನು ಕೊರರ್ ಕೊರರ್! ಎಂದು ಕೊಡುತ್ತಾಳೆ. ಸರದಿಯಂತೆ ಗುಟುಕು ಕೊಡುವಾಗ ಬಳಸುವ ಮಾತುಗಳೇ ಬೇರೆ. ಮಕ್ಕಳ ಆರೈಕೆಯಲ್ಲಿ ಪತಿ ಅಷ್ಟಾಗಿ ಲಕ್ಷ್ಯ ಪೂರೈಸದಿದ್ದಾಗ, ಅವನನ್ನು ಬೈಯುವ ಭಾಷೆ ಕಟುವಾಗಿರುತ್ತದೆ. ತನ್ನ ರಕ್ತ-ಮಾಂಸದಿಂದ ಮೂಡಿ ಬಂದ ಮರಿಗಳನ್ನು ಕಂಡಾಗ ಮಮತೆ ಉಕ್ಕಿ ಕಾಕ್ ಕಾಕ್! ಎಂಬ ಮೆಲು ಮಾತು ಹೊಮ್ಮುತ್ತದೆ. "ಗಗನ ಮಂಡಲದಲ್ಲಿ ಹದ್ದುಗಳು, ನೆಲದ ಮೇಲೆ ಮಾನವ ಎಂಬ ಕ್ರೂರಪ್ರಾಣಿಗಳು ನಮ್ಮನ್ನು ಆಹುತಿ ತೆಗೆದುಕೊಳ್ಳಲು ಸದಾ ಕಾದಿರುತ್ತವೆ. ಆದ್ದರಿಂದ ನಾನು ಹಾಕಿದ ಲಕ್ಷ್ಮಣ ರೇಖೆಯನ್ನು ಎಂಥ ಪ್ರಸಂಗದಲ್ಲಿಯೂ ದಾಟಕೂಡದು! ಕಾಕೆ! ಕಾಕೆ!" ಎಂದು ಎಚ್ಚರಿಕೆಯ ಮಾತುಗಳನ್ನು ಮನದಟ್ಟು ಮಾಡಿಕೊಡುತ್ತದೆ. ಅವು ಗೂಡಿನಾಚೆ ಅಷ್ಟಿಷ್ಟು ಚಲಿಸಿದರೆ ಖೆಕ್! ಖೆಕ್! ಎಂದು ಎಚ್ಚರಿಸಲು ಮರೆಯುವದಿಲ್ಲ.

ಬೆಳೆಯುವ ಮರಿಗಳಿಗೆ ಜೀವನ ಶಿಕ್ಷಣಕೊಡುವದು ತಂದೆ-ತಾಯಿಗಳದೇ ಜವಾಬ್ದಾರಿ. ಬಲಿಯುತ್ತಿರುವ ರೆಕ್ಕೆಗಳನ್ನು ಬಿಚ್ಚಿ ಬಡಿದಾಡುವ, ಮಾಂಸಖಂಡಗಳನ್ನು ಶಕ್ತಿಯುತಮಾಡಿಕೊಳ್ಳುವ ಯುಕ್ತಿಗಳನ್ನು ವಿವರಿಸಿ ಹೇಳುವವು. ಹಾರಲು ಯತ್ನಿಸುವ ಪೂರ್ವದಲ್ಲಿ ಗೂಡಿಗೇ

ಸೀಮಿತವಾಗಿರುವ ಪ್ರಕ್ರಿಯೆಗಳನ್ನು ರೂಢಿಮಾಡಿಸುವವು. ಗೂಡಿನಲ್ಲಿರುವದು ಸುರಕ್ಷಿತವೆಂದು ಮನಗಾಣಿಸಲು ಯತ್ನಿಸುವವು. ಇಷ್ಟಾದರೂ ಮರಿಗಳಿಗೆ ತಾವು ಆದಷ್ಟು ಬೇಗ ಬೆಳೆದು, ಸ್ವತಂತ್ರವಾಗಿ ಜೀವಿಸಲು ಹಾರಿಹೋಗುವ ಖಯಾಲಿ. ಗೂಡಿನಿಂದ ಹೊರಬಂದು, ಜಿಗಿಯುತ್ತ ಈ ರೆಂಬೆಯಿಂದ ಇನ್ನೊಂದಕ್ಕೆ ಹೋಗುತ್ತಲೇ ಇರುವದು ಮರಿಗಳ ಸ್ವಭಾವ. ಮರದಿಂದ ಮರಕ್ಕೆ ಹಾರಲು ಯತ್ನಿಸಿದಾಗ, ಗುರಿತಪ್ಪಿ ನೆಲಕ್ಕುರುಳುವದೂ ಉಂಟು. ಅಂಥ ಸಂದರ್ಭದಲ್ಲಿ ಕಾಕದಂಪತಿಗಳ ಪೇಚು ಹೇಳತೀರದು! ನೆಲದಿಂದ ಮರವೇರಲಾಗದೇ ಮರಿ ಕ್ಯಕ್! ಕ್ಯಕ್! ಎಂದು ಪಾಲಕರಲ್ಲಿ ಮೊರೆ ಇಡಲಾರಂಭಿಸುವದು. ಅದನ್ನು ತಮ್ಮ ಪಂಜದಿಂದ, ಇಲ್ಲವೇ ಕೊಕ್ಕಿನಲ್ಲಿ ಹೊತ್ತು ಒಯ್ಯಲಾಗದ ಹಿರಿ ಕಾಗೆಗಳು ಕಾS, ಕಾSSSS.... ಎಂದು ಗೋಳಿಡುವವು. ಒಮ್ಮೆ ಮರಿಯನ್ನು ಅತ್ಯಂತ ದೈನ್ಯದಿಂದ ನೇವರಿಸುವುದೂ, ಇನ್ನೊಮ್ಮೆ 'ಈ ಸ್ಥಿತಿಯನ್ನು ಏಕೆ ತಂದುಕೊಂಡೆ?' ಎಂದು ನೂಕುವದೂ ಉಂಟು. ಆಪ್ತರೂ ಬಂಧುಗಳೂ ಬಂದೂ ಬಂದು ಸಂತಾಪವನ್ನು ಸೂಚಿಸಿದರೂ, ಅವುಗಳಿಂದಲೂ ಯಾವ ಸಹಾಯ ಸಿಗಲು ಸಾಧ್ಯವಿಲ್ಲ. ಕಾಗಪ್ಪ, ಕಾಗಮ್ಮ ಮರಿಕಾಗೆಗಳೆಲ್ಲ ಅನ್ನ-ನೀರು ತ್ಯಜಿಸಿ 'ಕಾ'ಗುಡುವದನ್ನು ಏಕಪ್ರಕಾರವಾಗಿ ನಡೆಸುತ್ತವೆ. ಈ ಕೂಗು ಆಲಿಸಿದ ಬೆಕ್ಕು, ನಾಯಿಗಳೆಲ್ಲ ಆಮಂತ್ರಿಸಿದಂತೆ ಬಂದು ಮರಿಯನ್ನು ಕಚ್ಚಿಕೊಂಡು ಪಲಾಯನ ಮಾಡುವಾಗ, ತಂದೆ ತಾಯಿ ಚೀರುತ್ತ ಅರಚುವದನ್ನು ಬಿಟ್ಟರೆ ಇನ್ನೇನೂ ಮಾಡಲಾರವು. ಕಾಕಾಗುಡುತ್ತ ಕೆಲಹೊತ್ತು ತಮ್ಮ ಶೋಕದ ಆಳವನ್ನು ಅರುಹುತ್ತ, ಉಳಿದ ಮರಿಗಳನ್ನಾದರೂ ಚೆನ್ನಾಗಿ ನೋಡಿಕೊಳ್ಳೋಣವೆಂದು ಗೂಡಿಗೆ ಹಿಂದಿರುಗುವವು.

ಕಾಕ ಕುಟುಂಬಗಳಿಗೆ ತಮ್ಮದೇ ಕಿರಿರಾಜ್ಯಗಳು ಇರುತ್ತವೆ. ಅವುಗಳ ಮೇಲೆ ಆಕ್ರಮಣ ವಾಗದಂತೆ ಸರ್ಪಕಾವಲು ಇಟ್ಟಿರಬೇಕಾಗುತ್ತದೆ. ಕಾಡು ಕಾಗೆಗಳು ನಾಡಿಗೆ ಬರುವಂತಿಲ್ಲ. ಯಶವಂತಪುರದ ಕಾಗೆಗಳು ಮಲ್ಲೇಶ್ವರಕ್ಕೆ ಬರುವಂತಿಲ್ಲ. ಅರಮನೆ ಆವರಣದಲ್ಲಿ ಭೂರಿ ಭೋಜನವಿದೆ! ಎಂದು ಮಲ್ಲೇಶ್ವರದ ಕಾಗೆ ಅಲ್ಲಿ ಹೋಗಿ ಮೃಷ್ಟಾನ್ನದಲ್ಲಿ ಪಾಲುಗೊಳ್ಳುವಂತೆ ಇಲ್ಲ. ಕಾಕ ಸಾಮ್ರಾಜ್ಯದಲ್ಲಿ ಪ್ರತಿಯೊಂದು ಕುಟುಂಬದ ಭೂಪ್ರದೇಶದ, ವೃಕ್ಷಪರಿಸರದ ಗಡಿಗಳನ್ನು ಮೊದಲೇ ಗುರುತಿಸಿರಲಾಗುತ್ತದೆ. ಅದನ್ನು ಉಲ್ಲಂಘಿಸಿ ಒಳನುಗ್ಗಲು ಯತ್ನಿಸಿದಾಗ, ಆ ಕುಟುಂಬದ ಸದಸ್ಯರು ಕುಳಿತಲ್ಲಿಂದಲೇ, 'ಕಾ! ಕಾ! ಕ್ಯಾರೇ! ನೀನು ಅತಿಕ್ರಮಣ ನಡೆಸಿರುವಿ!' ಎಂದು ಎಚ್ಚರಿಸುವವು. ಅದನ್ನು ಅಲಕ್ಷಿಸಿ ಆಗಂತುಕನು ಒಳಗೆ ಬಂದೇ ಬಿಟ್ಟರೆ, ಅಲ್ಲಿ ವಾಸವಾಗಿರುವ ಕಾಗೆಗಳೆಲ್ಲ ಒಟ್ಟಾಗಿ ಖಾರ್! ಖಾರ್! ಎಂದು ಬೊಬ್ಬೆಯಿಡುತ್ತ ಆಗಂತುಕನನ್ನು ಸುತ್ತುವರಿದು ಆಕ್ರಮಿಸುವವರಂತೆ ನೆರೆಯುವವು. ಈ ಬೆದರಿಕೆಯಿಂದಲೇ ಧೃತಿಗೆಟ್ಟ ಆಗಂತುಕ ಕಾಗೆ, ಕೂಡಲೇ ಕಂಬಿ ಕೀಳುವದು. ಹಾಗೆ ಮಾಡದಿದ್ದಲ್ಲಿ, ಸಕಲ ರೀತಿಯ ಕೊಕ್ಕಿನ ಆಕ್ರಮಣಕ್ಕೆ ಗುರಿಯಾಗಬೇಕಾದೀತೆಂದು ಅದಕ್ಕೆ ಖಂಡಿತ ಗೊತ್ತು. ಮರ ಒಂದರ ಮೇಲೆ ಗೂಡುಕಟ್ಟಿ ಮೊಟ್ಟೆಯಿಟ್ಟು ಮರಿಮಾಡುವಾಗ, ಆ ಮರದ ಆಸುಪಾಸಿನಲ್ಲಿ ಯಾವ ಪ್ರಾಣಿ ಸಂಚರಿಸಿದರೂ ಕಾಗೆಗಳ ಆಕ್ರಮಣಕ್ಕೆ ತುತ್ತಾಗುವದು ಖಂಡಿತ. ಇನ್ನು ಮರವೇರಿ

ಬಂದರಂತೂ ಕುಕ್ಕಿಸಿಕೊಂಡು ಪರಿಚಿಸಿಕೊಂಡು, ಬದುಕಿದರೆ ಸಾಕಪ್ಪ! ಎಂದುಕೊಂಡು ಹಿಂದಿರುಗುತ್ತವೆ.

ಕಾಗೆಗಳಿಗೆ ಹೊರಕಿವಿಗಳಿಲ್ಲದಿದ್ದರೂ ಒಳಕಿವಿಗಳು ಇದ್ದೇ ಇರುತ್ತವೆ. ಅವು ಕಣ್ಣುಗಳಷ್ಟು ತೀಕ್ಷ್ಣವಲ್ಲದಿದ್ದರೂ ಸಕಲಸದ್ದುಗಳನ್ನು ಆಲಿಸಿ ಪ್ರತಿಕ್ರಿಯಿಸುತ್ತವೆ. ಅವುಗಳ ಧ್ವನಿ ಆಳವಾಗಿ ಖಚಿತರೂಪದ್ದಾಗಿದ್ದರಿಂದ ಧ್ವನಿಮುದ್ರಣಕ್ಕೆ ಹೇಳಿ ಮಾಡಿಸಿದಂತೆ ಇರುತ್ತದೆ. ಜನಜಂಗುಳಿಯ ಸದ್ದು, ವಾಹನಗಳ ಸಂಚಾರ ಮುಂತಾದವು ಇಲ್ಲದಿದ್ದಾಗ, ಕಾಕಸ್ವರಮಾಲಿಕೆಯನ್ನು ಮುದ್ರಿಸಿಕೊಳ್ಳಬಹುದಾಗಿದೆ. ಈ ಧ್ವನಿಮುದ್ರಣವನ್ನು ಬಿತ್ತರಿಸಿದಾಗ ಕಾಗೆಗಳು ಬೇಸ್ತು ಬಿದ್ದು ಪ್ರತಿಕ್ರಿಯಿಸುತ್ತವೆ. ಗಂಡಿನ ಕರೆಗೆ ಹೆಣ್ಣು ಮರುಳಾಗಿ ಬರುವದು; ಮರಿಯ ಕೂಗಿಗೆ ತಾಯಿ 'ಓ'ಗೊಡುವದು; ಎಚ್ಚರಿಕೆಯ ಕರೆಗೆ ನಾಗಾಲೋಟ ಹಾಕುವದು. ಆದರೆ ಮೇಲಿಂದ ಮೇಲೆ ಇಂಥವನ್ನು ಬಿತ್ತರಿಸಿದರೆ, ಇದರಲ್ಲೇನೋ ಮೋಸವಿದೆ ಎಂದು ಶಂಕಿಸಿ, ಅದನ್ನು ಅಲಕ್ಷಿಸುವದನ್ನು ರೂಢಿಸಿಕೊಂಡು ಬಿಡುತ್ತವೆ.

ನಾವು ಭರದಿಂದ ಕಾಡನ್ನು ನಾಶಮಾಡುತ್ತಿರುವದರಿಂದ ಹಾಡುವ ಹಕ್ಕಿಗಳ ವಾಸಸ್ಥಾನಗಳೆಲ್ಲ ಇಲ್ಲವಾಗಿ, ಕಾಗೆಗಳು ವಿದ್ಯುತ್ ಕಂಬ, ಟೆಲಿಫೋನ್ ಕಂಬಗಳಲ್ಲಿ ಗೂಡುಕಟ್ಟಲು ಪ್ರಾರಂಭಿಸ ಬಹುದು. ಅಂಥ ದಿನಗಳಲ್ಲಿ ಅಳಿದುಳಿದ ಪಕ್ಷಿಯೆಂದು ಕಾಕಸ್ವರವೇ ನಮಗೆ ಅತಿ ಇಂಪಾಗಿ ಕೇಳಿಸುವಂತಾದರೆ ಆಶ್ಚರ್ಯವಿಲ್ಲ!

❑

ಕಾಗೆಯ ಸಂತಾನೋತ್ಪತ್ತಿ

ಕಾಕ ಪರಿಣಯ

ಕಾಕಕೋಟಿಯ ಶಕ್ತಿಸಾಮರ್ಥ್ಯ ಅಡಕವಾಗಿರುವದೇ ಅವುಗಳ ಸಂತಾನೋತ್ಪತ್ತಿಯಲ್ಲಿ. ಮೈನೆರೆದ ಮಗಳಿಗೆ ವರನನ್ನು ಹುಡುಕುವ ಜವಾಬ್ದಾರಿ ಪಾಲಕರಿಗಿಲ್ಲ. ಅನಾದಿಕಾಲದಿಂದಲೂ ಕಾಕಕನ್ಯೆಯರು ಸ್ವಯಂವರದಲ್ಲಿ ವಿಶ್ವಾಸವಿಟ್ಟವರು. ವರನ ವಂಶಾವಳಿ, ಮನೆ-ಮಠ, ಸುಖ-ಸೌಲಭ್ಯಗಳತ್ತ ಗಮನಕೊಡದೇ ಅವನ ಪೌರುಷ, ಶಕ್ತಿ, ಸಾಮರ್ಥ್ಯಗಳಿಗೇ ಆದ್ಯತೆ ನೀಡುವವು. ಸಹಪಾಠಿಯೊಡನೆ, ನೆರೆಮನೆಯವನೊಡನೆ ಓಡಿಹೋಗುವದು, ಆತ್ಮಹತ್ಯೆ ಮಾಡಿಕೊಳ್ಳುವದು, ಮೊದಲಾದವಕ್ಕೆ ಕಾಕಲೋಕದಲ್ಲಿ ಆಸ್ಪದವಿಲ್ಲ. ಪ್ರಾಯಕ್ಕೆ ಬಂದ ಮದುಮಗ, ಪುಷ್ಪವತಿಯಾದ ಕನ್ಯೆ, ಸರ್ವತಂತ್ರ ಸ್ವತಂತ್ರರು. ಅಂತೆಯೇ ತಂತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸುವವು. ತಾನು ಮೆಚ್ಚಿದ ವಧುವನ್ನು ವರಿಸಲು ಕಾಕಯುವಕನು ಏನೆಲ್ಲ ಕಸರತ್ತು ಮಾಡಬೇಕಾಗುತ್ತದೆ. ತಾನು ಒಬ್ಬ ಸ್ವತಂತ್ರ ವ್ಯಕ್ತಿ! ಎಂದು ಸಾಧಿಸಲು ತನ್ನ ವರ್ಚಸ್ಸಿನ ಕಿರಿದಾದ 'ರಾಜ್ಯ'ವನ್ನು ಸ್ಥಾಪಿಸಿ ಅದಕ್ಕೆ ಕೂಗಿಕೂಗಿ ಪ್ರಚಾರವನ್ನೂ ಕೊಡುತ್ತಾನೆ. ತನ್ನ ಭಾವೀಪೀಳಿಗೆಯ ತಾಯಾಗಲು ಯೋಗ್ಯ ಕನ್ಯೆಯರಿಗೆ ಕರೆ ನೀಡುತ್ತಾನೆ. ಅವುಗಳ ಸಮಾಜದಲ್ಲಿ ಕಾಡಿಗೆಯಷ್ಟು ಕಪ್ಪು ಇದ್ದಾಕೆ, ಅತಿ ಸುಂದರಿಯೆಂದು ಪರಿಗಣಿಸಲ್ಪಡುತ್ತಿರಬೇಕು! ಅಂಥವಳನ್ನು ಆಕರ್ಷಿಸಲು ಸಿಳ್ಳು ಹಾಕಿ, ಮೆಲುದನಿಯ ಸಂಗೀತ ಆರಂಭಿಸುತ್ತಾನೆ. ಕಾಮೋದ್ರಿಕ್ತ ಗಂಡುಕಾಗೆಯ ಹಾವ-ಭಾವ, ನಡಾವಳಿಗಳನ್ನು ವೀಕ್ಷಿಸುವದೇ ಕಣ್ಣಿಗೆ ಹಬ್ಬ. ಆದರೆ ಅದನ್ನೆಲ್ಲ ಕಣ್ಣಾರೆ ಕಂಡು ಖುಷಿ ಪಡಲು, ವಿರಾಮ, ಕುತೂಹಲ, ವೀಕ್ಷಣೆಯ ಚಪಲ, ದೂರದರ್ಶಕ, ಕ್ಯಾಮರಾ, ವೀಡಿಯೋ ಕ್ಯಾಮರಾ ಗಳ ಅನುಕೂಲಗಳೆಲ್ಲ ಬೇಕು!

ನಸುಕಿನಲ್ಲಿ ಬಿಮ್ಮನೆಯ ನಾಶ್ತಾಮುಗಿಸಿ, ತನ್ನ ಅರ್ಧಾಂಗಿನಿಯ ಆಯ್ಕೆಯಲ್ಲಿ ಮೈಮರೆಯುತ್ತಾನೆ, ಕಾಕವರ. ಮೈಚಳಿ ಬಿಟ್ಟು ಅತ್ತಿತ್ತ ಹಾರುತ್ತಿರುವ, ಹಾಡುವ ಕೋಮಲಾಂಗಿನಿಯರನ್ನು ಚಿಕಿತ್ಸಕ ಕಣ್ಣಿನಿಂದ ವೀಕ್ಷಿಸುತ್ತಾನೆ. ತನ್ನ ಮನದನ್ನೆಯಾಗಲು ಯೋಗ್ಯಳೆಂದು ಕಂಡವಳೊಡನೆ ತನ್ನ ಅಭಿಲಾಷೆಯನ್ನು ತೋಡಿಕೊಳ್ಳುತ್ತಾನೆ. ಗೋಣನ್ನು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಕುಣಿಸುತ್ತ ಅವಳಿಗೆ ಕಣ್ಸನ್ನೆ ಮಾಡುತ್ತಾನೆ. ಹಿಂಬದಿಯ ಗರಿಗಳನ್ನು ಹರಡಿ, ಬೀಸಣಿಗೆಯಂತೆ ಬೀಸಲಾರಂಭಿಸುತ್ತಾನೆ. ರೆಕ್ಕೆಗಳನ್ನು ಎತ್ತರಕ್ಕೆ ಎತ್ತಿ ಬಡಿದುಕೊಳ್ಳಲಾರಂಭಿಸುವ. ಜೊತೆಗೇ ಆಚೆ ಈಚೆ ಹೆಜ್ಜೆ ಹಾಕುತ್ತ ನರ್ತಿಸಲಾರಂಭಿಸುವ. ಮೆಲುದನಿಯ ಕೇಕೆಯೂ ಕೇಳಿಸಿದಂತಾಗುತ್ತದೆ.

ಇದನ್ನೆಲ್ಲ ವೀಕ್ಷಿಸುತ್ತಿದ್ದಂತೆ, ರಾಜಸ್ಥಾನದ ಮಳೆಗಾಲದಲ್ಲಿ ಗಂಡು ನವಿಲಿನ ಕುಣಿತ ಕಣ್ಣಿಗೆ ಕಟ್ಟಿದಂತಾಯಿತು. ನಿಕೃಷ್ಟವೆನಿಸುವ ಕಾಗೆಗಳೂ ಇಷ್ಟೊಂದು ಕಲಾತ್ಮಕವಾಗಿ ವರ್ತಿಸುತ್ತಿರುವಾಗ, ಅದನ್ನು ನೋಡುವ ಕಣ್ಣು ನಮ್ಮವರಿಗಿಲ್ಲ ಅನಿಸಿತು. ಈ ಹಾವ-ಭಾವಗಳನ್ನು ಮೆಚ್ಚಿದ ಹೆಣ್ಣು, ಹಾರುತ್ತ, ಜಿಗಿಯುತ್ತ ಕಾಕರಸಿಕನಲ್ಲಿ ಆಸಕ್ತಿ ತೋರುವಳು. ಸಮೀಪ ಬರುವಳು. ಇದರಿಂದ ಪುಲಕಗೊಂಡ ಕಾಕಣ್ಣ, ಅವಳನ್ನು ಸ್ಪರ್ಶಿಸಿ, ಚುಂಬಿಸಿ, ಸುಖಪಡೆಯುವ. ಅವಳೂ ಗರಿಗೆದರಿ, ಆತನನ್ನು ಮುಟ್ಟಿ, ಸಮ್ಮತಿ ಸೂಚಿಸುವಳು. ಆದರೆ ಕತ್ತೆ, ನಾಯಿಗಳಂತೆ ಬಹಿರಂಗ ಕಾಮಕೇಳಿ ಅವಕ್ಕೆ ಸಮ್ಮತವಿಲ್ಲ. ಏಕಾಂತದ ಸ್ಥಳವನ್ನು ಹುಡುಕಿಕೊಂಡು ಹೋಗುವವು. ಅನುನಯದ ಬಳಿಕ ಹೆಣ್ಣು ನಿಶ್ಚಲವಾಗಿ ಕುಳಿತಾಗ, ಗಂಡುಕಾಗೆ ಅದನ್ನೇರಿ ಒಂದಾಗಲು ಹವಣಿಸುವದು. ಒಂದೆರಡು ಸಲ ಯತ್ನಿಸಿ ವಿಫಲನಾಗಿ ಕೊನೆಗೊಮ್ಮೆ ಯಶಸ್ವಿಯಾಗುವ ಕ್ಷಣದ ಕೂಡುವಿಕೆಯಲ್ಲಿ ಸ್ಖಲನವಾದಾಗ ಎರಡಕ್ಕೂ ತೃಪ್ತಿ! ನಂತರ ಕೆಲ ನಿಮಿಷ ವಿಶ್ರಮಿಸಿ, ಕೆದರಿದ ಪುಕ್ಕಗಳನ್ನು ಸರಿಪಡಿಸಿಕೊಂಡು ಜೊತೆಯಾಗಿಯೇ ಹಾರುತ್ತ ಕಣ್ಮರೆಯಾಗುವವು.

ಕಾಕ ಕುಟುಂಬ

ಮಂಗ, ಮಾನವರಂತೆ ಸಂಭೋಗದ ಬಳಿಕ ಗರ್ಭಧಾರಣೆ ಮಾಡುವ ಬದಲಾಗಿ ಕಾಕಸ್ತ್ರೀ ಗರ್ಭಧಾರಣೆಯ ಬಳಿಕ ರತಿಕ್ರೀಡೆ ನಡೆಸುವಂತೆ ನಿಸರ್ಗ! ಅನುವು ಮಾಡಿಕೊಟ್ಟಿರುತ್ತದೆ. ಅಂತೆಯೇ ಕೂಡಿಕೊಂಡ ಪತ್ನಿ, ಗೂಡು ಕಟ್ಟಲು ಪತಿಗೆ ಆಜ್ಞಾಪಿಸುತ್ತಾಳೆ. ಈರ್ವರೂ ಅಲ್ಲಿ-ಇಲ್ಲಿ ಹಾರಿ, ಹುಡುಕಾಡಿ, ಪ್ರಶಸ್ತ ಸ್ಥಳವನ್ನು ಆಯ್ಕೆಮಾಡುತ್ತವೆ. ಗಂಡು ಸಾಕಷ್ಟು ಸುತ್ತಿ ಕಡ್ಡಿಗಳನ್ನು ಕಚ್ಚಿ ತಂದು ಹೆಣ್ಣಿಗೆ ಹಸ್ತಾಂತರಿಸುವದು. ಅದು ಗೂಡಿಗೆಂದು ಒಂದೊಂದಾಗಿ ಜೋಡಿಸಲಾರಂಭಿಸುವದು. ತೀರ ಬೆಂಡಾದ ಕಡ್ಡಿಗಳನ್ನು ಹಿಂದೆ ಮುಂದೆ ವಿಚಾರಿಸದೇ ತ್ಯಜಿಸಿ



ಸಮಾಲೋಚನೆಯಲ್ಲಿ ಕಾಕ ಕುಟುಂಬ

ಬಿಡುವದು. ಕಡ್ಡಿಗಳನ್ನು ಕಲೆಹಾಕುವದು ಕಷ್ಟಕ್ಕಿಟ್ಟುಕೊಂಡಾಗ ಇನ್ನಿತರರ ಗೂಡುಗಳಿಂದ ಕದಿಯಲೂ ಹಿಂಜರಿಯುವದಿಲ್ಲ. ವಿದ್ಯುತ್ ಕಂಬದ ಬಳ್ಳಿಯ ತುಂಡು, ಟೆಲಿಫೋನ್ ತಂತಿಗಳನ್ನೂ ಗೂಡಿಗಾಗಿ ಬಳಸುವದುಂಟು. ಶರಪಂಜರವನ್ನು ಹೋಲುವ ಗೂಡು

ಸಿದ್ಧವಾದೊಡನೆ, ಪತಿ-ಪತ್ನಿಯರು ಜೊತೆಯಾಗಿ ತಮ್ಮ ಕಲಾಕೌಶಲಕ್ಕೆ ಬೆನ್ನು ಚಪ್ಪರಿಸಿಕೊಳ್ಳುವವು. ಪತ್ನಿ, ಒಂದೊಂದಾಗಿ ಮೊಟ್ಟೆಯನ್ನು ಹೊರಗೆಡವುವಾಗ, ಪ್ರಸವ ವೇದನೆಯನ್ನು ಗಮನಿಸಿ, ಪತಿ ಸಂತೈಸುವ. ಕಿರಿದಾದ ಬಿಳಿಯ ಮೊಟ್ಟೆಯಲ್ಲಿ ಭಾವೀ ಪೀಳಿಗೆಯನ್ನು ಕಲ್ಪಿಸಿಕೊಂಡು ದಂಪತಿ, ಸುಖಿಸುವದು. ದಿನಕ್ಕೊಂದರಂತೆ ಮೂರು, ನಾಲ್ಕು ಮೊಟ್ಟೆ ಹೊರಗೆಡವಿದ ಬಳಿಕ ಕುಟುಂಬ ಯೋಜನೆ ಪಾಲಿಸುವವು. ಕಾವು ಕೊಡುವ ಜವಾಬ್ದಾರಿಯನ್ನು ಸರದಿಯಂತೆ ಪಾಲಿಸುವವು. ಕಣ್ಣಲ್ಲಿ ಕಣ್ಣಿಟ್ಟು ಸರ್ಪಗಾವಲು ಮಾಡಿದರೂ ಕೋಗಿಲೆಯು ತನ್ನ ಮೊಟ್ಟೆಯನ್ನು ಕಾಗೆಯ ಗೂಡಿನಲ್ಲಿ ಸೇರಿಸದೇ ಇರುವದಿಲ್ಲ! ಕೆಂಬೂತ ಬಂದು ಕಾಗೆ ಮೊಟ್ಟೆ ಕದಿಯದಿರುವದಿಲ್ಲ. ಹದ್ದು, ಹಾವು, ಕೋತಿಗಳ ಉಪಟಳಕ್ಕೆ ಕೊರತೆಯಿಲ್ಲ. ವಿಪರೀತ ಬಿಸಿಲು, ಮಳೆ-ಗಾಳಿಗಳಿಂದಲೂ ಮೊಟ್ಟೆಗಳು ನಾಶವಾಗುವದುಂಟು. ಆದರೆ ಕಾಕಮಾತೆ ಧೃತಿಗೆಡದೇ, ಪ್ರಸೂತಿ ವೈರಾಗ್ಯ ತಾಳದೇ, ಇನ್ನೊಮ್ಮೆ ಮೊಟ್ಟೆಯಿಡದೇ ಇರುವದಿಲ್ಲ. ಮೊಟ್ಟೆ-ಮರಿಗಳು ತಮ್ಮ ಸರ್ವಸ್ವವೆಂದು ಪರಿಗಣಿಸಿದ ಕಾಕಮಾತೆ, ವರ್ಷಕ್ಕೆ ಮೂರು-ನಾಲ್ಕು ಸಲವಾದರೂ ಪ್ರಸವವೇದನೆ ಸಹಿಸಿ ಕೊಳ್ಳಬಲ್ಲದು. ಮೊಟ್ಟೆ ಮರಿಗಳಿಗೆ ಸಾವು-ನೋವು ವಿಪರೀತ. ಹಾಗಾಗದೇ ಹೋಗಿದ್ದರೆ, ವಿಶ್ವವಿಡೀ ಕಾಗೆಗಳಿಂದ ತುಂಬಿತುಳುಕುತ್ತಿತ್ತು.

ಮರಿಗಳನ್ನು ಬೆಳೆಸುವ ಜವಾಬ್ದಾರಿ, ಪಾಲಕರಿಗೆ ವಿಪರೀತವಾಗಿಬಿಡುತ್ತದೆ. ಮರಿಗಳು ಸದಾ ಹಸಿದುಕೊಂಡೇ ಇರುವದರಿಂದ ಕಾಲಕಾಲಕ್ಕೆ ಸಾಕಷ್ಟು ಪ್ರಮಾಣದಲ್ಲಿ ಆಹಾರವನ್ನು ಒದಗಿಸಿ ಅವನ್ನು ನಿಯಂತ್ರಿಸುವಲ್ಲಿ ಹೆಚ್ಚಿನ ತಾಳ್ಮೆ ಬೇಕು. ಪಾಲಕರು ಹೊರಗೆ ಹೋದಾಗ ಮರಿಗಳು ಗೂಡಿನ ಹೊರಗೆ ಬಂದು, ಒಂಟಿಕಾಲ ಮೇಲೆ ನಿಲ್ಲುವದು, ಸುತ್ತ ಓಡಾಡುವದು, ಹಾರಲು ಯತ್ನಿಸುವದು, ತಮ್ಮಲ್ಲಿ ಚಕಮಕಿ ಮುಂತಾದವನ್ನು ನಡೆಸಿಯೇ ಇರುತ್ತವೆ. ಇಂಥಲ್ಲಿ ಗೂಡಿನಿಂದ ಜಾರಿ ಕೆಳಗುರುಳಿದಾಗ, ಬೆಕ್ಕು, ನಾಯಿ, ಹದ್ದು, ಹಾವುಗಳು ಅವನ್ನು ಭಕ್ಷಿಸದಿರುವವೇ? ಹಾದಿಹೋಕ ಪೋಲಿ ಹುಡುಗರು ಕಲ್ಲಿನೇಟಿನಿಂದ ಸಾಯಿಸುವರು.

ಕಾಕಮ್ಮನ ಕೋಪ

ಬೆಂಗಳೂರಿನ ಮಲ್ಲೇಶ್ವರಂನ ಸಂಪಿಗೆ ರಸ್ತೆ ಸಾಲುಮರದ ಮೇಲೆ ಕೆಲವು ಕಾಗೆಗಳು ಗೂಡುಕಟ್ಟುತ್ತವೆ. ಅಂತಹ ಗೂಡೊಂದರಿಂದ ಒಂದು ಮರಿ, ಹಾರುವ ಯತ್ನದಲ್ಲಿ ಫುಟ್‌ಪಾತ್ ಮೇಲೆ ಉರುಳಿತು. ಹೆಚ್ಚು ಏಟು ಬೀಳದ್ದರಿಂದ ಅದು ಕೆಲ ನಿಮಿಷಗಳ ನಂತರ ಸುಧಾರಿಸಿಕೊಂಡು, ಹತ್ತಿರದ ವಿನಾಯಕ ಕಟ್ಟಡದ ಕಟ್ಟೆ ಹತ್ತಿತು. ಅಲ್ಲಿ ನಿಲ್ಲಿಸಿದ ಸೈಕಲ್ ಏರಿ ಬೆಲ್ ಕುಕ್ಕಿತು. ಅದರಿಂದ ಹೊರಟ ನಾದದಿಂದ ಪುಲಕಿತವಾಗಿ ಇನ್ನಷ್ಟು ಕುಕ್ಕಿತು. ಅಲ್ಲಿಂದ ಸ್ಕೂಟರ್ ಮೇಲೆ ಜಿಗಿಯಿತು. ಚಾಲಕನ ಸ್ಥಳದಲ್ಲಿ ಕುಳಿತು ಆನಂದಿಸಿತು. ಅಲ್ಲಿಂದ ಮುಂದೆ ಸರಿದು ಕಿರುಗನ್ನಡಿಯಲ್ಲಿ ತನ್ನ ಸುಂದರ ರೂಪವನ್ನು ನೋಡಿ ಮೈಮರೆಯಿತು. ತನ್ನ ಗೂಡಿನಲ್ಲಿ ಇಂಥ ಸಲಕರಣೆಗಳು ಏಕಿಲ್ಲ? ಎಂದು ವಿಸ್ಮಯಪಟ್ಟಿರಲೂ ಸಾಕು! ಅಷ್ಟರಲ್ಲಿ 'ಎಲ್ಲಿದ್ದಿ ಮಗು?' ಎಂಬ ತಾಯಿಯ ಕರೆ ಕೇಳಿಸಿತು. 'ನಾನು ಸ್ಕೂಟರ್ ಓಡಿಸಲು ಕಲಿಯುತ್ತಿದ್ದೇನೆ! ಅಮ್ಮ!'

ಎಂದು ಕೂಗಿ ಹೇಳಿದಾಗ, ಅವಳ ಕೋಪ ನೆತ್ತಿಗೇರಿರಬೇಕು. "ಸದಾಕಾಲ ನಮ್ಮನ್ನು ಸದೆಬಡೆಯಲು ಹವಣಿಸುವ ಆ ದುಷ್ಟಮಾನವ ನಿನಗೆ ಮೋಡಿ ಮಾಡಿದನೇ?" ಎಂದು ಕೂಗುತ್ತ ಮರಿಯಿದ್ದಲ್ಲಿ ಬಂದು ಹಾರಾಡಲಾರಂಭಿಸಿತು. ಮರಿಯನ್ನು ಗೂಡಿಗೆ ಸಾಗಿಸುವ ಹಲವಾರು ಯೋಜನೆಗಳು ಕೈಗೂಡದಿದ್ದಾಗ, ದಾರಿಹೋಕರ ತಲೆಗೆ ಪರಚುವದು, ಕುಕ್ಕುವದನ್ನು ಪ್ರಾರಂಭಿಸಿತು. ಪಾದಚಾರಿಗಳು ಯಾವುದೋ ಯೋಚನೆಯಲ್ಲಿ, ಎಂತಹದೋ ಲೆಕ್ಕಾಚಾರದಲ್ಲಿ ತಮ್ಮ ಪಾಡಿಗೆ ತಾವು ಹೊರಟವರು, ಅಕಾರಣವಾಗಿ ಕಾಗೆಯಿಂದ ಕುಕ್ಕಿಸಿಕೊಂಡು ತಬ್ಬಿಬ್ಬಾಗುತ್ತಿದ್ದರು. ಒಬ್ಬಿಬ್ಬರು ಅದನ್ನು ಶಿಕ್ಷಿಸಲು ಯತ್ನಿಸಿದಾಗ, ರೊಚ್ಚಿಗೆದ್ದು ಅಲ್ಲಿ ಹಾಯುತ್ತಿದ್ದ ಪ್ರತಿಯೊಬ್ಬರನ್ನೂ ಕುಕ್ಕಲಾರಂಭಿಸಿತು. ಅವರು ತನ್ನ ಮರಿಗೆ ಅಪಾಯ ಮಾಡಬಹುದೆಂಬ ಊಹೆಯೇ ಕಾಗೆಯ ಈ ವರ್ತನೆಗೆ ಕಾರಣವಾಗಿತ್ತು. ಯಾರೋ ಪುಣ್ಯಾತ್ಮನು, ದಾರಿಹೋಕರಿಗೆ ಎದುರಿಗಿನ ಕಾಲುದಾರಿಯನ್ನು ಬಳಸಲು ಸೂಚಿಸಿ ಸಮಸ್ಯೆಯನ್ನು ಬಗೆಹರಿಸಿದನು. ಇನ್ನಿತರರು ಗಿಳಿ, ಮೈನಾ ಸಾಕುವಂತೆ ನನಗೆ ಈ ಕಾಗೆಮರಿಯನ್ನು ಮನೆಗೆ ಒಯ್ದು ಸಾಕುವ ಮನಸ್ಸಿತ್ತು. ಆದರೆ ತಾಯಿ ಕಾಗೆಯ ಆಕ್ರಮಣಶೀಲತೆಯಿಂದ, ಮರಿಯ ಬಳಿ ಹೋಗುವ ಧೈರ್ಯ ಸಾಲದಾಯಿತು.

ನಮ್ಮ ಮನೆಯ ಮುಂದಿನ ಸಾಲುಮರವೊಂದರಲ್ಲಿ ಕಾಗೆಯೊಂದು ತನ್ನ ಪ್ರಸ್ತಕ್ಕೆ ಸ್ಥಳವನ್ನು ಆಯ್ಕೆ ಮಾಡಿದಾಗ ತುಂಬ ಸಂತೋಷವಾಯಿತು. ಅದರ ಯಾವತ್ತೂ ಚಟುವಟಿಕೆಗಳು ಗೋಚರಿಸುವಂತೆ ಬಾಲ್ಕನಿಯಲ್ಲಿ ಆಸನವನ್ನು ಅಳವಡಿಸಿಕೊಂಡೆ. ಹೆಚ್ಚಿನ ಸಮಯವನ್ನು ಅಲ್ಲಿಯೇ ಕಳೆಯಲಾರಂಭಿಸಿದೆ. ಕಾಕಸಂಸಾರದ ವಿವರಗಳನ್ನು ಕೇಳಿ ಕೇಳಿ ಪತ್ನಿಗೆ ಬೇಸರಕ್ಕಿಟ್ಟು ಕೊಂಡಿರಬೇಕು. ಹೇಳಿದ್ದಕ್ಕೆಲ್ಲ, ಕೇಳಿಯೋ ಕೇಳದೆಯೋ, ಹೂಂಕಾರ ಹಾಕಲಾರಂಭಿಸಿದಳು. ಕಾಗೆಯ ಬದುಕಿನ ಬಗ್ಗೆ ಆಸಕ್ತಿಯಿಲ್ಲದವಳಿಗೆ ವಿವರಗಳನ್ನು ಕೊಡುತ್ತ ಕಂಠಶೋಷಣೆ ಮಾಡಿಕೊಳ್ಳುವದಕ್ಕಿಂತ ಬರೆದಿಡುವದು ಕ್ಷೇಮಕರವೆನಿಸಿತು. 1986ರ ಜುಲೈ ತಿಂಗಳ ದಿನಚರಿ, ಈ ಕಾಕಕುಟುಂಬದ ಕುರಿತಾದ ಅಪೂರ್ವ ಮಾಹಿತಿಯನ್ನು ನೀಡುತ್ತದೆ. ಕಾಕ ದಂಪತಿಗಳು, ಮರಿಗಳನ್ನು ಅತಿ ಮಮತೆಯಿಂದ ಬೆಳೆಸಲಾರಂಭಿಸಿದವು. ಅವುಗಳಲ್ಲಿ ಒಂದು ಮರಿ ಹುಂಬ ಸಾಹಸದಿಂದ ಹಾರಲು ಯತ್ನಿಸಿ, 27.7.1986ರ ಸಾಯಂಕಾಲ ನೆಲಕ್ಕುರುಳಿತು. ಇದನ್ನು ಕಣ್ಣಾರೆ ಕಾಣುವಂತಾಗಿ ಕಳವಳಕ್ಕಿಟ್ಟುಕೊಂಡಿತು. ಮುಂದೇನು ಮಾಡುವದೆಂದು ವಿಚಾರದಲ್ಲಿ ಕಾಲಕಳೆದರೆ, ಅದನ್ನು ಬೀದಿನಾಯಿಗಳು ಸಾಯಿಸುವದು ಖಂಡಿತವೆಂದು, ಓಡುತ್ತ ಹೋಗಿ ಮರಿಯನ್ನು ಎತ್ತಿ ತಂದೆ. ಕಾಗೆಯನ್ನು ಸಾಕಬೇಕೆಂದಿದ್ದ ಬಹುದಿನದ ಕನಸು ಕೈಗೂಡಬಹುದೆಂಬ ಆಸೆ ಚಿಗುರಿತು. ಆದರೆ ನಂತರ ಸಂಭವಿಸಿದ ಘಟನೆಗಳೆಲ್ಲ ಇದಕ್ಕೆ ತದ್ವಿರುದ್ಧವಾಗಿದ್ದವು.

ಬಂಧನವೊಲ್ಲದ ಕಾಗೆಮರಿ

ಆಹಾರದೊಂದಿಗೆ ಮರಳಿದ ತಾಯಿ ಕಾಗೆ ಬಂದು ಮರಿ ಕಾಣದಾಗಲು,

ಕರೆಯಲಾರಂಭಿಸಿತು. ಅದಕ್ಕೆ ಈ ಮರಿ, ಖರ್‌ರ್! ಎಂದು ಉತ್ತರಿಸಿದಾಗ ಕಾಕದಂಪತಿ ಬೊಬ್ಬಿಟ್ಟವು. ಮರದಿಂದ ಎಲೆಗಳನ್ನು ಕಿತ್ತು ನೆಲಕ್ಕುರುಳಿಸುತ್ತ ಚೀರುತ್ತ, ನಮ್ಮ ಮನೆಯೆದುರು



ವಿಚಾರದಲ್ಲಿ ಮೈಮರೆತಾಗ

ಗಸ್ತಿ ಹಾಕಲಾರಂಭಿಸಿದವು. ಅವುಗಳಿಗೆ ಎಟಕುವಂತೆ ಮರಿಯನ್ನು ಇಟ್ಟರೆ, ಗುಟುಕು ಕೊಟ್ಟಾವು ಎಂಬ ಭ್ರಮೆಯಿಂದ ಮರಿಯನ್ನು ತಂದು ಬಾಲ್ಕನಿಯಲ್ಲಿ ಅವಕ್ಕೆ ಕಾಣುವಂತೆ ಇಟ್ಟೆ. ನಾನೇ ಆಪಾದಿತನೆನ್ನುವಂತೆ ಕಾಗೆಗಳು ಬಂದು ಸುತ್ತಲೂ ಹೇತು ಹಾಕಿ ಶಂಖನಾದ ಪ್ರಾರಂಭಿಸಿದವು. ಮರಿಯನ್ನು ಹೇಗೆ ಉಳಿಸಿಕೊಳ್ಳುವದು ಎಂದು ತೋಚದೇ, ಸದ್ಯ, ಕಾಗೆಗಳ ಕ್ರಂದನದಿಂದ ಬಚಾವ್ ಆಗಲು ಮರಿಯನ್ನು ಬಚ್ಚಲಿಗೆ ಸೇರಿಸಿದೆ. ಇಷ್ಟಾದರೂ ತಂತಮ್ಮ ಸ್ಥಾನಗಳಿಂದ ಪಾಲಕರ, ಮರಿಯ ಕೂಗಾಟ ನಡೆದೇ ಇತ್ತು. ಸಂಜೆಗತ್ತಲಾದಾಗ ನಿರಾಸೆಯಿಂದ ಕಾಕದಂಪತಿ ಕಂಬಿಕಿತ್ತಿತು. ಮರಿ, ಯಾವುದೇ ಆಹಾರ ಸ್ವೀಕರಿಸಲು ನಿರಾಕರಿಸಿ ಮೂಲೆಯೊಂದರಲ್ಲಿ ತೂಕಡಿಸಿ ನಿದ್ರೆ ಹೋಯಿತು. ತಿಂಡಿ-ತೀರ್ಥ ಸ್ವೀಕರಿಸದಿದ್ದರೂ ಬಚ್ಚಲನ್ನು ಇಡಿಯಾಗಿ ಕಕ್ಕಸವನ್ನಾಗಿ ಪರಿವರ್ತಿಸಿತ್ತು. ಮರುದಿನವೂ ಅನ್ನ ಸತ್ಯಾಗ್ರಹವನ್ನು ಮುಂದುವರಿಸಿತು. ಮೆತ್ತಗಿನ ಅನ್ನ-ಬೇಳೆ ಮಿದು ಮಾಡಿದ ಬಾಳೆಹಣ್ಣು ಕೂಡ ನಿರಾಕರಿಸಿತು. ಅಂತೆಯೇ ಕೈಚೀಲ ತೊಟ್ಟು ಅದರ ಕಾಲುಗಳನ್ನು ಗಟ್ಟಿಯಾಗಿ ಹಿಡಿದು ಕೊಕ್ಕು ಬೇರ್ಪಡಿಸಿ ಬಾಳೆಹಣ್ಣು-ಹಾಲಿನ ಮಿಶ್ರಣವನ್ನು ತುರುಕಿದಾಗ ನುಂಗಿತು. ಇದರಿಂದಾಗಿ, ತಾಯಿಯಿಂದ ಗುಟುಕು ಸ್ವೀಕರಿಸಿ ಅಭ್ಯಾಸವಿದ್ದ ಮರಿಗೆ ಇನ್ನೂ ಸ್ವತಂತ್ರವಾಗಿ ಆಹಾರ ಸೇವಿಸಲು ಬಾರದು, ಎಂದು ಗೊತ್ತಾಯಿತು. ಕಾಕದಂಪತಿ, ಮರುದಿನವೂ ತಮ್ಮ ಪ್ರತಿಭಟನೆ ಮುಂದುವರಿಸಿದರೂ ಅದರಲ್ಲಿ

ಸತ್ವ ಉಳಿದಿರಲಿಲ್ಲ. ತಮ್ಮ ಮರಿಯನ್ನು ಸಾಕಲು ಅವು ಅನುಮತಿ ನೀಡಿವೆ ಎಂದು ಪರಿಗಣಿಸಿ, ಶುಭಮುಹೂರ್ತದಲ್ಲಿ ಅದಕ್ಕೆ ಕಾಳುರಾಮ್ ಎಂದು ನಾಮಕರಣ ಮಾಡಿದೆ. 'ಕಾಳು!' ಎಂದು ಕರೆದಾಗೊಮ್ಮೆ ಅರ್ಥವಾದವನಂತೆ ಖರ್‌ರ್ ಎಂದು ಉತ್ತರಿಸಲಾರಂಭಿಸಿತು.

ಕಾಳುವಿನ ಉದರಪೋಷಣೆ ಒಂದು ಜಟಿಲ ಸಮಸ್ಯೆಯಾಗಿ ಪರಿಣಮಿಸಿತು. ಮೊಸರು ಗಂಟಲಲ್ಲಿ ತುರುಕಿದಾಗ ಸ್ವಲ್ಪ ಸ್ವೀಕರಿಸುತ್ತಿತ್ತು. ಜಿರಲೆ ತೋರಿಸಿದಾಗ ಆಸಕ್ತಿ ತೋರಿತಾದರೂ ಅದರಿಂದ ತಿನ್ನಲಾಗಲಿಲ್ಲ. ಅಲ್ಪ ಸ್ವಲ್ಪ ನೀರು ಕುಡಿಯಿತು. ಬ್ರೆಡ್, ಬಿಸ್ಕೆಟ್, ಕಲಸನ್ನ, ಮೊಟ್ಟೆ ತಿನ್ನಿಸಲು ಶತಪ್ರಯತ್ನ ಮಾಡಿದರೂ, ಅದು ಅನ್ನಸತ್ಯಾಗ್ರಹವನ್ನು ಮುಂದುವರಿಸಿತು. ಪಕ್ಷಿತಜ್ಞರನ್ನು ವಿಚಾರಿಸಿದಾಗ, ತನ್ನ ಆಹಾರಕ್ಕಾಗಿ ತಂದೆ-ತಾಯಿಗಳನ್ನು ಅವಲಂಬಿಸಿದ ಮರಿಗಳನ್ನು ಸಾಕುವದು ತೀರಕಷ್ಟದ ಕೆಲಸವೆಂದು ತೀರ್ಪನ್ನಿತ್ತರು. ಕಾಳು ನಮ್ಮೊಡನೆ ಇರುವದು ತೀರ ಅಲ್ಪಕಾಲವೆಂದು ಮನಗಂಡು ಅದರ ವಿವಿಧ ಭಂಗಿಗಳಲ್ಲಿ ಅನೇಕಾನೇಕ ಫೋಟೊಗಳನ್ನು ಕ್ಲಿಕ್ಕಿಸಿದೆ. ದಿನ ಕಳೆದಂತೆ ಅದು ಎಲ್ಲದರಲ್ಲಿಯೂ ಆಸಕ್ತಿಯನ್ನು ಕಳೆದುಕೊಂಡು, ಹೆಚ್ಚಿನ ಸಮಯವನ್ನು ಅರೆ ನಿದ್ರೆಯಲ್ಲಿಯೇ ಕಳೆಯಲಾರಂಭಿಸಿತು. 31.7.1986ರ ಮಧ್ಯರಾತ್ರಿ ಅದು ಕೊನೆಯುಸಿರು ಎಳೆದಾಗ ಅತಿ ನೋವಾಯಿತು. ಯಾವ ಮರದಿಂದ ಅದು ಕೆಳಗೆ ಉರುಳಿತ್ತೊ ಅದರ ಅಡಿಯಲ್ಲೆ ಕಾಳುವನ್ನು ಮಣ್ಣುಮಾಡಿದೆ. ಇಂದು ಅದು ಬದುಕಿದ್ದರೆ, ಅದರ ಸಂತತಿ ಎಷ್ಟೊಂದು ಅಭಿವೃದ್ಧಿ ಆಗುತ್ತಿತ್ತು! ಎಂದು ಆಗಾಗ ಅನಿಸುತ್ತಿರುತ್ತದೆ. ಈ ಘಟನೆಯ ನಂತರ, ಕಾಗೆಯನ್ನು ಸಾಕುವ ವಿಚಾರವನ್ನೆ ಬಿಟ್ಟುಬಿಟ್ಟೆ.

ಅಪರೂಪಕ್ಕೆ ಸಮಾಜದಲ್ಲಿ ಕಾಕಪ್ರಿಯರು ಕಾಣಿಸಿಕೊಳ್ಳದೇ ಇರುವದಿಲ್ಲ. ವಿಶ್ವಖ್ಯಾತಿಯ ವ್ಯಂಗ್ಯಚಿತ್ರಕಾರ, ಆರ್. ಕೆ. ಲಕ್ಷ್ಮಣರು ಇಂಥ ಅಪರೂಪದ ವ್ಯಕ್ತಿ. ಕಾಗೆಯ ಜಾಣ್ಮೆಗೆ ಮನಸೋತು, ಅದನ್ನು ತಮ್ಮ ಮೆಚ್ಚಿನ ಹಕ್ಕಿಯನ್ನಾಗಿ ಮಾಡಿಕೊಂಡಿದ್ದಾರೆ. ಸಮಯ ಸಿಕ್ಕಾಗಲೆಲ್ಲ ಅದರ ಚಟುವಟಿಕೆಗಳನ್ನು ಗುರುತಿಸುವದಲ್ಲದೇ ವಿವಿಧ ಭಂಗಿಗಳಲ್ಲಿ ಅದನ್ನು ಚಿತ್ರಿಸಿಯೂ ಇದ್ದಾರೆ. ಕಲಾವಿಮರ್ಶಕರು, ಭವಿಷ್ಯದಲ್ಲಿ ಅವರ ಕಾಗೆಯ ಚಿತ್ರಣಕ್ಕೆ ಹೆಬ್ಬಾರ, ಹುಸೇನ್ ಚಿತ್ರಗಳ ಬೆಲೆ ಬರುವ ಸಾಧ್ಯತೆ ಇದೆ ಎಂದು ಸಾರಿದ್ದರಿಂದ ಧನಿಕರು ಅವನ್ನು ಕಲೆ ಹಾಕಲಾರಂಭಿಸಿದ್ದಾರೆ. ಆದರೆ ನಾನಂತೂ ನಮ್ಮ ಕಾಳುವಿನ ಭಾವಚಿತ್ರಗಳಿಂದ ಧನಸಂಪಾದನೆ ಮಾಡುವ ವಿಚಾರವನ್ನು ಕನಸಿನಲ್ಲಿಯೂ ಮಾಡಲಾರೆ!

ಜಾಣ ಕಾಗೆ

ಕನ್ನ ಹಾಕಿದ ಕಾಕದಂಪತಿ

ಪ್ರಾಥಮಿಕ ಶಾಲೆಯ ಪಠ್ಯಪುಸ್ತಕದಲ್ಲಿ ನರಿ-ಕಾಗೆಗಳ ಜಾಣ್ಮೆಯ ಮಾಪನದ ಕವಿತೆಯೊಂದಿತ್ತು. ಅದರಲ್ಲಿ ಕಾಗೆಯೊಂದು ತಾನು ಕಷ್ಟಪಟ್ಟು ಸಂಗ್ರಹಿಸಿದ ಮಾಂಸದ ತುಂಡನ್ನು ತಿನ್ನಲಾರಂಭಿಸಿದಾಗ, ಹಸಿದ ಠಕ್ಕನರಿಯೊಂದು ಅದಕ್ಕಾಗಿ ಆಸೆಪಟ್ಟು ಕಾಗೆಯನ್ನು ಪ್ರಶಂಸಿಸಲಾರಂಭಿಸುತ್ತದೆ. 'ನೀನು ನಮ್ಮಲ್ಲಿ ಬರದೇ ಯಾವ ಕಾಲವಾಯಿತು! ನಿನ್ನ ಮಧುರ ಕಂಠ ಸಂಗೀತ ಕೇಳದೇ ಬಹಳ ದಿನಗಳಾದವು. ನಮಗೇಕೆ ಈ ಸುಸಂಧಿ ಒದಗಿಸಲೊಲ್ಲೆ?' ಎಂದೆಲ್ಲ ಉಬ್ಬಿಸಿದಾಗ ಕಾಗೆ, ಹಾಡಲು ಬಾಯಿ ತೆರೆದಾಗ ಮಾಂಸದ ತುಂಡು ನೆಲಕ್ಕುರುಳುತ್ತದೆ,



ಗೂಡು ಕಟ್ಟ ದೊರೆ; ತಂದೆಯಾಗಲಿದ್ದೀರಿ!

ನರಿಯ ಪಾಲಾಗುತ್ತದೆ. ನರಿಯ ಜಾಣತನ ಇಲ್ಲವೇ ಠಕ್ಕುತನ ಎತ್ತಿ ತೋರಿಸುವಲ್ಲಿ ಕಾಗೆ ಮಂಕು ಅಥವಾ ಬೆಪ್ಪು ಎಂದು ಕಾಣಿಸಲಾಗಿದೆ. ಆದರೆ ಇದು ಸರಿಯಲ್ಲ. ಕಾಗೆಯ ಚುರುಕುತನ ಹಾಗೂ ಬುದ್ಧಿಗಳ ಪರಿಚಯ ಇರುವವರು ಇದನ್ನು ಒಪ್ಪಲಾರರು! ಇನ್ನೊಂದು ಕತೆಯಲ್ಲಿ

ವಿಪರೀತ ಬಾಯಾರಿಕೆಯಾದ ಕಾಗೆಯೊಂದು ಎತ್ತರದ ಪಾತ್ರೆಯೊಳಗಿನ ನೀರು ಎಟುಕದಾದಾಗ, ಒಂದೊಂದೇ ಕಲ್ಲನ್ನು ಪಾತ್ರೆಗೆ ಸೇರಿಸಿ, ನೀರಿನ ಮಟ್ಟ ಏರುವಂತೆ ಮಾಡಿ, ಬಾಯಾರಿಕೆಯನ್ನು ತಣಿಸುತ್ತದೆ. ಇದು ಕಾಗೆಯ ಬುದ್ಧಿಮತ್ತೆಯನ್ನು ಸರಿಯಾಗಿ ಗುರುತಿಸುವ ನಿದರ್ಶನವಾಗಿದೆ.

ಒಮ್ಮೆ ಬೆಂಗಳೂರಿನಿಂದ ವಾಸ್ಕೊಕ್ಕೆ (ಗೋವಾ) ಹೊರಟಿದ್ದೆ. ಕೊಲ್ಲಾಪುರದಿಂದ ಬರಲಿದ್ದ ಮಹಾಲಕ್ಷ್ಮಿ ಟ್ರೇನಿಗೆ ಲೋಂಡಾ ಜಂಕ್ಷನ್‌ದಲ್ಲಿ ಕಾಯಬೇಕಾಯಿತು. ಸಾಲದ್ದಕ್ಕೆ ಅದು ಒಂದು ಗಂಟೆ ತಡವಾಗಿ ಬರಲಿದೆ, ಎಂದು ಬೇರೆ ಸಾರಿದ್ದರು. ಅಧೋಗತಿಯತ್ತ ಸಾಗಿದ ದುರುಗಮುರಗಿಯ ಆಟ ನೋಡಿದ್ದಾಯ್ತು. ಹಾಲು ಮಾರುವ ಗ್ರಾಮೀಣ ಗೌಳಗಿತ್ತಿಯ ವಿಶಿಷ್ಟ ವೇಷ-ಭೂಷಣಗಳನ್ನು ಗಮನಿಸಿದ್ದಾಯ್ತು. ಆ ಬಳಿಕ ನಿಲ್ದಾಣದಲ್ಲಿ ಬೇರಾವ ಚಟುವಟಿಕೆಯೂ ಇಲ್ಲದ್ದರಿಂದ, ಜೊತೆಯಾಗಿ ಬಂದ ಜೋಡಿ ಕಾಗೆಯತ್ತ ದೃಷ್ಟಿಹರಿಸಿದೆ. ಪ್ಲಾಟ್‌ಫಾರ್ಮ್ ಮೇಲೆ ಎಲ್ಲಿಂದಲೋ ಬಂದ ಚುರಮುರಿಯ (ಮಂಡಕ್ಕಿ) ಚೀಲಗಳನ್ನು ಪೇರಿಸಿ ಇಟ್ಟಿದ್ದರು. ಬಂದ ಕಾಗೆಗಳು, ಚೀಲಗಳ ಹಿಂದೆ ಏನಾದರೂ ಕಪಟನಾಟಕ ಇದೆಯೇ? ಎಂದು ಅನುಮಾನಿಸುತ್ತಲೇ ಪ್ರತಿಯೊಂದು ಚೀಲವನ್ನೂ ಪರೀಕ್ಷಿಸಿದವು. ಚೀಲದಲ್ಲೆಲ್ಲಾದರೂ ಛೇದ ತೋರುತ್ತದೆಯೇ? ಎಂದು ಪರಿಶೀಲಿಸಿದವು. ಎಲ್ಲ ಚೀಲಗಳು 'ಠೀಕ್-ಠಾಕ್' ಆಗಿದ್ದು ಗಮನಕ್ಕೆ ಬಂದಾಗ, ಈಗ ಕುಕ್ಕುವದೊಂದೇ ಮಾರ್ಗ! ಎಂಬ ನಿರ್ಧಾರಕ್ಕೆ ಬಂದವು.

ಮೊದಲಲ್ಲಿ ಹೆಣ್ಣುಕಾಗೆ, ಕೊಕ್ಕಿನಿಂದ ಪ್ರಯೋಗಿಸಲು ಯತ್ನಿಸಿತು. ಅದರಿಂದ ಆಗದಾಗ, ಮೀಸೆ ಇಲ್ಲದ ಗಂಡುಕಾಗೆ, ತನ್ನ ಶೌರ್ಯಪ್ರದರ್ಶನಕ್ಕೆ ಮುಂದಾಯಿತು. ಆದರೆ ಗೋಣಿಚೀಲದೊಳಗಿನ ಮಂಡಕ್ಕಿಯನ್ನು ಆರ್ದ್ರತೆಯಿಂದ ರಕ್ಷಿಸಲು ದಪ್ಪನೆಯ ಪ್ಲಾಸ್ಟಿಕ್ ಚೀಲದೊಳಗೆ ಭದ್ರಪಡಿಸಿದ್ದರು. ಈಗ ಗಂಡು ಕಾಗೆಯೂ ಹಿಂದೇಟು ಹಾಕಿತು. ಅಷ್ಟರೊಳಗೆ ಹಮಾಲನೋರ್ವನು ಆ ದಿಕ್ಕಿನಿಂದ ಹೊರಟಾಗ, ಕಾಕದಂಪತಿ, 'ಒಳಗೆ ಪ್ರವೇಶವಿಲ್ಲ' ಎಂಬ ನಾಮಫಲಕದ ಮೇಲೆ ಕುಳಿತು, ವಿರಮಿಸುತ್ತ ಮುಂದೇನು? ಎಂಬ ವಿಚಾರ ವಿಮರ್ಶೆ ನಡೆಸಿದವು. ಹೊಲಿಗೆ ಬಿಚ್ಚುವದೊಂದೇ ಮಾರ್ಗ! ಎಂಬ ನಿರ್ಧಾರಕ್ಕೆ ಬಂದವು. ಪತ್ನಿ ಹೊಲಿಗೆಯ ದಾರದ ಒಂದೊಂದೇ ಎಳೆಯನ್ನು ವಿಂಗಡಿಸಿ ಹರಿಯಲಾರಂಭಿಸಿತು. ದಣಿದಾಗ, ಪತಿ ಅದನ್ನು ಬದಿಗೆ ಸರಿಸಿ, ತಾನು ಆ ಕೆಲಸವನ್ನು ಮುಂದುವರಿಸಿದ. ಚುಂಚು ಹೋಗುವಷ್ಟು ಪ್ರವೇಶ ದ್ವಾರ ನಿರ್ಮಾಣವಾದ ಕ್ಷಣ, ಪತಿ ಪತ್ನಿ, ಕೊಕ್ಕಿನಲ್ಲಿ ಹಿಡಿಸುವಷ್ಟು ಪುರಿಯನ್ನು ತುಂಬಿಕೊಂಡು ಮಕ್ಕಳಿಗೆ ಗುಟುಕು ಕೊಡಲು ಪಲಾಯನ ಮಾಡಿದವು. ಅವುಗಳ ಸಂಸಾರವನ್ನು ನೋಡುವ ಆಸೆಯಾದರೂ, ದೂರದಿಂದ ಸೀಟಿ ಹಾಕುತ್ತ ಟ್ರೇನು ಬರಲಾರಂಭಿಸಿತ್ತು. ಇನ್ನೆರಡು ಗಂಟೆ-ವಿಳಂಬವಾಗಿ ಬರಬಾರದಿತ್ತೇ!- ಎಂದು ಮರುಗುತ್ತ ಸೀಟಿನಲ್ಲಿ ಸ್ಥಾಪಿತನಾದೆ. ಟ್ರೇನು ಚಲಿಸಲಾರಂಭಿಸಿದಾಗ, ಬೇರೆ ಕಾಗೆಗಳಿಗೂ ಅವು ತಮ್ಮ ಶ್ರಮದ ಲಾಭ ಮಾಡಿಕೊಟ್ಟವೇ, ಇಲ್ಲವೆ 'ನಮ್ಮ ಶೋಧದ ಲಾಭ ನಮಗೇ ಇರಲಿ' ಎಂದು ತೀರ್ಮಾನಿಸಿದವೇ? ಎಂಬುದನ್ನು ತಿಳಿಯಲಾರದೇ ಚಡಪಡಿಸಿದೆ.

ನಸುಕಿನಲ್ಲಿ ಒಮ್ಮೆ ತಿರುಗಾಟಕ್ಕೆ ಹೊರಟಾಗ, ಮಲ್ಲೇಶ್ವರದ ಅಪಾರ್ಟ್‌ಮೆಂಟಿನೆದುರು

ಯುವತಿಯೋರ್ವಳು ಕೈಯಲ್ಲಿದ್ದ ಪೊಟ್ಟಣವೊಂದನ್ನು ಕಸದ ತೊಟ್ಟಿಗೆ ಧೊಪ್! ಎಂದು ಎಸೆದು, ಲಗುಬಗೆಯಿಂದ ಮನೆ ಸೇರಿದಳು. ಹಿಂದಿನ ರಾತ್ರೆ ಮಾಡಿದ ಮೀನು ಮಾಂಸದ ಭೋಜನದ ಅವಶೇಷಗಳಿರಬೇಕೆಂದುಕೊಂಡೆ. ರಾತ್ರಿಯಿಡೀ ಹಸಿದುಕೊಂಡಿದ್ದ ಕಾಕರಾಜನು, ಕ್ಷಣಾರ್ಧದಲ್ಲಿ ಆ ಪೊಟ್ಟಣವೆತ್ತಿಕೊಂಡು ಹತ್ತಿರದ ಮರವೇರಿ ಕುಳಿತು ಬಿಚ್ಚಲು ಪ್ರಾರಂಭಿಸಿತು. ಪ್ಲಾಸ್ಟಿಕ್ ಕವರಿನ ಬಾಯನ್ನು ಗಂಟುಹಾಕಿ ಬಿಗಿಯಲಾಗಿತ್ತು. ಕಾಗೆಗೆ ಪ್ರತಿಸ್ಪರ್ಧಿಗಳು ಆಗಮಿಸುವದಕ್ಕೂ ಪೂರ್ವದಲ್ಲಿ ತಿಂಡಿಯನ್ನು ತಿಂದು ತೇಗಬೇಕೆಂಬ ತವಕ. ಆದರೆ ರಕ್ತದ ವಾಸನೆ ಹೊತ್ತ ಪೊಟ್ಟಣ ಕೈಗೆ ಎಟುಕುತ್ತಿಲ್ಲ! ಎರಡೂ ಪಂಜಗಳಿಂದ ಪೊಟ್ಟಣವನ್ನು ರೆಂಬೆಗೆ ಬಡಿಯಿತು. ಊಹೂಂ! ಪೊಟ್ಟಣ ಜಗ್ಗುತ್ತಿಲ್ಲ. ಈಗ ಪೊಟ್ಟಣವನ್ನು ರೆಂಬೆಗೆ ಒತ್ತಿಹಿಡಿದು, ಕೊಕ್ಕಿನಿಂದ ಕುಕ್ಕಿ ಕುಕ್ಕಿ ಗಂಟನ್ನು ಬಿಡಿಸುವಲ್ಲಿ ಕೊನೆಗೊಮ್ಮೆ ಯಶಸ್ವಿಯಾಯಿತು. ಆದರೆ ಚೀಲದ ಅಂತರಾಳದಲ್ಲಿ ರಕ್ತಸಿಕ್ತ ಹತ್ತಿಯ ಪ್ಯಾಡ್‌ಗಳಿದ್ದವಷ್ಟೇ. ಅವನ್ನು ಕೊಕ್ಕಿನಿಂದ ಬಿಡಿಸಿದಾಗ, ತಾನು ಮೋಸ ಹೋದದ್ದು ಅರಿವಾಯಿತು. ಅವನ್ನೆಲ್ಲ ನಡುರಸ್ತೆಯಲ್ಲಿ ಚಲ್ಲಾಪಿಲ್ಲಿಯಾಗಿ ಚೆಲ್ಲಿ, ಶುದ್ಧಮೋಸ! ಎಂದು ಕುರುಗುಡುತ್ತ, ಕೊಕ್ಕಿನ ಶುದ್ಧೀಕರಣಕ್ಕೆ ಪ್ರಾರಂಭಿಸಿತು. ಮರದ ತೊಗಟೆಗೆ ಏಕ ಪ್ರಕಾರವಾಗಿ ಒರೆಸಿತು. ಈ ನಡುವೆ ತನ್ನನ್ನೇ ನೋಡುತ್ತ ನಿಂತ ಕುತೂಹಲಿ ಬಾಲಕನ ಮೇಲೂ ಗಲೀಜಾದ ಹತ್ತಿಯ ಚೂರನ್ನು ಕೊಡವಿ, ಎಲ್ಲೋ ಹಾರಿ ಹೋಯಿತು. ಕುಮಾರಿಯ ಮೇಲಿನ ಕೋಪವನ್ನು ಯಾವನೋ ದಾರಿಹೋಕನ ಮೇಲೆ ಹೇತುಹಾಕಿ ತೀರಿಸಿಕೊಂಡಿರಬಹುದೇ? ಎಂಬ ಶಂಕೆಗೆ ಉತ್ತರ ಸಿಗಲಿಲ್ಲ. ಋತುಮತಿಯ ಪ್ಯಾಡ್‌ಗಳನ್ನು ಪರಿಶೀಲಿಸಿದ ತಪ್ಪಿಗೆ ಅದು, ಹತ್ತಿರದ ಕೊಳಕ್ಕೆ ಹೋಗಿ ಆ ಮೈಕೊರೆಯುವ ಚಳಿಯಲ್ಲೇ, ತಣ್ಣೀರಿನ ಸ್ನಾನಮಾಡಿ ಮಡಿಯಾಗಿದ್ದರೆ ಆಶ್ಚರ್ಯವಿಲ್ಲ!

ಕಳ್ಳಪಾಲಿನಲ್ಲಿ ಕಾಗೆ ಪಾಲು

ಕರಾವಳಿಯ ಕಡಲ ಮೀನುಗಾರರಿಗೂ, ಅಲ್ಲಿಯ ಮತ್ಸ್ಯಾಹಾರಿ ಬ್ರಾಹ್ಮಣರಿಗೂ 'ಕಳ್ಳಪಾಲಿ'ನ ಒಡಂಬಡಿಕೆ ತುಂಬ ಹಿಂದಿನಿಂದ ನಡೆದು ಬಂದ ಪರಿಪಾಠ. ಕಡಲಿನಿಂದ ದಣಿದು ಹಿಂದಿರುಗಿದ ಅಂಬಿಗರಿಗೆ ಮೈಕೈ ನೋವನ್ನು ನಿವಾರಿಸಿಕೊಳ್ಳಲು ಔಷಧವಾದ 'ಕಳ್ಳು' (ಹೆಂಡ) ಬೇಕೇ ಬೇಕು. ಕುಡಿಯಲು ಮುಂಗಡ ಹಣವನ್ನು ಒದಗಿಸುವ "ಒಡೆದಿರಿ"ಗೆ ಕಾಸನ್ನು ಹಿಂದಿರುಗಿಸುವ ಬದಲಾಗಿ ಸಿಕ್ಕ ಮೀನಿನ ಪಾಲನ್ನು ಪ್ರತಿದಿನವೂ ಕೊಡಲಾಗುತ್ತದೆ. ಕೊಡುವದು, ತಿನ್ನುವದು, ಎಲ್ಲವೂ ಕಳ್ಳರೀತಿಯಿಂದ ನಡೆಯುವದರಿಂದ ಇದಕ್ಕೆ ಕಳ್ಳಪಾಲು ಎಂದು ಅನ್ವರ್ಥಕ ಹೆಸರು ಬಂದಿರಲೂ ಸಾಕು—ಕಳ್ಳಿನ ಪಾಲು ಎಂಬುದನ್ನು ಮರೆತರೆ. ಈ ಕಳ್ಳ ವ್ಯಾಪಾರದ ಗುಟ್ಟನ್ನು ನಮ್ಮ ಜಾಣ ಕಾಗೆ ಅರಿತುಕೊಂಡಿದೆ. ಅದರ ಸಂಪೂರ್ಣ ಲಾಭ ಪಡೆಯದೇ ಇದ್ದೀತೇ? ಈ ವ್ಯವಹಾರ ನೆರೆಹೊರೆಯವರಿಗೆ ಅರಿವಾಗದಂತೆ ನಸುಗತ್ತಲಿನಲ್ಲಿ ನಡೆದರೂ, ಶೇಖರಿಸಿದ ಮೀನರಾಶಿಯ ಸುಳಿವು ಕಾಗಣ್ಣನಿಗೆ ತಿಳಿದೇ ಹೋಗುತ್ತದೆ. ಅವನು ಕಳ್ಳ ಹೆಜ್ಜೆ ಹಾಕುತ್ತ ಅರೆ ತೆರೆದ ಮನೆಬಾಗಿಲಿನ ಸಂದಿಯಿಂದಲೂ, ಕಿಟಕಿಯಿಂದಲೂ

ಒಳಸೇರಿ, ಒಂದೆರಡು ಮೀನನ್ನು ಕೊಕ್ಕಿನಲ್ಲಿ ಕಚ್ಚಿಹಿಡಿದು ತನ್ನ ಕಳ್ಳಪಾಲಿನೊಂದಿಗೆ ಪಲಾಯನ ಮಾಡದೇ ಇರಲಾರ. ಇಂದಿನ ದಿನಗಳಲ್ಲಿ ಅತ್ಯಾಧುನಿಕ ಯಂತ್ರಚಾಲಿತ ಪರ್ಸೀನ್ ನಾವೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮೀನುಗಾರಿಕೆ ಪ್ರಾರಂಭಿಸಿದ್ದರಿಂದ, ಕಾಗೆಯ ಬಳಗದ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಿದೆ. ಈಗ 'ಕಳ್ಳಪಾಲಿ'ನಲ್ಲಿ ಅದಕ್ಕೆ ವಿಶ್ವಾಸವಿಲ್ಲ. ಬದಲಿಗೆ ವಿಮಾಕಂಪನಿಯವರು, ರಾಷ್ಟ್ರೀಕೃತ ಬ್ಯಾಂಕಿನವರು, ಹಾತೊರೆಯುವ ನಿರಂತರ ಆದಾಯದಂತೆ 'ನಿರಂತರ ಪಾಲಿ'ನಲ್ಲಿ ಅಚಲವಾದ ವಿಶ್ವಾಸವನ್ನು ತಾಳಿದೆ. ಕಡಲಿಗೆ ಹೋದ ನಾವೆಗಳು ಮತ್ಸ್ಯರಾಶಿಯೊಂದಿಗೆ ಹಿಂದಿರುಗುವ ವೇಳಾಪತ್ರಿಕೆ, ಕಾಗಣ್ಣನಿಗೆ ಕಂಠಪಾಠವಾಗಿದೆ. ಅವು ಇನ್ನೂ ಧಕ್ಕೆಗೆ ಬಂದು ಹತ್ತುವ ಮೊದಲೇ, ತನ್ನ ಸಂಗಡಿಗರು, ಸಹಪಾಠಿಗಳು, ಸೋದರ ಸೋದರಿಯರು, ನೆಂಟರಿಷ್ಟರೆಲ್ಲ ಬಂದು ಕಾದು ಕುಳಿತುಕೊಳ್ಳುವಂತೆ ನೋಡಿಕೊಳ್ಳುತ್ತಾನೆ. ತಮ್ಮ ನಿರಂತರ ಪಾಲನ್ನು ಕಚ್ಚಿಕೊಂಡು ಕ್ಷಣಾರ್ಧದಲ್ಲಿ ಇಡೀ ಬಳಗ ಮಾಯವಾಗಿ ಬಿಡುವದು. ಇಷ್ಟಾಗಿಯೂ ಭೋಜನದ ತೃಪ್ತಿ ದೊರೆಯದೆ, ನಾವಿಕರು ತ್ಯಜಿಸಿದ ಬೆಲೆಬಾರದ ಮೀನನ್ನು ಅವು ತಮ್ಮವನ್ನಾಗಿ ಮಾಡಿಕೊಂಡರೆ, ಯಾರ ಆಕ್ಷೇಪಣೆಯೂ ಇರುವದಿಲ್ಲ!

ಬೃಹತ್ ಪ್ರಮಾಣದಲ್ಲಿ ದೊರೆತ ಮೀನುಗಳನ್ನು ಠೋಕ ವ್ಯಾಪಾರಿಗಳು ಖರೀದಿಸಿ, ಲಾರಿಗಳಲ್ಲಿ ತುಂಬಿ, ವಿದೇಶ ನಿರ್ಯಾತಕ್ಕೆ ಮುಂಬಯಿ, ಮಲ್ಪೆ, ಕೊಚೀನ್‌ಗಳಿಗೆ ಕಳಿಸುವದು ವಾಡಿಕೆ. ಈ ಲಾರಿಗಳು ಹೆದ್ದಾರಿಗಳ ಮೇಲೆ ವೇಗವಾಗಿ ಓಡುವಾಗ, ಕಾಗೆಗಳು ಹಾರಿ ಬಂದು ಲಾರಿಗಳ ಮೇಲೆ ಜಿಗಿದು, ತಮ್ಮ ಅಚ್ಚುಮೆಚ್ಚಿನ ಮೀನುಗಳನ್ನು ಯಥೇಚ್ಛವಾಗಿ ಮೆದ್ದು, ಸ್ವಸ್ಥಾನಕ್ಕೆ ಮರಳುವವು. ಅಬ್ಬರದ ಗಾಳಿ, ಸುಂಟರಗಾಳಿಗಳಿಂದ ಕಡಲು ಅಲ್ಲೋಲ ಕಲ್ಲೋಲವಾದಾಗ, ಮೀನುಗಾರಿಕೆ ಸ್ಥಗಿತವಾದಾಗಲೂ ಕಾಕಕೋಟಿಯ ಮತ್ಸ್ಯಭೋಜನಕ್ಕೆ ಕೊರತೆಯಾಗದು! ಮಾರಲಾಗದ, ಮಿಕ್ಕಿ ಉಳಿದ ಮೀನನ್ನು ಉಪ್ಪು ಸೇರಿಸಿ ಒಣಗಿಸುತ್ತಾರೆ. ವಿಸ್ತಾರವಾದ ಕಡಲ ತೀರದಲ್ಲಿ ಹರವಿ ಒಣಹಾಕಿದ ಆ ರಾಶಿಯನ್ನು ಸಂರಕ್ಷಿಸುವದು ಸುಲಭವಲ್ಲ. ಇದನ್ನರಿತ ಕಾಕವರ್ಗ, ಸುಲಭದಲ್ಲಿ ತನ್ನ ಆಯ್ಕೆಯ ಮೀನನ್ನು ಹೆಕ್ಕಿ ಹೆಕ್ಕಿ ತಿನ್ನುವದು. ಒಂದು ಬಿಡಿಕಾಸು ವೆಚ್ಚಮಾಡದೇ ತನ್ನ ಇಷ್ಟದ ಆಹಾರದ ನಿರಂತರ ಪಾಲಿನ ವ್ಯವಸ್ಥೆ ಮಾಡಿಕೊಂಡ ಈ ಪಕ್ಷಿಸಂಕುಲದ ಬುದ್ಧಿಮತ್ತೆಯನ್ನು ಧೀಮಂತನೆಂದು ಹೆಮ್ಮೆಪಡುವ ಮಾನವನೂ ಮೆಚ್ಚಿಕೊಳ್ಳಬೇಕು!

ಮಹಾನಗರದ ಕಾಗೆಗಳು 'ನಿರಂತರ ಪಾಲಿ'ಗೆ ತಮ್ಮವೇ ಉಪಾಯಗಳನ್ನು ಜಾರಿಗೆ ತಂದಿವೆ. ಇಂದಿನ ದಿನಗಳಲ್ಲಿ ನಾಗರಿಕರು ತಾವು ಬಳಸುವ ಸಾಮಗ್ರಿಗಳಿಗಿಂತ ಕಸದ ತೊಟ್ಟಿಗೆ ಸೇರಿಸುವದೇ ಜಾಸ್ತಿ ಅಲ್ಲವೇ? ಅಂತೆಯೇ ಕಸದ ವ್ಯಾಪಾರಿಗಳ ಸಂಖ್ಯೆ ಹೆಚ್ಚುತ್ತಲಿದೆ. ಒಬ್ಬಾತ ಬಂದು ದೊಡ್ಡ ಕೈಚೀಲದಲ್ಲಿ ಖಾಲಿಬಾಟ್ಲಿ, ಡಬ್ಬಿ, ಧಾತುವಿನ ಚೂರು ಪಾರು ಒಯ್ದರೆ, ಇನ್ನೊಬ್ಬಾಕೆ ಕೇವಲ ಪ್ಲಾಸ್ಟಿಕ್ ಸಾಮಗ್ರಿಯನ್ನು ಬೇರ್ಪಡಿಸಿಕೊಂಡು ಹೋಗುವಳು. ರದ್ದಿ ಕಾಗದದ ಎಲ್ಲ ತರದ ಕಾಗದಗಳನ್ನು ಒಯ್ಯುವ. ಮಾನವನ ಆಸೆಗಳೆಲ್ಲ ಪೂರೈಸಿದ ಬಳಿಕ ಬೀದಿನಾಯಿಗಳು ತೊಟ್ಟಿಗಳಲ್ಲಿ ತಮ್ಮ ಆಳ್ವಿಕೆ ಪ್ರಾರಂಭಿಸುತ್ತವೆ. ಕಸದಲ್ಲಿ ಸಿಕ್ಕಿಕೊಂಡ ತಂಗುಳ

ಬ್ರೆಡ್, ಅನ್ನ, ಹಳಸಿದ ಆಹಾರವನ್ನೆಲ್ಲ ಕಚ್ಚಾಡಿ ಮುಗಿಸುತ್ತವೆ. ನಂತರ ಬೇಡವಾದ ಬೀಡಾಡಿ ದನಕರುಗಳ ಆಗಮನವಾಗುತ್ತದೆ. ಅವಂತೂ ಹೊಟ್ಟೆಗಿಲ್ಲದೇ ಬಳಲುವದರಿಂದ ಶಾಕಾಹಾರ-ಮಾಂಸಾಹಾರ ವೆಂಬ ಭೇದವಿಲ್ಲದೇ ಸಿಕ್ಕಿದ್ದನ್ನು ಧ್ವಂಸಮಾಡುವವು. ನಂತರ ಬರುವ ಕತ್ತೆಗಳು ಏನು ಜಗಿದು ನುಂಗಿಯಾವು, ಏನಿಲ್ಲ ಎಂದು ಹೇಳುವಂತಿಲ್ಲ. ಈಗ, ಆಚೆ ಈಚೆ ಮರಗಳ ಮೇಲೆ ಕಾದು ಕುಳಿತ ಕಾಗೆಗಳು, ತಮ್ಮ ಬಂಧು ಬಳಗಕ್ಕೆ ಆಹಾರದ ಸುಳಿವನ್ನು ಕೂಗಿ ಕೂಗಿ ನೀಡುತ್ತ, ತೊಟ್ಟಿಯಲ್ಲಿ ಈ ಮೊದಲು ಭೇಟಿ ನೀಡಿ ಹೋದ ಪ್ರಾಣಿವರ್ಗದಿಂದ ಬಳಸಲಾಗದ ಅಥವಾ ಅವಕ್ಕೆ ಎಟುಕದ ಅನೇಕಾನೇಕ ಚೂರುಪಾರು, ಹುಳು ಹುಪ್ಪಡಿಗಳನ್ನೆಲ್ಲ ನುಂಗಿ ಸ್ವಚ್ಛಮಾಡುತ್ತವೆ. ಇವೆಲ್ಲ ತಮ್ಮ ಸ್ವಾರ್ಥಸಾಧಿಸುತ್ತಿದ್ದರೂ ಮಾನವಜಗತ್ತಿಗೆ ಉಪಕಾರ ಮಾಡುತ್ತವೆ ಎಂಬ ಮಾತನ್ನೂ ಮರೆಯುವಂತಿಲ್ಲ.

ದೊಡ್ಡ ಪಟ್ಟಣಗಳಲ್ಲಿ ಹೆಸರಿಗಾದರೂ ಕಸಕಡ್ಡಿ ಎತ್ತಿಹಾಕುವ ಪೌರಕಾರ್ಮಿಕ ವ್ಯವಸ್ಥೆ ಇದ್ದರೆ, ಸಣ್ಣ ಊರು, ಹಳ್ಳಿಗಳಲ್ಲಿ ಅದೂ ಇರುವದಿಲ್ಲ. ಆದ್ದರಿಂದ ಎಲ್ಲಿ ನೋಡಿದರೂ



ಇಂದಿನಿಂದ ನಾನೂ ಸ್ವತಂತ್ರ!

ತಿಪ್ಪೆರಾಶಿಗಳು ತಾಂಡವವಾಡುತ್ತಿರುತ್ತವೆ. ಇದನ್ನರಿತ ಕಾಕಕೋಟಿ, ದೇವರ ದೂತರಂತೆ ಹಾರಿ ಬಂದು ಕೊಳೆಯುವ ತಿಪ್ಪೆರಾಶಿಯನ್ನೆಲ್ಲ ಕೆದಕಿ ಕ್ರಿಮಿ-ಕೀಟ, ಕೊಳೆಯುತ್ತಿರುವ ಜೈವಿಕ ಸಾಮಗ್ರಿಯನ್ನು ತಿಂದು ಹಾಕಿ ಊರ ಸ್ವಚ್ಛತೆಯನ್ನು ಕಾಯುತ್ತಿರುತ್ತದೆ. ಈ ಮೇರೆಯರಿಯದ ಸೇವೆಗಾಗಿ ಕಾಕವೃಂದವನ್ನು ಆಗೀಗ ಸತ್ಕರಿಸುವ ಬದಲಾಗಿ, ಅವು ತಿಪ್ಪೆಯ ಕೊಳೆಯನ್ನೆಲ್ಲ ಊರ ತುಂಬ ಹರಡುತ್ತವೆ ಎಂದು ಸ್ವಾರ್ಥಿ ಮನುಷ್ಯರು, ಕಾಯಂ ಆಪಾದಿಸುತ್ತಿರುತ್ತಾರೆ. ನಗರಗಳ ಪೌರ ಕಾರ್ಮಿಕರಂತೆ ಕಾಗೆಗಳು ಒಂದೇ ಒಂದು ತಿಂಗಳು ಸಂಪು ಹೂಡಿದರೆ, ಊರೆಲ್ಲ ನಾರುತ್ತ ಸಾಂಕ್ರಾಮಿಕ ರೋಗಗಳು ತೀವ್ರವಾಗಿ ಹರಡುತ್ತಿದ್ದವು ಎಂಬುದರ ಅರಿವು ಆಗುತ್ತಿತ್ತು. ಪ್ರವಾಸಿ ತಾಣಗಳಲ್ಲೆಲ್ಲ ಮೋಜಿಗಾಗಿ ಬಂದವರು, ಪಂತಿಮಾಡಿ, ಊಟಮಾಡಿ ಪರಿಸರವನ್ನೆಲ್ಲ ಎಷ್ಟೊಂದು ಕಲುಷಿತಗೊಳಿಸುತ್ತಾರೆಂಬ ಮಾತು ಗೊತ್ತಿದ್ದದ್ದೇ! ಪಾಪ, ಕಾಗೆಗಳು ಅಲ್ಲಿಯೂ ಹಾರಿಬಂದು, ಸಿಕ್ಕಾಪಟ್ಟೆ ತಿಂದು ಚೆಲ್ಲಿದ ಆಹಾರದ ಚೂರುಗಳನ್ನು ತಿಂದು ಸ್ಥಳವನ್ನು ಚೊಕ್ಕಟಗೊಳಿಸುತ್ತವೆ. ರಂಗನತಿಟ್ಟು, ಕನ್ನಂಬಾಡಿ, ಕೊಕ್ಕರೆ ಬೆಳ್ಳೂರು ಮುಂತಾದ ಸ್ಥಳಗಳಿಗೆ ಭೇಟಿ ಕೊಟ್ಟವರಿಗೆ ಈ ಮಾತಿನ ಅರಿವಾಗದೇ ಇರದು. ಹಿಮಾಚಲ ಪ್ರದೇಶದ ಅತಿ ಎತ್ತರದ ಕುಫ್ರಿಯ ಸುಂದರ ತಾಣಕ್ಕೆ ದೇಶದ ವಿವಿಧ ಭಾಗಗಳಿಂದ ಪ್ರವಾಸಿಗಳು ವಿಹಾರಕ್ಕೆ ಬರುತ್ತಿರುತ್ತಾರೆ. ಆದರೆ ಅವರು ಬಿಟ್ಟು ಹೋದ ಬೆಟ್ಟದಷ್ಟು ತಿಪ್ಪೆರಾಶಿ ಎತ್ತುವವರು ಯಾರು ಎಂದು ಒಬ್ಬರೂ ತಲೆ ಕೆಡಿಸಿಕೊಳ್ಳುವದಿಲ್ಲ. ಪುಣ್ಯಕ್ಕೆ ಅಲ್ಲಿ ಕಾಯಂ ನೆಲೆಸಿದ ಕಾಕಸಂಸಾರಗಳು ಈ ಜವಾಬ್ದಾರಿಯನ್ನು ಹೊತ್ತಿವೆ. ಈ ನಿರಂತರ ಸೇವೆಗೆ ಅವು ಸಂಬಳ ಬೇಡುವದಿಲ್ಲ, ಸಮವಸ್ತ್ರ ಕೇಳುವದಿಲ್ಲ, ಸರಕಾರಿ ಗೃಹ ಸೌಕರ್ಯಕ್ಕಾಗಿ ಹಾತೊರೆಯುವುದಿಲ್ಲ. ಸಂಪು ಹೂಡುವದೇ ಇಲ್ಲ! ನಿಜಕ್ಕೂ ತ್ಯಾಗಿಗಳು. ಇದನ್ನು ಸ್ಮರಿಸಿಕೊಂಡಾಗ ನಮ್ಮ ಸ್ವಾತಂತ್ರ್ಯ ಚಳುವಳಿಯನ್ನೇ ನೆಪಮಾಡಿಕೊಂಡು ಸಾರ್ವಜನಿಕ ಸವಲತ್ತುಗಳನ್ನು ಸೂರೆಗೊಳ್ಳುತ್ತಿರುವ 'ತ್ಯಾಗಿ'ಗಳು ಎಂಥ ಸ್ವಾರ್ಥಿಗಳು ಅನಿಸದೇ ಇರದು.

ಇಷ್ಟೆಲ್ಲ ಸೇವೆ ಸಲ್ಲಿಸುವ ತ್ಯಾಗಿಗಳನ್ನು ಅಂದದ ರಾಜ್ಯ ಸಿಂಗಪುರದಲ್ಲಿ ಮಾನವನ ಕಡುವೈರಿಗಳೆಂದು ಸಾರಲಾಗಿದೆ! ಏಕೆ ಗೊತ್ತೆ? ಅವು ಬಹುಮಹಡಿಯ ಸುಂದರ ಕಟ್ಟಡಗಳನ್ನೆಲ್ಲ ಹೊಲಸು ಮಾಡುತ್ತವಂತೆ. ಅಂತೆಯೇ ಅವನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಲು ಕೋವಿ ಪರಿಣತರನ್ನು ನೇಮಿಸಲಾಗಿದೆ! ಸದ್ಯ ಈ ಯೋಜನೆ ಇನ್ನೂ ಭಾರತಕ್ಕೆ ಬಂದಿಲ್ಲ. ಕಾಗೆಗಳ ಪುಣ್ಯ ಎನ್ನುವುದಕ್ಕಿಂತ ನಮ್ಮೆಲ್ಲರ ಅದೃಷ್ಟ ಚೆನ್ನಾಗಿದೆ ಎನ್ನುವದು ಸಮಂಜಸವಲ್ಲವೇ?

❑

29-424-2

'ಪ್ರಿಸಮ್' ಕನ್ನಡ ಪ್ರಕಟಣೆಗಳು

ಸಾಹಿತ್ಯ / ವಿಚಾರ

1.	ಶತಮಾನದ ಸಣ್ಣಕತೆಗಳು / ಸಂ: ಎಸ್. ದಿವಾಕರ್	400/-
2.	ಕೆ. ಸದಾಶಿವ: ಸಮಗ್ರ ಕತೆಗಳು	120/-
3.	ಮಾಸ್ತಿ : ಮೂವತ್ತು ಕತೆಗಳು / ಸಂ: ಯಶವಂತ ಚಿತ್ತಾಲ	150/-
4.	ನೆನಪಿನ ಗಣಿಯಿಂದ / ಗೋಪಾಲಕೃಷ್ಣ ಅಡಿಗ (ಅನುಭವ ಕಥನ)	110/-
5.	ಮರೆಯಬಾರದ ಹಳೆಯ ಕತೆಗಳು / ಸಂ: ಡಾ।। ಗಿರಡ್ಡಿ ಗೋವಿಂದರಾಜ	200/-
6.	ಜಿ. ಎಸ್. ಸದಾಶಿವ: ಇದುವರೆಗಿನ ಕತೆಗಳು	125/-
7.	ಅವಳ ಕತೆಗಳು / ಸಂ: ಡಾ।। ಜಿ. ಎಸ್. ಆಮೂರ	150/-
8.	ನಗೆಗಾರ ರಾ.ಶಿ. / ಸಂ: ಅಪರಂಜಿ ಶಿವು	120/-
9.	ಶೋಧ : ಪತ್ತೇದಾರಿ ಕತೆಗಳು / ಸಂ: ದಿ।। ಎಂ. ಎಸ್. ಕೆ. ಪ್ರಭು	135/-
10.	ಜಗತ್ತಿನ ಅತಿಸಣ್ಣ ಕತೆಗಳು / ಆಯ್ಕೆ, ಅನುವಾದ: ಎಸ್. ದಿವಾಕರ್	100/-
11.	ಬಾಗಲೋಡಿ ದೇವರಾಯ : ಸಮಗ್ರ ಕತೆಗಳು	130/-
12.	ಸಾಹಿತ್ಯ ಮತ್ತು ಶಿಕ್ಷಣ / ಪ್ರೊ. ಜಿ. ವೆಂಕಟಸುಬ್ಬಯ್ಯ	75/-
13.	ಕನ್ನಡ ವೈಜ್ಞಾನಿಕ ಕತೆಗಳು / ಸಂ: ಸುಭಾಷಿಣಿ	80/-
14.	ಶತಮಾನದ ನೀಳ್ಗತೆಗಳು / ಸಂ: ಡಾ।। ನಟರಾಜ ಹುಳಿಯಾರ್ (ಅಚ್ಚಿನಲ್ಲಿ)	

ವಿಜ್ಞಾನ ಪ್ರಕಟಣೆಗಳು

1.	ಬಾಹ್ಯಾಕಾಶಕ್ಕೊಂದು ಸೇತುಬಂಧ / ಜಿ. ಆರ್. ಹತ್ವಾರ್	80/-
2.	ಕಣ್ಣುಗಳು / ಪ್ರೊ. ಡಿ. ಆರ್. ಬಳೂರಗಿ	35/-
3.	ಆಕಾಶರತ್ನಗಳು / ಅನು: ನಾಗೇಶ್ ಹೆಗಡೆ	35/-
4.	ನೀವೂ ವಿಜ್ಞಾನ ಪ್ರದರ್ಶನ ಏರ್ಪಡಿಸಿ ಭಾಗ - 1 ವಿಜ್ಞಾನ ಪ್ರದರ್ಶನಗಳು / ಪ್ರೊ. ಡಿ. ಆರ್. ಬಳೂರಗಿ	32/-
5.	ಭಾಗ - 2 ವಿಜ್ಞಾನ ಪ್ರದರ್ಶನಗಳು / ಪ್ರೊ. ಡಿ. ಆರ್. ಬಳೂರಗಿ	32/-
6.	ನೀನೇ ಮಾಡಿ ನೋಡಿ ಕಲಿ	25/-
7.	ಅದ್ಭುತ ಜೀವಜಗತ್ತು	22/-
8.	ಅಂತರಿಕ್ಷದ ಕರೆ	40/-
9.	ಮಂಗಳನಲ್ಲಿ ಜೀವಶೋಧ / ನಾಗೇಶ ಹೆಗಡೆ	35/-
10.	ಇರುವೆಯ ಇರವು / ಡಾ।। ಕೃಷ್ಣಾನಂದ ಕಾಮತ್	35/-
11.	ಕಾಗೆಯ ಕಾಯಕ / ಡಾ।। ಕೃಷ್ಣಾನಂದ ಕಾಮತ್	35/-

ಬೆಂಗಳೂರಿನಂಥ ಪಟ್ಟಣದಲ್ಲಿ ಕುಳಿತು ಯಾವ ಪಕ್ಷಿಯ ಅಧ್ಯಯನ ಮಾಡಲು ಸಾಧ್ಯ? 'ಕಾಗೆ' ಸುಲಭವಾಗಿ ಸಿಗುವ ಹಕ್ಕಿ ಅದನ್ನೇ ತಮ್ಮ ಅಧ್ಯಯನಕ್ಕಾಗಿ ಉಪಯೋಗಿಸಿಕೊಂಡು ಬರೆದ ಕತೆ 'ಕಾಗೆಯ ಕಾಯಕ'

ತನ್ನ ವಿಭಿನ್ನ ವರ್ತನೆಯಿಂದ ಪಕ್ಷಿಲೋಕದಲ್ಲೇ ವಿಶಿಷ್ಟವೆನ್ನಿಸುವ ಈ ಪಕ್ಷಿಗೆ ತನ್ನದೇ ಆದ ನೀತಿ ನಿಯಮಗಳುಂಟು. ಅವುಗಳ ಆಡುಭಾಷೆ, ಸಂಗೀತ, ನೃತ್ಯ, ಜಾಣ್ಮೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಲೇಖಕರು 'ಇವೆಲ್ಲ ನನ್ನ ಸ್ವಾನುಭವ ಹಾಗೂ ನಾನು ಅರ್ಥೈಯಿಸಿಕೊಂಡದ್ದೇ ವಿನಃ ಕಾಗೆಗಳು ಬಂದು ಹೇಳಿದ್ದಲ್ಲ' ಎನ್ನುತ್ತಾರೆ.

'ಕಾಕರಾಜ'ನ ಚಮತ್ಕಾರಿಕ ಜೀವನ ಕುರಿತ ಈ ಪುಸ್ತಕ ಬಹುಶಃ ಕನ್ನಡದಲ್ಲಿಯೇ ಮೊಟ್ಟ ಮೊದಲ ಕೃತಿ.



ಪ್ರಿಸಮ್ ಬುಕ್ಸ್ ಪ್ರೈ ಲಿ.
ಬೆಂಗಳೂರು - 70

ISBN: 81-7286-142-7
ರೂ. 35/-